# KARNATAK UNIVERSITY, DHARWAD

No. KU-Syndicate/ Proceedings-24/2022-23/ A-53 Date: 01-09-2022

## "CONFIDENTIAL"

The Syndicate meeting was held on 20th **of August, 2022 at 11.30 am** in the Syndicate Hall, Administrative Building, Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Dr. Ramesh R. Kulkarni, K.U. Dharwad | Member |
| 3. | Smt. Hamsaveni N., Dharwad | Member |
| 4. | Dr. K.D. Haveripeth, Salakinakoppa, Dharwad | Member |
| 5. | Dr.(Smt). Kamala D. Dhawale, Dharwad | Member |
| 6. | Prof. M.K. Shaikh, Bhatkal | Member |
| 7. | Dr. (Smt). Vijayalaxmi M. Nayak, Honnavar | Member |
| 8. | Sri Jayaprakash S. Badami, Navalgund | Member |
| 9. | Sri. Prakash Rayakar, Hubballi | Member |
| 10. | Smt. Sneha Joshi, Bangalore | Member |
| 11. | Dr. Shantanagouda C. Jakkanagoudar, Shiggaon | Member |
| 12. | Sri. Sudhindra Deshpande, Dharwad | Member |
| 13. | Sri. Sandeep M. Budihal, Hubli | Member |
| 14. | Dr. B. Basavanagoud., K.U. Dharwad | Member |
| 15. | Dr. C. Krishnamurthy Registrar (Evaluation), K.U. Dharwad | Member |
| 16. | Dr.(Smt). A.N. Tamragundi, I/c Finance Officer, K.U. Dharwad | Special Invitee |
| 17. | Sri. Yashpal Kshirsagar, Registrar (Admn), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 17 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು 01:45ಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ ಸದಸ್ಯರಾಗಿ ನೇಮಕಗೊಂಡ ಡಾ(ಶ್ರೀಮತಿ). ವಿಜಯಲಕ್ಷ್ಮೀ ಎಂ. ನಾಯಕ, ಪ್ರಾಚಾರ್ಯರು ಇವರನ್ನು ಪರಿಚಯಿಸಿ, ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಡಾ. ಎಸ್. ಸಿ. ಜಕ್ಕನಗೌಡರ, ಸಿಂಡಿಕೇಟ ಸದಸ್ಯರು ದಿನಾಂಕ 30 ಜೂನ, 2022 ರಂದು ಹೊರಡಿಸಿರುವ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಭೆಗಳ ವೇಳಾಪಟ್ಟಿಯಂತೆ ಸಭೆಗಳು ಜರುಗುತಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಈ ವಿಷಯವಾಗಿ ಕುಲಸಚಿವರು ಸದರಿ ವೇಳಾಪಟ್ಟಿಯಂತೆ ಮುಂದಿನ ಸಭೆಗಳನ್ನು ನಡೆಸಲು ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ಸಿಂಡಿಕೇಟ ಸಭೆಯು 11:30 ಗಂಟೆಗೆ ಜರುಗಬೇಕಾಗಿದ್ದು ಅತಿಥಿ ಉಪನ್ಯಾಸಕರು ಹಾಗೂ ಸಹಾಯಕ ಉಪನ್ಯಾಸಕರುಗಳು ವಿಶ್ವವಿದ್ಯಾಲಯದಲ್ಲಿ ಸದ್ಯ ನೀಡುತ್ತಿರುವ ರೂ.24,000/- ರಿಂದ ರೂ.30,000/- ರವರೆಗೆ ಗೌರವಧನ ಅತ್ಯಂತ ಕಡಿಮೆಯಾಗಿದ್ದು ಅದನ್ನು ಹೆಚ್ಚಿಸುವಂತೆ ದಿನಾಂಕ. 11.08.2022 ರಿಂದ ಮುಷ್ಕರ ಮಾಡುತ್ತಿದ್ದು, ಸಿಂಡಿಕೇಟ ಸದಸ್ಯರಿಗೆ ಸಭೆಗೆ ಹಾಜರಾಗಲು ಅಡ್ಡಿಪಡಿಸಿದ್ದರಿಂದ ಸದರ ವಿಷಯವಾಗಿ ಚರ್ಚೆಯನ್ನು ಕೈಗೊಂಡು ಮುಂದಿನ ಸೂಕ್ತ ತೀರ್ಮಾನವನ್ನು ಕೈಗೊಳ್ಳುವುದಾಗಿ ಶ್ರೀ. ಸುಧೀಂದ್ರ ದೇಶಪಾಂಡೆ ಹಾಗೂ ಇತರೆ ಸಿಂಡಿಕೇಟ ಸದಸ್ಯರು

ಕುಲಸಚಿವರು ಕುಲಪತಿಗಳು

ಸದರಿ ಮುಷ್ಕರ ನಿರತ ಉಪನ್ಯಾಸಕರುಗಳಿಗೆ ವಿನಂತಿಸಿದಾಗ ಸಭೆಗೆ ಹಾಜರಾಗಲು ಅನುವು ಮಾಡಿಕೊಟ್ಟ ನಂತರ ಸಭೆಯು 01:45 ನಿಮಿಷಕ್ಕೆ ಪ್ರಾರಂಭಿಸಲಾಯಿತು.

ದಿನಾಂಕ 24.06.2022ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರ್ಣಿಸಲಾಯಿತು. ಅದಕ್ಕೆ ಸದಸ್ಯರೆಲ್ಲರು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

ದಿನಾಂಕ 15.07.2022ರ ಸಾಧಾರಣ ಸಿಂಡಿಕೇಟ ಸಭೆಯ ನಡಾವಳಿಗಳಯಲ್ಲಿ ನಿರ್ಣಯ ಸಂಖ್ಯೆ 11ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಲಾಯಿತು ಹಾಗೂ ಉಳಿದ ನಿರ್ಣಯಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

| ನಿರ್ಣಯ ಸಂಖ್ಯೆ | ದಾಖಲಾದ ನಿರ್ಣಯ | ತಿದ್ದುಪಡೆಯಾದ ನಿರ್ಣಯ |
|---|---|---|
| 11 | ಡಾ. ಬಿ. ಬಸವನಗೌಡ, ಡೀನರು, ವಿಜ್ಞಾನ ನಿಖಾಯ ಇವರ ಅಧ್ಯಕ್ಷತೆ ಸಮಿತಿಯು ಬಿ.ಎಸ್ಸಿ 3ನೇ ಸೆಮಿಸ್ಟರ್ ರಸಾಯನಶಾಸ್ತ್ರ ವಿಷಯದ ಮೌಲ್ಯಮಾಪನ ಕಾರ್ಯದಲ್ಲಿ ಆದ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸಿ ಸಲ್ಲಿಸಿದ ಮುಚ್ಚಿದ ಲಕೋಟೆಯಲ್ಲಿಯ ವರದಿಯನ್ನು ತೆರೆದು ಕುಲಂಕುಶವಾಗಿ ಚರ್ಚಿಸಿ ಪ್ರತಿಷತ 10% ರಷ್ಟು ತಪ್ಪು ಮೌಲ್ಯಮಾಪನ ಮಾಡಿರುವಂತಹ ಕಾಲೇಜುಗಳ ಪರೀಕ್ಷಕರುಗಳಿಗೆ ಹಾಗೂ ಮಾಡರೇಟರ್‌ಗಳಿಗೆ ಕಪ್ಪು ಪಟ್ಟಿಯಲ್ಲಿ ಸೇರಿಸುವಂತೆ, ಪ್ರತಿಷತ 10%ಕ್ಕಿಂತ ಹೆಚ್ಚು ತಪ್ಪು ಮೌಲ್ಯಮಾಪನ ಮಾಡಿರುವಂತಹ ಕಾಲೇಜುಗಳ ಪರೀಕ್ಷಕರುಗಳಿಗೆ ಹಾಗೂ ಮಾಡರೇಟರ್‌ಗಳಿಗೆ ಮರು ಮೌಲ್ಯಮಾಪನ ಮಾಡಲು ತಗುಲಿದ ವೆಚ್ಚವನ್ನು ಸಮನಾಗಿ ಹಂಚಿಕೆ ಮಾಡಿ ಒಟ್ಟು ಖರ್ಚು ವಿಶ್ವವಿದ್ಯಾಲಯಕ್ಕೆ ಭರಿಸಲು **ಹಾಗೂ ಪ್ರತಿಷತ 17%ಕ್ಕಿಂತ ಹೆಚ್ಚು ತಪ್ಪು ಮೌಲ್ಯಮಾಪನ** ಮಾಡಿರುವಂತಹ ಕಾಲೇಜುಗಳ ಪರೀಕ್ಷಕರುಗಳಿಗೆ ಹಾಗೂ ಮಾಡರೇಟರ್‌ಗಳಿಗೆ ಈ ವಿಶ್ವದ್ಯಾಲಯದ ಪರೀಕ್ಷಾ ಅನುಶಾಸನದ ಅನುಸಾರ ಪ್ರತಿ ಉತ್ತರ ಪತ್ರಿಕೆಗೆ ರೂ.5,000/- ಭರಿಸಲು ನಿರ್ದೇಶನ ನೀಡುವಂತೆ ಸಿಂಡಿಕೇಟ ಸಭೆಯು ಒಮ್ಮತದಿಂದ ಠರಾಯಿಸಿತು. | ಡಾ. ಬಿ. ಬಸವನಗೌಡ, ಡೀನರು, ವಿಜ್ಞಾನ ನಿಖಾಯ ಇವರ ಅಧ್ಯಕ್ಷತೆ ಸಮಿತಿಯು ಬಿ.ಎಸ್ಸಿ 3ನೇ ಸೆಮಿಸ್ಟರ್ ರಸಾಯನಶಾಸ್ತ್ರ ವಿಷಯದ ಮೌಲ್ಯಮಾಪನ ಕಾರ್ಯದಲ್ಲಿ ಆದ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸಿ ಸಲ್ಲಿಸಿದ ಮುಚ್ಚಿದ ಲಕೋಟೆಯಲ್ಲಿಯ ವರದಿಯನ್ನು ತೆರೆದು ಕೂಲಂಕುಶವಾಗಿ ಚರ್ಚಿಸಿ ಪ್ರತಿಶತ 10% ರಷ್ಟು ತಪ್ಪು ಮೌಲ್ಯಮಾಪನ ಮಾಡಿರುವಂತಹ ಕಾಲೇಜುಗಳ ಪರೀಕ್ಷಕರುಗಳಿಗೆ ಹಾಗೂ ಮಾಡರೇಟರ್‌ಗಳಿಗೆ ಕಪ್ಪು ಪಟ್ಟಿಯಲ್ಲಿ ಸೇರಿಸುವಂತೆ, ಪ್ರತಿಶತ 10%ಕ್ಕಿಂತ ಹೆಚ್ಚು ತಪ್ಪು ಮೌಲ್ಯಮಾಪನ ಮಾಡಿರುವಂತಹ ಕಾಲೇಜುಗಳ ಪರೀಕ್ಷಕರುಗಳಿಗೆ ಹಾಗೂ ಮಾಡರೇಟರ್‌ಗಳಿಗೆ ಮರು ಮೌಲ್ಯಮಾಪನ ಮಾಡಲು ತಗುಲಿದ ವೆಚ್ಚವನ್ನು ಸಮನಾಗಿ ಹಂಚಿಕೆ ಮಾಡಿ ಒಟ್ಟು ಖರ್ಚು ವಿಶ್ವವಿದ್ಯಾಲಯಕ್ಕೆ ಭರಿಸಲು **ಇಬ್ಬರು ಪರೀಕ್ಷಕರುಗಳ ಮೌಲ್ಯಮಾಪನದ ಅಂಕಗಳು 17 ಕ್ಕಿಂತ ಹೆಚ್ಚಾದರೆ ಅಂತಹ ಮೊದಲು ಮೌಲ್ಯಮಾಪನ ಮಾಡಿದ ಪರೀಕ್ಷಕರುಗಳಿಗೆ ಕ.ವಿ.ವಿ.** ಪರೀಕ್ಷಾ ಅನುಶಾಸನದ ಅನುಸಾರ ಪ್ರತಿ ಉತ್ತರ ಪತ್ರಿಕೆಗೆ ರೂ.5,000/- ಭರಿಸಲು ನಿರ್ದೇಶನ ನೀಡುವಂತೆ ಸಿಂಡಿಕೇಟ ಸಭೆಯು ಒಮ್ಮತದಿಂದ ಠರಾಯಿಸಿತು. |

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–02: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಹಾಗೂ ಅಧೀನ ಮಹಾವಿದ್ಯಾಲಯದ ಸಹಾಯಕ/ ಅತಿಥಿ ಉಪನ್ಯಾಸಕರುಗಳ ವಿವಿಧ ಬೇಡಿಕೆಗಳ ಕುರಿತು ಚರ್ಚಿಸುವ ಬಗ್ಗೆ.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಹಾಗೂ ಅಧೀನ ಮಹಾವಿದ್ಯಾಲಯದ ಸಹಾಯಕ/ ಅತಿಥಿ ಉಪನ್ಯಾಸಕರುಗಳು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಹಲವು ದಿನಗಳಿಂದ ಕವಿವಿ ಆಡಳಿತ ಕಟ್ಟಡದ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿರುತ್ತಾರೆ.

ಮೇಲ್ಕಾಣಿಸಿದ ಅಂಶಗಳ ಕುರಿತಂತೆ, ದಿನಾಂಕ 20.08.2022 ರಂದು ಜರುಗುವ ಸಿಂಡಿಕೇಟ ಸಭೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಹಾಗೂ ಅಧೀನ ಮಹಾವಿದ್ಯಾಲಯದ ಸಹಾಯಕ/ ಅತಿಥಿ ಉಪನ್ಯಾಸಕರುಗಳು ವಿವಿಧ ಬೇಡಿಕೆಗಳ ಕುರಿತು ಚರ್ಚಿಸಲು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ಮುಷ್ಕರ ನಿರತ ಉಪನ್ಯಾಸಕರುಗಳು ನೀಡಿದ 8 ಬೇಡಿಕೆಗಳನ್ನು ಕುಲಪತಿಗಳು ಸಭೆಯ ಮುಂದೆ ಪ್ರಸ್ತಾಪಿಸಿದರು. ಮೊದಲನೇಯದಾಗಿ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ ವೇತನಗಳ ಬಗ್ಗೆ ಪರಿಶೀಲಿಸಲಾಯಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 286 ಸಹಾಯಕ ಉಪನ್ಯಾಸಕರು ಹಾಗೂ 272 ಅತಿಥಿ ಉಪನ್ಯಾಸಕರುಗಳು ಕಾರ್ಯನಿರ್ವಹಿಸುತ್ತಿದ್ದು, ಸದ್ಯ ಯುಜಿಸಿ ಪ್ರೋಫೆಷನಲ್ ಉಪನ್ಯಾಸಕರುಗಳಿಗೆ ರೂ.30.000/– ಹಾಗೂ ನಾನ್ ಪ್ರೋಫೆಷನಲ್ ಉಪನ್ಯಾಸಕರುಗಳಿಗೆ ರೂ.28,000/– ಮತ್ತು ನಾನ್ ಯುಜಿಸಿ ಪ್ರೋಫೆಷನಲ್ ಉಪನ್ಯಾಸಕರುಗಳಿಗೆ ರೂ.26.000/– ಹಾಗೂ ನಾನ್ ಪ್ರೋಫೆಷನಲ್ ಉಪನ್ಯಾಸಕರುಗಳಿಗೆ ರೂ.24,000/– ಗಳನ್ನು ನೀಡಲಾಗುತ್ತಿರುವ ಬಗ್ಗೆ ಹಾಗೂ ರಾಜ್ಯದ ಇತರೇ ವಿಶ್ವವಿದ್ಯಾಲಯಗಳಲ್ಲಿ ನಿಗದಿಪಡಿಸಿದ ಗೌರವಧನಗಳನ್ನು ಸದಸ್ಯರೆಲ್ಲರು ಗಮನಿಸಿ ಕರ್ನಾಟಕ ವಿಶ್ವವಿದ್ಯಾಲಯವು ಕೆಲವೊಂದು ಬೇರೆ ವಿಶ್ವವಿದ್ಯಾಲಯಕಿಂತಲೂ ಹೆಚ್ಚು ಗೌರವಧನವನ್ನು ನೀಡುತ್ತಿರುವುದು ಪರಿಶೀಲಿಸಲಾಯಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ವ–ಹಣಕಾಸಿನಿಂದ ಪ್ರಾರಂಭಿಸಿದ ಕೋರ್ಸುಗಳು ಹೆಚ್ಚಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡಿಮೆ ಶುಲ್ಕದಲ್ಲಿ ಪ್ರವೇಶಗಳನ್ನು ನೀಡಲಾಗಿದ್ದು ಆಂತರಿಕ ಸಂಪನ್ಮೂಲದ ಕೊರತೆಯಾಗಿದ್ದು, ಈಗಿರುವ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಬಹುದಾಗಿದ್ದು, ಸರ್ಕಾರದಿಂದ ಈ ವಿಷಯವಾಗಿ ಹೆಚ್ಚುವರಿ ಅನುಧಾನ ನೀಡಿದಲ್ಲಿ ಮಾತ್ರ ಮುಂದಿನ ತಿಂಗಳಿನಿಂದ ಈ ಕೆಳಗಿನಂತೆ ಹೆಚ್ಚಿಸಲು ಕ್ರಮ ಜರುಗಿಸಬಹುದಾಗಿದೆ ಎಂದು ಚರ್ಚಿಸಲಾಯಿತು:

| • ಸಹಾಯಕ ಉಪನ್ಯಾಸಕರು | ಸದ್ಯ ನೀಡುತ್ತಿರುವ ಗೌರವ ಧನ | | ಪರಿಷ್ಕರಿಸಲು ಪ್ರಸ್ತಾಪಿಸಿದ ಗೌರವ ಧನ | |
|---|---|---|---|---|
| | ಯುಜಿಸಿ | ನಾನ್–ಯುಜಿಸಿ | ಯುಜಿಸಿ | ನಾನ್–ಯುಜಿಸಿ |
| ಪ್ರೋಫೆಷನಲ್ | ರೂ.30.000/– | ರೂ.26.000/– | ರೂ.34.000/– | ರೂ.30.000/– |
| ನಾನ್ ಪ್ರೋಫೆಷನಲ್ | ರೂ.28,000/– | ರೂ.24,000/– | ರೂ.32,000/– | ರೂ.28,000/– |
| • ಅತಿಥಿ ಉಪನ್ಯಾಸಕರು | ರೂ.18.000/– | ರೂ.16.000/– | ರೂ.20.000/– | ರೂ.18.000/– |

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-03: ವಿಷಯ-:** ಪೊಲೀಸ್ ಅಧೀಕ್ಷಕರು, (ಕೇಂದ್ರ ಸ್ಥಾನ), ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ದಿನಾಂಕ.17.02.2022 ರ ತಮ್ಮ ಪತ್ರದಲ್ಲಿ ಅಪರಾಧಿಕ ಕಾನೂನು ತಿದ್ದುಪಡಿ ಆಧ್ಯಾದೇಶ-1944 ರ 3 ನೇ ಕಲಂನ (1) ಮತ್ತು (2) ನೇ ಉಪ ಕಲಂ ಅಡಿಯಲ್ಲಿ ಡಾ.ಕೆ.ಎಮ್.ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರ ***ಸ್ವತ್ತುಗಳ ಜಪ್ತಿ ಆದೇಶಕ್ಕಾಗಿ ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಲು ಪ್ರಕರಣದ ತನಿಖಾಧಿಕಾರಿಯಾದ ಪೊಲೀಸ್ ನಿರೀಕ್ಷಕರು, ಧಾರವಾಡ ಎಸಿಬಿ ಪೊಲೀಸ್ ಠಾಣೆ, ರವರನ್ನು ಅಧಿಕಾರಗೊಳಿಸುವ ಆದೇಶವನ್ನು*** ಹೊರಡಿಸಬೇಕೆಂದು ವಿನಂತಿಸಿರುವುದನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:

ಪೊಲೀಸ್ ಅಧೀಕ್ಷಕರು, (ಕೇಂದ್ರ ಸ್ಥಾನ), ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ದಿನಾಂಕ.17.02.2022 ರ ತಮ್ಮ ಪತ್ರದಲ್ಲಿ ***ಪೊಲೀಸ್ ಇನ್ಸ್‌ಪೆಕ್ಟರ್,*** ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ, ***ಧಾರವಾಡ*** ಇವರ ***ದಿನಾಂಕ.12.01.2022*** ರ ಪತ್ರ ಮತ್ತು ***ಪೊಲೀಸ್ ಅಧೀಕ್ಷಕರು,*** ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ***ಬೆಳಗಾವಿ*** ಇವರ ***ದಿನಾಂಕ.29.01.2022*** ರ ಪತ್ರದ ***ಛಾಯಾ ಪ್ರತಿಗಳನ್ನು*** ಲಗತ್ತಿಸುತ್ತಾ ಧಾರವಾಡ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪ್ರಕರಣ ***ಸಂಖ್ಯೆ:10/2019 ಕಲಂ 13 (ಬಿ)*** ಭ್ರಷ್ಟಾಚಾರ ***ಪ್ರತಿಬಂಧಕ ಕಾಯ್ದೆ-1988*** ರಲ್ಲಿ ಪ್ರಕರಣದ ಆರೋಪಿತ ಸರ್ಕಾರಿ ಅಧಿಕಾರಿಯಾದ ***ಶ್ರೀ.ಕಲ್ಲಪ್ಪ ತಂದೆ ಮಹಾದೇವಪ್ಪ ಹೊಸಮನಿ, ಪ್ರೊಫೆಸರ್, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ*** ರವರ ವಿರುದ್ಧ ***ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಅಕ್ರಮವಾಗಿ ಸಂಪಾದಿಸಿದ ಬಗ್ಗೆ ದಿನಾಂಕ.11.06.2019*** ರಂದು ***ಪ್ರಕರಣವು*** ದಾಖಲಾಗಿ ***ತನಿಖೆಯಲ್ಲಿರುತ್ತದೆಂದು*** ಹೇಳಿ, ತನಿಖಾ ಸಮಯದಲ್ಲಿ ಆರೋಪಿತ ಅಧಿಕಾರಿ ಶ್ರೀ.ಕಲ್ಲಪ್ಪ ತಂದೆ ಮಹಾದೇವಪ್ಪ ಹೊಸಮನಿ ರವರು ಅಸಮತೋಲನ ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಧೃಡಪಟ್ಟಿದ್ದರಿಂದ ಆರೋಪಿತರು ಇವರ ವಿರುದ್ಧ ಬಾಕಿ ಇರುವ ಕಾನೂನು ಪ್ರಕ್ರಿಯ ಮುಕ್ತಾಯಗೊಳ್ಳುವವರೆಗೆ ಪರಭಾರೆ/ವಿಲೇವಾರಿ ಮಾಡುವುದನ್ನು ತಡೆಯಲು ಚರ ಹಾಗೂ ಸ್ಥಿರಾಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿರುತ್ತದೆಂದು ತಿಳಿಸಿ, ಅಪರಾಧಿಕ ಕಾನೂನು ತಿದ್ದುಪಡಿ ಆಧ್ಯಾದೇಶ-1944 ರ 3 ನೇ ಕಲಂನ (1) ಮತ್ತು (2) ನೇ ಉಪ ಕಲಂ ಅಡಿಯಲ್ಲಿ ಸದರಿಯವರ ***ಸ್ವತ್ತುಗಳ ಜಪ್ತಿ ಆದೇಶಕ್ಕಾಗಿ ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಲು ಪ್ರಕರಣದ ತನಿಖಾಧಿಕಾರಿಯಾದ ಪೊಲೀಸ್ ನಿರೀಕ್ಷಕರು, ಧಾರವಾಡ ಎಸಿಬಿ ಪೊಲೀಸ್ ಠಾಣೆ, ರವರನ್ನು ಅಧಿಕಾರಗೊಳಿಸುವ ಆದೇಶವನ್ನು*** ಹೊರಡಿಸಬೇಕೆಂದು ಕೋರಿರುತ್ತಾರೆ.

ಡಾ.ಕೆ.ಎಮ್.ಹೊಸಮನಿ, ಇವರು ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇಲ್ಲಿ ***ದಿನಾಂಕ.28.12.1998*** ರ ***ಈ ಕಚೇರಿ ಆದೇಶ ಸಂಖ್ಯೆ.ಕೆಯು/ಡಿಪಿಎಆರ್/ಎಸ್ಆರ್‌ಟಿ/98/5423*** ರ ಮೂಲಕ ***"ಪ್ರವಾಚಕ"*** ಹುದ್ದೆಗೆ ನೇಮಕಗೊಂಡು ಅದೇ ದಿನಾಂಕಂದು ಸೇವೆಗೆ ವರದಿ ಮಾಡಿಕೊಂಡಿದ್ದು, ಪ್ರಸ್ತುತ ***"ಪ್ರಾಧ್ಯಾಪಕ"*** ಎಂದು ಸೇವೆ ಸಲ್ಲಿಸುತ್ತಿದ್ದಾರೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ***ದಿನಾಂಕ.31.07.2018*** ರ ತಮ್ಮ ಪತ್ರದಲ್ಲಿ ಡಾ.ಕೆ.ಎಮ್.ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರು ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಬಗ್ಗೆ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿ ಸದರಿಯವರನ್ನು ಸೇವೆಯಿಂದ ಅಮಾನತ್ತಿನಲ್ಲಿಡಲು ಹಾಗೂ ಅವರ ಲೀನ್ ಅನ್ನು ಪ್ರಸ್ತುತ ಕರ್ತವ್ಯ ನಿರ್ವಹಿಸುವ ಸ್ಥಳದಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಬೇಕೆಂದು ಕೋರಿದ್ದಕ್ಕೆ ದಿನಾಂಕ.17.08.2019 ರಂದು ಜರುಗಿದ ಆಡಳಿತ ಮಂಡಳಿ ಸಭೆಯು ತನ್ನ ನಿರ್ಣಯ ಸಂಖ್ಯೆ.19 ರಲ್ಲಿ ಕೈಗೊಂಡ ನಿರ್ಣಯದ ಪ್ರಕಾರ ***ಭ್ರಷ್ಟಾಚಾರ ನಿಗ್ರಹ ದಳ (ACB) ಇಲಾಖೆಯಿಂದಲೆ ಪ್ರಕರಣದ ತನಿಖೆಯನ್ನು ಮುಂದುವರೆಸಬೇಕೆಂದು ದಿನಾಂಕ.16.09.2019 ರ ಈ ಕಚೇರಿ ಪತ್ರ ಸಂಖ್ಯೆ.ಕವಿವಿ/ಸಿಆಸುವಿ/ಶಿಕ್ಷಕ-2/2019/3457*** ರ ಮೂಲಕ ವಿನಂತಿಸಲಾಗಿದೆ ಮತ್ತು ಆ ವಿಷಯವನ್ನು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಇವರ ಗಮನಕ್ಕೆ ತಂದು ಮುಂದಿನ ಹಂತದ ಕ್ರಮಕ್ಕಾಗಿ ಸೂಕ್ತ ನಿರ್ದೇಶನ ನೀಡಬೇಕೆಂದು, ***ದಿನಾಂಕ.16.09.2019 ಈ ಕಚೇರಿ ಪತ್ರ ಸಂಖ್ಯೆ.ಕವಿವಿ/ಸಿಆಸುವಿ/ಶಿಕ್ಷಕ-2/2019/3468*** ರ ಮೂಲಕ ಕೋರಿದ್ದು ಇರುತ್ತದೆ.

ಮುಂದುವರೆದು, ಪೊಲೀಸ್ ಅಧೀಕ್ಷಕರು, (ಕೇಂದ್ರ ಸ್ಥಾನ), ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ದಿನಾಂಕ.17.02.2022 ರ ತಮ್ಮ ಪತ್ರದಲ್ಲಿ ಕೋರಿದ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರು, ಕಾನೂನು ಕೋಶ, ಕವಿವಿ, ಧಾರವಾಡ ಇವರ ಅಭಿಪ್ರಾಯ ಪಡೆಯಲಾಗಿ, ಕಾನೂನು ಸಲಹೆಗಾರರು ಈ ಕೆಳಗಿನಂತೆ ಅಭಿಪ್ರಾಯಿಸಿರುತ್ತಾರೆ.

ಕುಲಸಚಿವರು ಕುಲಪತಿಗಳು

*"It is stated that, the ACB has registered a case at crime No.10/19 against Shri.K.M.Hosamani, Professor, Department of Chemistry for the offences punishable under section 13 (B) of P.C Act etc. List of the properties of the employee is also produced. Now the learned ADGP has applied for a letter of authorization authorizing P.I. ACB for filing application before Special Court, praying for attachment of said properties before Judgement.*

*In view of criminal law amendment to Sec 3 (1) and Sec 18 (A) of P.C.Act, the authority may issue authorization letters to P.I. ACB Dharwad authorizing him to file application affidavit etc to apply for interim orders as prayer for.*

*However, the concerned Authority/Section is at liberty to take its independent decision in accordance with law."*

ಈ ಹಿನ್ನಲೆಯಲ್ಲಿ, ಪೊಲೀಸ್ ಅಧೀಕ್ಷಕರು, (ಕೇಂದ್ರ ಸ್ಥಾನ), ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರ ದಿನಾಂಕ.17.02.2022 ರ ತಮ್ಮ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸುವ ಬಗ್ಗೆ ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಪೊಲೀಸ್ ಅಧೀಕ್ಷಕರು, (ಕೇಂದ್ರ ಸ್ಥಾನ), ಅಪರ ಪೊಲೀಸ್ ಮಹಾನಿರ್ದೇಶಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ದಿನಾಂಕ.17.02.2022 ರ ತಮ್ಮ ಪತ್ರದಲ್ಲಿ ವಿನಂತಿಸಿದಂತೆ ಅಪರಾಧಿಕ ಕಾನೂನು ತಿದ್ದುಪಡಿ ಆಧ್ಯಾದೇಶ–1944 ರ 3 ನೇ ಕಲಂನ (1) ಮತ್ತು (2) ನೇ ಉಪ ಕಲಂ ಅಡಿಯಲ್ಲಿ ಡಾ.ಕೆ.ಎಮ್.ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರ ಸ್ವತ್ತುಗಳ ಜಪ್ತಿ *ಆದೇಶಕ್ಕಾಗಿ ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಲು ಪ್ರಕರಣದ ತನಿಖಾಧಿಕಾರಿಯಾದ ಪೊಲೀಸ್ ನಿರೀಕ್ಷಕರು, ಧಾರವಾಡ ಎಸಿಬಿ ಪೊಲೀಸ್ ಠಾಣೆ, ರವರನ್ನು ಅಧಿಕಾರಗೊಳಿಸಲು ಆದೇಶ ಹೊರಡಿಸಬೇಕೆಂದು ಸಿಂಡಿಕೇಟ ಠರಾಯಿಸಿತು.*

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-04: ವಿಷಯ-**: ಮಾರ್ಚ/ಎಪ್ರೀಲ್, 2022 ರಲ್ಲಿ ಜರುಗಿದ ಬಿ.ಎಸ್ಸಿ ಅಪರಾಧಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆ ಬದಲಾಗಿ ಬಿ.ಎ ಅಪರಾಧಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ಬಗ್ಗೆ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣೆ:**

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇದರಲ್ಲಿ ದಿನಾಂಕ 21.04.2022 ರಂದು ಜರುಗಿದ ಬಿ.ಎಸ್ಸಿ 1ನೇ ಸೆಮೆಸ್ಟರ್ (NEP) ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ವಿಷಯದ ಪರೀಕ್ಷೆಯಲ್ಲಿ ಓ.ಇ.ಸಿ. ಪ್ರಶ್ನೆ ಪತ್ರಿಕೆಯನ್ನು ಬಿ.ಎಸ್ಸಿ ಬದಲು ಬಿ.ಎ ಪ್ರಥಮ ಸೆಮೆಸ್ಟರ್ ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಹಂಚಿರುತ್ತಾರೆ. ಈ ವಿಷಯವಾಗಿ ಬಿ.ಎಸ್ಸಿ/ಬಿ.ಎ ಪಠ್ಯಕ್ರಮವು ಒಂದೇ ಇದ್ದರು ಕೂಡ ಪ್ರಶ್ನೆ ಪತ್ರಿಕೆಗಳು ಬೇರೆ ಇರುತ್ತವೆ. ಕಾರಣ ಕೋರ್ಸ (ತರಗತಿ) ಅನುಗುಣವಾಗಿ ಪ್ರಶ್ನೆ ಪತ್ರಿಕೆಗಳನ್ನು ವಿತರಣೆ ಮಾಡಬೇಕಾಗಿದ್ದು ಕಡ್ಡಾಯವಾಗಿರುತ್ತದೆ.

ಮುಂದುವರೆದು, ಬಿ.ಎಸ್ಸಿ ಪ್ರಥಮ ವರ್ಷದ ಓ.ಇ.ಸಿ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡುವ ವೇಳೆಯಲ್ಲಿ ಬಿ.ಎ ಓ.ಇ.ಸಿ ಪ್ರಶ್ನೆ ಪತ್ರಿಕೆಯನ್ನು ನೀಡಿ ಉತ್ತರ ಪತ್ರಿಕೆಗಳನ್ನು ಮಾಡಿಸಲು ಬರುವುದಿಲ್ಲ ಕಾರಣ ಬಿ.ಎಸ್ಸಿ 1ನೇ ಸೆಮೆಸ್ಟರ್ ವಿಷಯವನ್ನು ಮರು ಪರೀಕ್ಷೆ ಜರುಗಿಸಬೇಕೆಂದು ಪ್ರಾಚಾರ್ಯರು ವಿನಂತಿಸಿಕೊಂಡಿರುತ್ತಾರೆ. ಅದರಂತೆ ಸದರ ವಿಷಯದ ಮರು ಪರೀಕ್ಷೆಯು ದಿನಾಂಕ: 30.06.2022 ರಂದು ಜರುಗಿಸಲಾಗಿರುತ್ತದೆ.

ಆದ್ದರಿಂದ, ಸದರ ವಿಷಯ ಕುರಿತು ಪರೀಕ್ಷಾ ಕಾರ್ಯ ನಿರ್ವಹಿಸುವ ವೇಳೆಯಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ No.GS03KUM2018 Dated: 03.07.2018 ರನ್ವಯ ನಿಯಮಾನುಸಾರ ಪರೀಕ್ಷಾ ವೆಚ್ಚವನ್ನು ಸಂಬಂಧಿಸಿದ ಸಿಬ್ಬಂದಿಗೆ ಭರಿಸುವ ಕುರಿತು ಆದೇಶಕ್ಕಾಗಿ ಮಂಡಿಸಲಾಗಿತ್ತು, ಅದರಂತೆ ಮಾನ್ಯ ಕುಲಪತಿಗಳ ಆದೇಶದಂತೆ ಪರೀಕ್ಷಾ ವೆಚ್ಚ ರೂ.12,197/-ದೊಂದಿಗೆ ದಂಡದ ಶುಲ್ಕ ವಿಧಿಸುವ ವಿಷಯವಾಗಿ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-05: ವಿಷಯ-:** ಬಿ.ಎಸ್ಸಿ (Hotel Management) AECC ಇಂಗ್ಲೀಷ ವಿಷಯಕ್ಕೆ Shalmala ಪಠ್ಯಕ್ರಮದ ಬದಲಾಗಿ Timeless Wisdom ಪಠ್ಯಕ್ರಮವನ್ನು ಭೋದಿಸಿದ ಬಗ್ಗೆ ಪರಿಶೀಲಿಸುವ ಕುರಿತು.

**ಟಿಪ್ಪಣೆ:**

ದಿನಾಂಕ 29.04.2022 ರಂದು ಜರುಗಿದ B.Sc (Hotel Management) Iನೇ ಸೆಮೆಸ್ಟರ್ AECC ಇಂಗ್ಲೀಷ (Code-121ENG041) ವಿಷಯ ಕುರಿತು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪರೀಕ್ಷೆ ಬರೆಯುವ ವೇಳೆಯಲ್ಲಿ ವಿದ್ಯಾರ್ಥಿಗಳು ನಮಗೆ ಭೋದನೆ ಮಾಡಿದ ಪಠ್ಯಕ್ರಮದಂತೆ ಪ್ರಶ್ನೆಗಳು ಇರುವುದಿಲ್ಲ ಆದ್ದರಿಂದ ನಾವು ಪರೀಕ್ಷೆಗೆ ಹಾಜರಾಗುವುದಿಲ್ಲ ಎಂದು ತಿಳಿಸಿ ಪರೀಕ್ಷೆಗೆ ಗೈರು ಹಾಜರಾಗಿರುತ್ತಾರೆ. ಈ ವಿಷಯವಾಗಿ ವಿದ್ಯಾರ್ಥಿಗಳು ಕ.ವಿ.ವಿ.,ಗೆ ಪತ್ರ ಬರೆದು ನಮಗೆ ಸಂಬಂಧಿಸಿದ ಶಿಕ್ಷಕ ಸಿಬ್ಬಂದಿಯ Shalmala ಪಠ್ಯಕ್ರಮದ ಬದಲಾಗಿ Timeless Wisdom ಪಠ್ಯಕ್ರಮದಂತೆ ಭೋದನೆ ಮಾಡಿರುತ್ತಾರೆ. ಇದರಂತೆ ಪಠ್ಯಕ್ರಮ ಬದಲಾಗಿದೆ ಎಂದು ಶಿಕ್ಷಕ ಸಿಬ್ಬಂದಿಯು ಹೇಳಿರುತ್ತಾರೆ. ಅದರಂತೆ ಮುಖ್ಯ ಅಧೀಕ್ಷಕರು ಸಹ ಕ.ವಿ.ವಿ.,ಗೆ ಪತ್ರ ಬರೆದು B.Sc (Hotel Management) AECC ಇಂಗ್ಲೀಷ ವಿಷಯಕ್ಕೆ Shalmala ಪಠ್ಯಕ್ರಮವನ್ನು ಭೋದನೆ ಮಾಡುವ ಬದಲು Timeless Wisdom ಪಠ್ಯಕ್ರಮ ಭೋದಿಸಿರುತ್ತಾರೆ ಎಂದು ತಿಳಿಸಿ ಸದರ ವಿಷಯದ ಮರುಪರೀಕ್ಷೆ ಜರುಗಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಆದ್ದರಿಂದ ಸಂಬಂಧಿಸಿದ ಮಹಾವಿದ್ಯಾಲಯದಲ್ಲಿ ಭೋದಕ ಸಿಬ್ಬಂದಿಯು 'Shalmala' ಪಠ್ಯಕ್ರಮದಂತೆ ಭೋದಿಸುವ ಬದಲಾಗಿ 'Timeless Wisdom' ಪಠ್ಯಕ್ರಮದಂತೆ ಭೋದಿಸಿದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ವಿರೋದ ಮಾಡಿದ ವಿಷಯವಾಗಿ ಸದರ ವಿಷಯದ ಮರುಪರೀಕ್ಷೆಯನ್ನು ದಿನಾಂಕ 30.06.2022 ರಂದು ಜರುಗಿಸಲಾಗಿದೆ. ಈ ವಿಷಯ ಕುರಿತು ಪರೀಕ್ಷಾ ಕಾರ್ಯ ನಿರ್ವಹಿಸುವ ವೇಳೆಯಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ No.GS03KUM2018 Dated: 03.07.2018 ರನ್ವಯ ನಿಯಮಾನುಸಾರ ಪರೀಕ್ಷಾ ವೆಚ್ಚವನ್ನು ಸಂಬಂಧಿಸಿದ ಸಿಬ್ಬಂದಿಗೆ ಭರಿಸುವ ಕುರಿತು ಆದೇಶಕ್ಕಾಗಿ ಮಂಡಿಸಲಾಗಿತ್ತು ಅದರಂತೆ ಮಾನ್ಯ ಕುಲಪತಿಗಳ ಆದೇಶದಂತೆ ಪರೀಕ್ಷಾ ವೆಚ್ಚ ರೂ.7221/-ದೊಂದಿಗೆ ದಂಡದ ಶುಲ್ಕ ವಿಧಿಸುವ ವಿಷಯವಾಗಿ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–06: ವಿಷಯ–:** ವಿಶ್ವವಿದ್ಯಾಲಯವನ್ನು ಸ್ಥಳೀಯ ನ್ಯಾಯಾಲಯಗಳು ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಪ್ರತಿನಿಧಿಸುವ ವಕೀಲರಯಾದಿಗೆ ಸೇರ್ಪಡಿಸಲು ಮಾನ್ಯ ಸಿಂಡಿಕೇಟ್ ಸದಸ್ಯರು ಸೂಚಿಸಿದ ವಕೀಲರ ಹೆಸರುಗಳನ್ನು ಅನುಮೋದಿಸುವ ಕುರಿತು.

ಟಿಪ್ಪಣಿ :

I. ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವ ವಕೀಲರ ಯಾದಿಯನ್ನು ಪರಿಷ್ಕರಿಸುವ ಕುರಿತಂತೆ, ದಿನಾಂಕ : 15.07.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಈ ಕೆಳಗೆ ಕಾಣಿಸಿದಂತೆ ಠರಾವಿಸಿತು.

**ಠರಾವು ಸಂಖ್ಯೆ. 33 ದಿನಾಂಕ : 15.07.2022**

"ಸ್ಥಳೀಯ ನ್ಯಾಯಾಲಯಗಳು ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ವಿಶ್ವವಿದ್ಯಾಲಯದ ವಿರುದ್ಧ/ಪರ ದಾಖಲಿಸಿದ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಕೀಲರ ಪಟ್ಟಿಯನ್ನು ಪರಿಷ್ಕರಿಸುವ ಕುರಿತು ಚರ್ಚಿಸಲಾಗಿ ಪಟ್ಟಿಯಲ್ಲಿರುವ ಅ.ನಂ. 03 ಶ್ರೀ ಬಸವರಾಜ ಗೊಡಚಿ, 05 ಶ್ರೀ ವಿರೇಶ ಬೂದಿಹಾಳ ಮತ್ತು ಶ್ರೀ ರಾಮಚಂದ್ರ ಎ. ಮಾಲಿ ಇವರುಗಳ ಹೆಸರುಗಳನ್ನು ಒಪ್ಪಲಾಯಿತು ಹಾಗೂ ಇದರೊಂದಿಗೆ ಬೇರೆ ನುರಿತ ಅರ್ಹ ವಕೀಲರ ಹೆಸರುಗಳನ್ನು ಸೂಚಿಸುವಂತೆ ಸಿಂಡಿಕೇಟ್ ಸದಸ್ಯರುಗಳಿಗೆ ಕೋರಲಾಯಿತು. ಈ ಎಲ್ಲ ಹೆಸರುಗಳನ್ನು ಪಡೆದು ಮುಂದಿನ ಸೂಕ್ತ ಕ್ರಮ ಜರುಗಿಸಲು ನಿರ್ಣಯಿಸಲಾಯಿತು. ಮುಂದುವರೆದು, ಈಗಿರುವ ವಿಶ್ವವಿದ್ಯಾಲಯದ ಒಟ್ಟು ಪ್ರಕರಣಗಳು ಯಾವ ಹಂತದಲ್ಲಿವೆ ಎಂಬ ಬಗ್ಗೆ ವಿವರಗಳನ್ನು ಕುಲಸಚಿವರು ಹಾಗೂ ಕುಲಪತಿಗಳ ಅವಗಾಹನೆಗಾಗಿ ಸಲ್ಲಿಸಲು ಕಾನೂನು ಕೋಶದ ವಿಭಾಗಕ್ಕೆ ಸೂಚಿಸಲು ನಿರ್ಣಯಿಸಿತು."

II. ಪ್ರಸ್ತುತ, ಸಿಂಡಿಕೇಟ್‌ನಿಂದ ಅನುಮೋದನೆಗೊಂಡ ಚಾಲ್ತಿಯಲ್ಲಿರುವ ವಿಶ್ವವಿದ್ಯಾಲಯವನ್ನು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಪ್ರತಿನಿಧಿಸುತ್ತಿರುವ ವಕೀಲರಯಾದಿಗೆ ಮೇಲ್ಕಾಣಿಸಿದ ಸಿಂಡಿಕೇಟ್ ಠರಾವುನನ್ವಯ ಶ್ರೀ ಬಸವರಾಜ ಗೊಡಚಿ, ಶ್ರೀ ವಿರೇಶ ಬೂದಿಹಾಳ ಮತ್ತು ಶ್ರೀ ರಾಮಚಂದ್ರ ಎ. ಮಾಲಿ ಇವರುಗಳ ಹೆಸರುಗಳನ್ನು ಸೇರ್ಪಡೆಗೊಳಿಸಿದ ನಂತರ ಯಾದಿಯು ಈ ಕೆಳಗೆ ಕಾಣಿಸಿದಂತೆ ಇರುತ್ತದೆ.

1) ಶ್ರೀ ಕೆ.ಎಲ್. ಪಾಟೀಲ
2) ಶ್ರೀ ಎಂ.ಎಸ್. ಹಿರೇಮಠ
3) ಶ್ರೀ ಶ್ರೀಕಾಂತ ಪಾಟೀಲ
4) ಶ್ರೀ ಎಂ.ಬಿ. ಗುಂಡವಾಡೆ
5) ಶ್ರೀ ವೆಂಕಟೇಶ ಎಂ. ಖಾರ್ವಿ
6) ಶ್ರೀ ಅಜಯ ಯು. ಪಾಟೀಲ
7) ಶ್ರೀ ಬಸವರಾಜ ಗೊಡಚಿ
8) ಶ್ರೀ ವಿರೇಶ ಬೂದಿಹಾಳ
9) ಶ್ರೀ ರಾಮಚಂದ್ರ ಎ. ಮಾಲಿ

III. ಪ್ರಸ್ತುತ ಸಿಂಡಿಕೇಟ್‌ನಿಂದ ಅನುಮೋದನೆಗೊಂಡ ಚಾಲ್ತಿಯಲ್ಲಿರುವ ವಿಶ್ವವಿದ್ಯಾಲಯವನ್ನು ಜಿಲ್ಲಾ ಸಿವ್ಹಿಲ್ / ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣಾ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಕೀಲರ ಯಾದಿ ಈ ಕೆಳಗಿನಂತಿದೆ :

1) ಶ್ರೀ ಕೆ.ಎಲ್. ಪಾಟೀಲ
2) ಶ್ರೀ ಸತೀಶ ಪಾಟೀಲ
3) ಶ್ರೀ ಎಂ.ಎಸ್. ಹೆಡೆ
4) ಶ್ರೀಮತಿ ಎಸ್.ಎಂ. ಪಾಟೀಲ
5) ಶ್ರೀ ಎಂ.ಸಿ.ಬಂಡಿ
6) ಶ್ರೀ ನಾಗರಾಜ ಸಿ. ಕಲ್ಲೂರಿ
7) ಶ್ರೀ ಎಂ.ಎಂ. ಹಿರೇಮಠ
8) ಶ್ರೀ ಎಸ್.ಆರ್. ಮೇಟಿ

IV. ಪ್ರಸ್ತುತ ಸಿಂಡಿಕೇಟ್ ಠರಾವು ಸಂ. 33, ದಿನಾಂಕ 15.07.2022 ರನ್ವಯ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಹಾಗೂ ಜಿಲ್ಲಾಸಿವ್ಹಿಲ್ / ಗ್ರಾಹಕರ / ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣಾ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಕೀಲರಯಾದಿಗೆ ಸೇರ್ಪಡಿಸುವಂತೆ ಕೆಲ ವಕೀಲರ ಹೆಸರುಗಳನ್ನು ಸೂಚಿಸಿದ್ದು ಅವರ ವಿವರ ಈ ಕೆಳಗೆ ಕಾಣಿಸಿದಂತೆ ಇರುತ್ತದೆ.

ಕುಲಸಚಿವರು

ಕುಲಪತಿಗಳು

| ಕ್ರ ಸಂ. | ಮಾನ್ಯ ಸಿಂಡಿಕೇಟ್ ಸದಸ್ಯರ ಹೆಸರು | ಸೇರ್ಪಡಿಸಲು ಸೂಚಿಸಿದ ವಕೀಲರ ಹೆಸರು | ಉಚ್ಚ ನ್ಯಾಯಾಲಯ | ಜಿಲ್ಲಾ/ಸಿವಿಲ್ /ಗ್ರಾಹಕರ/ಕೌಟುಂಬಿಕನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |
|---|---|---|---|---|
| 1) | ಡಾ. ಆರ್.ಆರ್.ಕುಲಕರ್ಣಿ<br>ಡಾ. ಬಿ. ಬಸನಗೌಡ | ಶ್ರೀ ಸಚಿನ್ ಚಿದಂಬರ ಕುಲಕರ್ಣಿ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ | -- |
| 2) | ಶ್ರೀಮತಿ ಹಂಸವೇಣಿ.ಎನ್.<br>ಡಾ. ಬಿ. ಬಸನಗೌಡ<br>ಡಾ. ಆರ್.ಆರ್.ಕುಲಕರ್ಣಿ | ಶ್ರೀಮತಿ ವೀಣಾ ಎಂ. ಗೌಡಪ್ಪನವರ | -- | ಜಿಲ್ಲಾ/ಸಿವಿಲ್ /ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |
| 3) | ಶ್ರೀ ಜಯಪ್ರಕಾಶ ಬದಾಮಿ | ಶ್ರೀ ಬಿ.ಎಸ್. ಕುಲಕರ್ಣಿ | -- | -do- |
| 4) | ಶ್ರೀಮತಿ ಸ್ನೇಹಾ ಜೋಶಿ | ಶ್ರೀ ಗಿರೀಶ ಎಸ್. ಹುಲಮನಿ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ | ಜಿಲ್ಲಾ/ಸಿವಿಲ್ /ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |

ಮಾನ್ಯ ಸಿಂಡಿಕೇಟ್ ಸದಸ್ಯರು ಸೂಚಿಸಿದ ವಕೀಲರ ಹೆಸರುಗಳನ್ನು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವ ವಕೀಲರ ಯಾದಿಯಲ್ಲಿ ಸೇರ್ಪಡಿಸುವ ಕುರಿತಂತೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ವಿಶ್ವವಿದ್ಯಾಲಯವನ್ನು ಸ್ಥಳೀಯ ನ್ಯಾಯಾಲಯಗಳು ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಪ್ರತಿನಿಧಿಸಲು ಮಾನ್ಯ ಸಿಂಡಿಕೇಟ್ ಸದಸ್ಯರು ಸೂಚಿಸಿದ ವಕೀಲರ ಹೆಸರುಗಳನ್ನು ಹಾಗೂ ದಿನಾಂಕ 15.7.2022 ರಂದು ಜರುಗಿದ ಸಿಂಡಿಕೇಟ್ ಠರಾವು ಸಂಖ್ಯೆ 33 ರಲ್ಲಿ ಸೂಚಿಸಿದ 03 ಜನ ವಕೀಲರನ್ನು ಒಳಗೊಂಡಂತೆ ಈ ಕೆಳಗಿನಂತೆ ಯಾದಿಯನ್ನು ಸಿಂಡಿಕೇಟ ಅನುಮೋದಿಸಿತು.**

| ಕ್ರ.ಸಂ. | ವಕೀಲರ ಹೆಸರು | ನ್ಯಾಯಾಲಯಗಳು |
|---|---|---|
| 1) | ಶ್ರೀ ಬಸವರಾಜ ಗೊಡಚಿ<br>ನ್ಯಾಯವಾದಿಗಳು, ಧಾರವಾಡ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ |
| 2) | ಶ್ರೀ ವಿರೇಶ ಬೂದಿಹಾಳ<br>ನ್ಯಾಯವಾದಿಗಳು, ಧಾರವಾಡ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ |
| 3) | ಶ್ರೀ ರಾಮಚಂದ್ರ ಎ. ಮಾಲಿ<br>ನ್ಯಾಯವಾದಿಗಳು, ಧಾರವಾಡ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ |
| 4) | ಶ್ರೀ. ಕೆ. ಎಲ್. ಪಾಟೀಲ,<br>ನ್ಯಾಯವಾದಿಗಳು, ಧಾರವಾಡ | 1) ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಹಾಗೂ<br>2) ಜಿಲ್ಲಾ/ಸಿವಿಲ್/ಗ್ರಾಹಕರ/ಕೌಟುಂಬಿಕ ನ್ಯಾಯಾಲಯ |
| 5) | ಶ್ರೀ ಸಚಿನ್ ಚಿದಂಬರ ಕುಲಕರ್ಣಿ<br>ನ್ಯಾಯವಾದಿಗಳು, ಧಾರವಾಡ | ಉಚ್ಚ ನ್ಯಾಯಾಲಯ, ಧಾರವಾಡ ಪೀಠ |
| 6) | ಶ್ರೀಮತಿ ವೀಣಾ ಎಂ. ಗೌಡಪ್ಪನವರ<br>ನ್ಯಾಯವಾದಿಗಳು, ಧಾರವಾಡ | ಜಿಲ್ಲಾ/ಸಿವಿಲ್/ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |
| 7) | ಶ್ರೀ ಬಿ.ಎಸ್. ಕುಲಕರ್ಣಿ<br>ನ್ಯಾಯವಾದಿಗಳು, ಧಾರವಾಡ | ಜಿಲ್ಲಾ/ಸಿವಿಲ್ /ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |
| 8) | ಶ್ರೀ ಗಿರೀಶ ಎಸ್. ಹುಲಮನಿ | 1) ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಹಾಗೂ<br>2) ಜಿಲ್ಲಾ/ಸಿವಿಲ್ /ಗ್ರಾಹಕರ/ಕೌಟುಂಬಿಕ ನ್ಯಾಯಾಲಯ ಹಾಗೂ ವಿಚಾರಣೆ ನ್ಯಾಯಾಲಯಗಳು |

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-07: ವಿಷಯ-:** ನ್ಯಾಯಾಲಯದಿಂದ ಇತ್ಯರ್ಥಗೊಂಡ ಪ್ರಕರಣಗಳಲ್ಲಿಯ ಆದೇಶಗಳನ್ನು ಜಾರಿಗೊಳಿಸುವ ಅಥವಾ ಮೇಲ್ಮನವಿ ಸಲ್ಲಿಸುವ ಸಂಬಂಧದಲ್ಲಿ ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇತರೇ ಕ್ಲಿಷ್ಟ ಹಾಗೂ ಸಂಕೀರ್ಣ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಯಾದಿಯಲ್ಲಿರುವ ಮತ್ತು ಯಾದಿಗೆ ಹೊರತಾದ ಪರಿಣಿತ ವಕೀಲರಿಂದ ಕಾನೂನು/ಎರಡನೇ ಕಾನೂನು ಅಭಿಪ್ರಾಯ ಪಡೆದ ಸಂದರ್ಭದಲ್ಲಿ ಪಾವತಿಸುವ ವೃತ್ತಿ ಶುಲ್ಕ ಪರಿಷ್ಕರಿಸುವ ಕುರಿತು.

ಟಿಪ್ಪಣಿ :

1) ಈ ಹಿಂದಿನಿಂದಲೂ ವಿಶ್ವವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಗುತ್ತಿಗೆದಾರರು ಮುಂತಾದವರು ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸಿದ ಹಾಗೂ ಇತ್ಯರ್ಥಗೊಂಡ ಪ್ರಕರಣಗಳಲ್ಲಿಯ ಆದೇಶಗಳನ್ನು ಜಾರಿಗೊಳಿಸುವ ಅಥವಾ ಮೇಲ್ಮನವಿ ಸಲ್ಲಿಸುವಸಂಬಂಧದಲ್ಲಿ ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇನ್ನಿತರ ಯಾವುದೇ ಕ್ಲಿಷ್ಟ ಹಾಗೂ ಸಂಕೀರ್ಣ ಪ್ರಕರಣಗಳಲ್ಲಿ ಕಾನೂನು/ಎರಡನೇಯ ಕಾನೂನು ಅಭಿಪ್ರಾಯ ಪಡೆಯುವ ಅವಶ್ಯಕತೆ ಉಂಟಾದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಯಾದಿಯಲ್ಲಿರುವ ವಕೀಲರುಗಳನ್ನೊಳಗೊಂಡಂತೆ ಅಂಥ ವಿಷಯಗಳಲ್ಲಿ ಪರಿಣಿತಿ ಹೊಂದಿದ ಯಾದಿಯಿಂದ ಹೊರತಾದ ವಕೀಲರಿಂದ ಕಾನೂನು ಅಭಿಪ್ರಾಯ ಪಡೆಯಲಾಗುತ್ತಿದೆ.

2) ಮೇಲ್ಕಾಣಿಸಿದ ಸಂದರ್ಭಗಳಲ್ಲಿ ವಕೀಲರಿಂದ ಪಡೆದ ಕಾನೂನು ಅಭಿಪ್ರಾಯಗಳಿಗೆ ಪ್ರಕರಣಗಳ ಕ್ಲಿಷ್ಟತೆ ಆಧರಿಸಿ ಸಿಂಡಿಕೇಟ್ ಠರಾವು ಸಂಖ್ಯೆ. 31 ದಿನಾಂಕ : 05.02.2008 ರನ್ವಯ ಸರಳವಾದ ಪ್ರಕರಣಗಳಲ್ಲಿ ರೂ. 250/- ಹಾಗೂ ಸಂಕೀರ್ಣ ಪ್ರಕರಣಗಳಲ್ಲಿ ರೂ. 500/- ವೃತ್ತಿ ಶುಲ್ಕ ನೀಡಲಾಗುತ್ತಿದೆ.

ಪ್ರಸ್ತುತ ಯುಸಿಕ್ ವಿಭಾಗದ ಜ್ಯೂನಿಯರ್ ಇಂಜನೀಯರ್ ಹುದ್ದೆ, ಸ್ನಾತಕೋತ್ತರ ಇಂಗ್ಲೀಷ ವಿಭಾಗದಲ್ಲಿಯ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ, ಘಟಕ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ CAS ಅಡಿ 10% ಬಡ್ತಿ ನೀಡುವ ವಿಷಯ ಮುಂತಾದ ಕ್ಲಿಷ್ಟ ಹಾಗೂ ಸಂಕೀರ್ಣ ವಿಷಯಗಳಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವೃತ್ತಿನಿರತರಾದ ಶ್ರೀ ಬಸವರಾಜ ಗೊಡಚಿ, ಶ್ರೀ ರಾಮಚಂದ್ರ ಎಂ. ಮಾಲಿ ಹಾಗೂ ಶ್ರೀ ವಿರೇಶ ಬೂದಿಹಾಳ ವಕೀಲರಿಂದ ಕಾನೂನು/ಎರಡನೇ ಕಾನೂನು ಅಭಿಪ್ರಾಯ ಪಡೆಯಲಾಗಿತ್ತು. ಈ ಸಂಬಂಧದಲ್ಲಿ ಸದರಿ ವಕೀಲರು ಪ್ರತಿ ಕಾನೂನು ಅಭಿಪ್ರಾಯಕ್ಕೆ ರೂ. 5000/- (ಐದು ಸಾವಿರ ಮಾತ್ರ) ವೃತ್ತಿ ಶುಲ್ಕ ಆಕರ ಮಾಡಿದ್ದಾರೆ. ದಿನಾಂಕ : 05.02.2008 ರಲ್ಲಿ ಸಿಂಡಿಕೇಟ್ ನಿಗದಿ ಪಡಿಸಿದ ಶುಲ್ಕ ಸುಮಾರು 14 ವರ್ಷಗಳ ಹಿಂದಿನದು ಇದ್ದು, ಬದಲಾದ ಸನ್ನಿವೇಶದಲ್ಲಿ ವೃತ್ತಿ ಶುಲ್ಕ ಪರಿಷ್ಕರಿಸುವ ಅಗತ್ಯತೆ ಕಂಡು ಬರುತ್ತದೆ. ಆದ್ದರಿಂದ ಸದರ ವಿಷಯವನ್ನು ಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ-08: ವಿಷಯ-**: ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತಂತೆ ದಿನಾಂಕ: 13.08.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯು ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 92 ಯುಎನ್‌ಇ 2022, ದಿನಾಂಕ 22.03.2022ರ ಪತ್ರದಲ್ಲಿ ತಿಳಿಸಿದಂತೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ Massive Online Open Course (MOOC) ಮತ್ತು FM Community Radio Station ಪ್ರಾರಂಭಿಸಲು M/S Hivision Technologies ಸಂಸ್ಥೆಯು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇ-ಸ್ಟುಡಿಯೋವನ್ನು ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಂಡು ಯುಜಿಸಿಯ ಮಾರ್ಗಸೂಚಿಯನ್ವಯ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ MOOC / Media Centre ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಿರುತ್ತಾರೆ.

ಅದರಂತೆ, ಕುಲಸಚಿವರ ಕಾರ್ಯಾಲಯದ ಪತ್ರ ಸಂ. ಕೆಯು/ಕು.ಕಾ/2021-22/ಎ-4, ದಿ. 18.04.2022 ರನ್ವಯ ಅವಶ್ಯಕತೆಗೆ ಅನುಗುಣವಾಗಿ ನಿರ್ದಿಷ್ಟತೆಗೆ ಅನುಬಂಧ-1 ಮತ್ತು 2 ರಲ್ಲಿ ಇದ್ದಂತೆ ದರಪಟ್ಟಿ (Quotation)ಯನ್ನು ಪೂರೈಸುವಂತೆ The Managing Director, Karnataka State Electronics Development Corporation Limited (KEONICS), 2nd Floor, TTMC 'A' Block, BMT Shatinagar, K.H.Road, Bengalru-560027 ಕೋರಿ ದಿನಾಂಕ 18.04.2022 ರಂದು ಪತ್ರ ಬರೆಯಲಾಗಿತ್ತು.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ದಿನಾಂಕ 18.04.2022ರ ಮೂಲಕ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ಕೆ.ಟಿ.ಪಿ.ಪಿ. ಕಾಯ್ದೆ 1999 ಕಲಂ 4ಜಿ ಅಡಿಯಲ್ಲಿ ಆದೇಶ ಸಂಖ್ಯೆ ಆಇ 652 ವೆಚ್ಚ-12/2021, ದಿನಾಂಕ 21.02.2022ರ ಅಡಿಯಲ್ಲಿ ಕಿಯೋಕಿನ್ಸ್ ಸಂಸ್ಥೆಗೆ ರಿಯಾಯಿತಿ ನೀಡಿ ಸರ್ಕಾರದ ಇಲಾಖೆಗಳು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟ ಗಣಕಯಂತ್ರ, ಸಿಸಿ ಟಿವಿ, ಬಯೋಮೆಟ್ರಿಕ್, ಕಂಪ್ಯೂಟರ್ ಲ್ಯಾಬ್ ಮತ್ತು ಇತರೆ ಎಲ್ಲಾ ರೀತಿಯ ಸೇವೆಗಳನ್ನು ನೇರವಾಗಿ ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯಬಹುದಾಗಿದೆಂದು ತಿಳಿಸಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಯುಜಿಸಿಯ ಮಾರ್ಗಸೂಚಿಯನ್ವಯ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ Massive Online Open Course (MOOC) Audio Video setup & FM Community Radio Station ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು KEONICS ಇವರು ಭಾಗ-A, B & C ಮತ್ತು A & B ದರಪಟ್ಟಿ (Quotation)ಗೆ ತಗಲುವ ವೆಚ್ಚವನ್ನು ಸರ್ಕಾರದ ಮಟ್ಟದಲ್ಲಿ ಹೊಂದಾಣಿಕೆ ಮಾಡಿ Massive Online Open Course (MOOC) Audio Video setup & FM Community Radio Stationನ್ನು ಅಳವಡಿಸಲು The Managing Director, Karnataka State Electronics Development Corporation Limited (KEONICS), Bengalru-560027 ಇವರಿಗೆ ಕೋರಿ ಕಚೇರಿ ಪತ್ರ ಸಂ. KU/Aca(S&T)/JS-416/MOOC FM/2022-23/60, ದಿ. 27.04.2022 ರಂದು ಪತ್ರವನ್ನು ಬರೆಯಲಾಗಿರುತ್ತದೆ. ಅಲ್ಲದೇ, ಸದರ ವಿಷಯವು ಮಾಹಿತಿ ತಂತ್ರಜ್ಞಾನ (IT) ಶಾಖೆಗೆ ಸಂಬಂಧಿಸಿದ್ದು, ಮುಂದಿನ ಕ್ರಮವನ್ನು ಸಂಬಂಧಿಸಿದ ವಿಭಾಗದವರು ಜರುಗಿಸುವ ಕುರಿತಾದ ವಿಷಯವನ್ನು ಪರಿಶೀಲಿಸಲು ಆಡಳಿತ ಮಂಡಳಿಯ ಮುಂದೆ ಮಂಡಿಸಲಾಗಿದೆ.

ಕುಲಸಚಿವರು

ಕುಲಪತಿಗಳು

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 115 ಹೆಚ್‌ಪಿಯು 2022, ದಿನಾಂಕ: 15.07.2022 ರಂದು ಬರೆದ ಪತ್ರದಲ್ಲಿ ತಿಳಿಸಿದಂತೆ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ ಎಲ್ಲ ವಿಶ್ವವಿದ್ಯಾಲಯದಲ್ಲಿ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ರಾಷ್ಟ್ರೀಯ ಶಿಕ್ಷಣ ನೀತಿ-2020 ರಲ್ಲಿ ಅತ್ಯವಶ್ಯಕವಾಗಿರುವುದರಿಂದ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಪರಿಶಿಷ್ಟ ಜಾತಿಗೆ ಮೀಸಲಿರುವ ಅನುದಾನದಡಿ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ ಎಲ್ಲ ವಿಶ್ವವಿದ್ಯಾಲಯದಲ್ಲಿ Massive Online Open Course (MOOC) and FM Community Radio Station ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಂಬಂಧ ಈ ಕಾರ್ಯಕ್ರಮಕ್ಕೆ ತಗಲಬಹುದಾದ ರೂ. 46.65 ಕೋಟಿಗಳ ಪೈಕಿ ಶೇ. 50 ರಷ್ಟು ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸುವ ಕುರಿತು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ. / ಎಸ್.ಟಿ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಒಟ್ಟು ವಿದ್ಯಾರ್ಥಿಗಳ ಮಾಹಿತಿಯೊಂದಿಗೆ ಕ್ರಿಯಾ ಯೋಜನೆಯನ್ನು ಸಲ್ಲಿಸುವಂತೆ ಹಾಗೂ ಬಾಕಿ ಶೇ. 50 ರಷ್ಟು ಅನುದಾನವನ್ನು ವಿಶ್ವವಿದ್ಯಾಲಯಗಳ ಆಂತರಿಕ ಸಂಪನ್ಮೂಲದಿಂದ ಭರಿಸುವ ಬಗ್ಗೆ ಅಭಿಪ್ರಾಯದೊಂದಿಗೆ ಸವಿವರ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಿಶ್ವವಿದ್ಯಾಲಯಗಳಿಗೆ ನಿರ್ದೇಶಿಸಿರುತ್ತಾರೆ.

ಮುಂದುವರೆದು, ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ಇವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ದೇಶಿ ತಂತ್ರಜ್ಞಾನ ಪರಂಪರೆಯನ್ನು ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ ಸಮುದಾಯ ಬಾನುಲಿ ಕೇಂದ್ರ ಮತ್ತು ಮೂಕ್ಸ್ (MOOCs) ಧ್ವನಿ ಮತ್ತು ದೃಶ್ಯ ನಿರ್ಮಾಣ ಸ್ಟುಡಿಯೊವನ್ನು ಆರಂಭಿಸಿ ಮತ್ತು ಸರ್ಕಾರದ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸುವ ಹಿನ್ನೆಲೆಯಲ್ಲಿ ನುರಿತ ತಂತ್ರಜ್ಞರಿಂದ ತಾಂತ್ರಿಕ ಸಲಹೆ ಸೂಚನೆಗಳನ್ನು ಪಡೆಯುವ ಸಲುವಾಗಿ ಸಮುದಾಯ ಬಾನುಲಿ ಕೇಂದ್ರ ಮತ್ತು ಮೂಕ್ಸ್ (MOOCs) ಧ್ವನಿ ಮತ್ತು ದೃಶ್ಯ ನಿರ್ಮಾಣ ಸ್ಟುಡಿಯೊ ತಂತ್ರಜ್ಞಾನ ಉಸ್ತುವಾರಿ ಸಲಹಾ ಸಮಿತಿಯನ್ನು ರಚಿಸಿರುತ್ತಾರೆ. (ಅಡಕ "ಅ")

ಅದರಂತೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹ ಬಾನುಲಿ ಕೇಂದ್ರ ಮತ್ತು ಮೂಕ್ಸ್ (MOOCs) ಧ್ವನಿ ಮತ್ತು ದೃಶ್ಯ ನಿರ್ಮಾಣ ಸ್ಟುಡಿಯೊವನ್ನು ಆರಂಭಿಸಿ ಮತ್ತು ಸರ್ಕಾರದ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸುವ ಹಿನ್ನೆಲೆಯಲ್ಲಿ ನುರಿತ ತಂತ್ರಜ್ಞರಿಂದ ತಾಂತ್ರಿಕ ಸಲಹೆ ಸೂಚನೆಗಳನ್ನು ಪಡೆಯುವ ಸಲುವಾಗಿ ಸಮುದಾಯ ಬಾನುಲಿ ಕೇಂದ್ರ ಮತ್ತು ಮೂಕ್ಸ್ (MOOCs) ಧ್ವನಿ ಮತ್ತು ದೃಶ್ಯ ನಿರ್ಮಾಣ ಸ್ಟುಡಿಯೊ ತಂತ್ರಜ್ಞಾನ ಉಸ್ತುವಾರಿ ಸಲಹಾ ಸಮಿತಿಯನ್ನು ರಚಿಸದ ಕುರಿತ ವಿಷಯವನ್ನು ಪರಿಶೀಲಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ದಿನಾಂಕ 13.08.2022 ರಂದು ಮಂಡಿಸಲಾಗಿತ್ತು. ಸದರ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

**ವಿದ್ಯಾವಿಷಯಕ ಪರಿಷತ್ ಸಭೆಯ ಠರಾವು ಸಂ. 17, ದಿನಾಂಕ: 13.08.2022**

ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು ಸರಕಾರದ ಪತ್ರ ಸಂಖ್ಯೆ ಇಡಿ 115 ಹೆಚ್‌ಪಿಯು 2022, ದಿನಾಂಕ 15.07.2022 ರಲ್ಲಿ ತಿಳಿಸಿದಂತೆ ಶೇಕಡಾ 50 ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದುಕೊಂಡು ಇನ್ನುಳಿದ ಶೇಕಡಾ 50 ಅನುದಾನವನ್ನು ಸರಕಾರಿ / ಅರೆಸರಕಾರಿ / CSR Funding / NGO ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡು Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಂತೆ ಸುದೀರ್ಘವಾಗಿ ಚರ್ಚಿಸಿ ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

ಈ ಮೇಲಿನಂತೆ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತಂತೆ ದಿನಾಂಕ: 13.08.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-09: ವಿಷಯ-: Consideration of the request of Dr.B.S.Giriyappanavar Retired Associate Professor, Karnatak Science College, Dharwad for promoting him from Associate Professor to Professor under CAS (10%) as per the provisions of sec.14.1 of UGC 2010 regulations.

**NOTE:**

Dr. B. S. Giriyappanavar, Retired Associate Professor, Karnatak Science College, Dharwad in his representation has requested to consider his candidature for promoting him from Associate Professor to Professor under CAS (10%) as per the provisions of sec.14.1 of UGC 2010 regulations while he was working in KSCD as Associate Professor in KSCD. But University failed to conduct the interview for about 07 years i.e., from 2013 to 2020. Hence, has filed WP (No.147665 of 2020) in the Hon'ble High Court of Karnatka. Now, the Hon'ble High Court of Karnatak has issued a final order by directing the University to consider his representations dated: 24.08.2020 and 29.08.2020 and pass appropriate order in accordance with law within a period of six months from the date of receipt of certified copy of this Court Order D: 17.11.2021.

The orders of the Hon'ble High Court of Karnataka in WP No.147665 and orders of the Honb'e High Court is as under:

> The question whether the petitioner is entitled to be promoted to the post of professor is the matter which requires to be considered by the respondent university.
>
> Therefore, it is expeditious to dispose of the writ petition, directing the respondent university to consider the representation dated 24.08.2020 and 29.08.2020 at Annexures- H and J and pass appropriate order in accordance with law within a period of six months from the date of receipt of certified copy of this order.

It is submitted that, the promotion of Teachers of the Constituent Colleges from Associate Professor to Professor (10%) is initiated for the first time in the State. Ten percent of the number of the posts of Associate Professor in Colleges shall be that of Professors. The guidelines issued in the UGC 2010 Regulations/Statute were not enough to undertake the said promotion process. Hence, detailed deliberations were required to finalize the methods for implementation of the promotion under CAS Scheme. Apart from that the office was closed for a long duration due to Covid-19 Pandemic. There were this bonafide reasons which caused delay in carrying out the process of promotion process viz., screening of applications, conduct of interview and finalization of list of eligible Teachers etc for promotion. By the time of the commencement of process of promotion the Petitioner was superannuated from University services. The provisions of the Statute 12.7 of the Statute- 2012 reads as under:

> 12.7 The incumbent teacher must be on the role and active service of the University/Colleges on the date of consideration by the Selection Committee for Selection/CAS Promotion.

ಕುಲಸಚಿವರು ಕುಲಪತಿಗಳು

Since, Dr.B.S.Giriyappanavar superannuated on 31.08.2020 he was not on role and active service of the University as on that date when the process of promotion under CAS was taken by the Respondent University hence, he was not considered for promotion from Associate Professor to Professor (10%) and he was informed accordingly vide letter No.357A Dt: 19.05.2022.

Now, Dr.B.S.Giriyappanavar has another representation dt:21.06.2022 requesting for consideration of his candidature for promotion. On the said matter legal opinion is obtained which will be placed on the table. Hence, the request of Dr.B.S.Giriyappanavar and the legal opinion on the said matter is placed before Syndicate for consideration.

<u>ನಿರ್ಣಯ</u>

**After thorough discussions, Syndicate resolved to follow the legal opinion and approved Statute for promotions of the teachers and same may be intimated to the applicant.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-10: ವಿಷಯ-: Consideration of the orders of the Hon'ble High Court in the WP No.101129 of 2021 filed by Dr.O.Kotresh, Associate Professor, Karnatak Science College, Dharwad.

**NOTE:**

Dr.O.Kotresh Associate Professor in Chemistry, Karnatak Science College, Dharwad made a representation stating that, he has applied for the promotion for Professor in Chemistry under CAS. Theinteriview process conducted on 8.3.2021 and unfortunately no correspondence is made to him from the BOA-KUD. Due to this he personally enquired in the University BOA Section and also submitted his representation on 08.03.2021, but did not receive any response in this regard. Inevitably, he approached and prayed the Hon'ble High Court of Dharwad.

It is submitted that the promotion application of Dr.O.Kotresh was placed before the Screening committee. The screening committee remarked as under:

> "The teacher Dr.O.Kotresh has not submitted PBAS along with API score chart as per UGC regulations 2010 for promotion under section 11.10 and 14.1(iii). Hence, the said application has not been scrutinized"

Since, his application was not scrutinized by the screening committee he was not called for interview. However, he filed WP in the High Court of Karnataka and the orders as under:

> "Not to precipitate the matter in pursuance of the notification dt.12.10.2018
> In so far as it relates to Chemistry subject, till the next date of hearing"

On the said matter legal opinion is obtained and will be placed on the table for consideration. Hence, the matter is placed before the Syndicate for consideration.

ನಿರ್ಣಯ

**After thorough discussions, Syndicate resolved to follow approved Statute for promotions of the teachers and endorsement may be given to the applicant.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-11: ವಿಷಯ-: Consideration of promotion of Professors of P.G.Department of University from Professor (Stage-V) to Professor (Stage-VI) under CAS as per UGC Regulations-2010 and the University Statute framed in this regard.

**NOTE:**

The Statute Governing the Direct Recruitment, Promotion under CAS and conduct of interview to the posts of Professor, Associate Professors, Assistant Professors, Principals of Constituent Colleges, Directors of Physical Education and Librarians and Allied posts under Sec.40(1)(k) of KSU Act,2000 makes provision for promotion of promotion of Professors from Professor Stage –V to Stage-VI.

**The clause 13.10 of the Statute reads as under:**

Ten percent of the positions of Professors in University, with a minimum of ten years of teaching and research experience as Professor either in the pre-revised scale of Professor's pay or the revised scale pay will be eligible for promotion to the higher grade of Professorship (Stage6), on satisfying the required API score as per Tables I and II through the PBAS methodology stipulated in this Statute through a duly constituted Expert committee, and such teachers promoted to the higher grade shall continue to be designated as 'Professor'. As this AGP elevation for Professor is applicable to only University departments, additional credentials are to be evidenced by:

a) Post-doctoral research outputs of high standard;
b) awards/honours/and recognitions;
c) additional research degrees like D.Sc., D.Litt., LLD etc; patents and IPR on products and processes developed/technology transfer achieved in the case of teachers in Science and Technology.

The selection is to be conducted by the University by receiving duly filled PBAS proformas from eligible professors based on seniority, three times in number of the available vacancies in each faculty. In case the number of candidates available is less than three times the number of vacancies, the zone of consideration will be limited to the actual number of candidates available. The assessment process shall be through an Expert-Committee evaluation of all credentials submitted as stipulated in Table-II(A) of Annexure-I for teachers in University departments. No separate interview need to be conducted for this category.

As per the above provisions applications were invited by making circulars in this regard. An exert committee was constituted as per UGC Regulations. The applications of the teachers who are in the active service of the University were placed before the expert committee meeting held on 08.08.2022 in the following subjects.

| Sl No | Subject | Name of applicants |
|---|---|---|
| 1 | Chemistry | Dr.K.M.Hosamani |
| 2 | Mathematics | Dr.B.Basavanagouda |

ಕುಲಸಚಿವರು

ಕುಲಪತಿಗಳು

The expert committee has submitted its recommendations in sealed cover and the said recommendations are placed before Syndicate for consideration. Hence, the promotion of Professors from Stage-V to Stage-VI under CAS is placed before Syndicate for consideration.

## ನಿರ್ಣಯ

**The sealed cover pertaining to the recommendations of the Expert Committee for Dr. B. Basavanagouda was opened in the Syndicate Meeting. Accordingly, it was perused and resolved to approve the recommendations of the the expert committee with respect to the promotion of Professors of P.G.Department of University from Professor (Stage-V) to Professor (Stage-VI) under CAS as per UGC Regulations-2010 and the University Statute framed in this regard.**

**Further, as per the State Government Official Memorandum No.DPAR 22 SRR 93 dated 14th July, 1993 it was resolved, not to open the sealed cover containing recommendations of the Expert Committee for Dr. K. M. Hosamani with regard to promotion from Professor (Stage-V) to Professor (Stage-VI) under CAS, until clearance from the ACB. The CAS recommendation cover was placed in another cover and sealed in the presence of all the members of the Syndicate.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–12: ವಿಷಯ–: ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ನೇಮಕಾತಿ ಮಾಡುವ ವಿಷಯದ ಪ್ರಸ್ತಾವನೆಯ ಕುರಿತು.

ಪ್ರಸ್ತಾವನೆ:

ಶ್ರೀ ಎಸ್.ಎಸ್. ಬಳ್ಳೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಈ ಕಚೇರಿ ಆದೇಶ ನಂ.603 ದಿನಾಂಕ: 16.07.2021 ರ ಮೂಲಕ ಈ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ನೇಮಕಾತಿ ಮಾಡಲಾಗಿರುತ್ತದೆ. ಅದರಂತೆ ಶ್ರೀ.ಎಸ್.ಎಸ್. ಬಳ್ಳೊಳ್ಳಿ, ಇವರು ದಿನಾಂಕ: 16.07.2021 ರಂದು ಕಾನೂನು ಸಲಹೆಗಾರರೆಂದು ವರದಿ ಮಾಡಿಕೊಂಡಿದ್ದಾರೆ. ಸದರಿ ನೇಮಕಾತಿ ಆರಂಭಿಕವಾಗಿ ಆರು ತಿಂಗಳ ಅವಧಿಗೆ ಹಾಗೂ ತದನಂತರ ಪ್ರತಿ ಆರು ತಿಂಗಳಿಗೊಮ್ಮೆ ಒಂದು ದಿನ ಮೊಟಕುಗೊಳಿಸಿ ಮುಂದುವರೆಸುತ್ತಾ ಬರಲಾಗಿರುತ್ತದೆ.

ಈಗ ಶ್ರೀ ಎಸ್.ಎಸ್. ಬಳ್ಳೊಳ್ಳಿ, ಇವರ ಎರಡನೇ ಆರು ತಿಂಗಳ ಅವಧಿಯು ದಿನಾಂಕ: 15.07.2022 ರಂದು ಕೊನೆಗೊಂಡಿರುತ್ತದೆ.

ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಕಾನೂನು ಸಲಹೆಗಾರರ ನೇಮಕಾತಿ ಕುರಿತಂತೆ ವಿಶ್ವವಿದ್ಯಾಲಯವು ರಚಿಸಿದ ಅನುಶಾಸನದ ನಿಯಮ 2 ಈ ಕೆಳಗಿನಂತಿರುತ್ತದೆ.

2. APPOINTMENT, REMUNERATION AND TENURE:

(a) To strengthen the Legal Cell and to advise for proper handling of the University cases in the various Courts, a retired District Judge shall be appointed as Legal Adviser to the University, after procuring the list of retired District Judges residing at Hubli-Dharwad from the High Court Registrar General / Officer of Dharwad District Judge Court. The appointment shall be made by the Syndicate from the list for a period of 6 months which may be extended for a further period of three times of six months each. The Syndicate may dis-continue and substitute the Legal Adviser before the expiry of the tenure, if necessary.

(b) The Honorarium of the Legal Adviser shall be fixed by the Syndicate, as per Re-employment Rules/other related rules as per the K.C.S.R's.

ದಿನಾಂಕ 12.05.2016 ರಂದು ಜರುಗಿದ ಸಿಂಡಿಕೇಟ್ ಸಭೆ ನಿರ್ಣಯ ನಂ.13 ರಲ್ಲಿ "ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿಕೊಂಡ ಅನುಶಾಸನದ ಪ್ರಕಾರ ಕಾನೂನು ಕೋಶದ ಕಾನೂನು ಸಲಹೆಗಾರರ ನೇಮಕಾತಿ ಹಾಗೂ ನಿಯಮಾನುಸಾರ ಗೌರವಧನ ನಿಗದಿಪಡಿಸುವ ವಿಷಯದ ಕುರಿತು ಕುಲಪತಿಗಳಿಗೆ ಸಿಂಡಿಕೇಟ್ ಅಧಿಕಾರ ನೀಡಿರುತ್ತದೆ."

ನಿವೃತ್ತಿ ನಂತರ ಮರು ನೇಮಕಾತಿ ಹೊಂದಿದವರ ಗೌರವಧನ ನಿಗದಿಪಡಿಸುವ ಕೆ.ಸಿ.ಎಸ್.ಆರ್. ನಿಯಮ ಈ ಕೆಳಗಿನಂತಿರುತ್ತದೆ.

**313 (b)** The pay to be allowed on re-employment is subject to the following conditions all of which must be satisfied.

(i) Pay on re-employment plus pension (including pension equivalent of death-cum-retirement gratuity or gratuity in lieu of pension) should not exceed the substantive pay in a permanent post but not pay in a temporary post drawn before retirement or the officiating pay in cases. (where (The officiating post has been held) for not less than one year immediately prior to retirement).

**460** For purposes of regulating the grant of travelling allowances to re-employed pensioners, the following rules are laid down.

(i) Where the pension is held in abeyance during the period of re-employment the grade of the re-employed pensioner shall be determined in accordance with the pay actually received from time to time.

(ii) Where the pension is allowed to be drawn in addition to pay the re-employed pensioner should for purposes of this rule, be deemed to be in receipt of actual pay equal to his pay on

ಕುಲಸಚಿವರು ಕುಲಪತಿಗಳು

re-employment plus the pension subject to the condition that, if the sum of such pay plus pension exceeds the pay attached to the post, if it is a fixed rate of pay or the maximum pay of the post, if it is on a timescale such excess shall be ignored.
(iii) For purposed of these rules, the amount of pension to be taken into account will be the amount originally sanctioned i.e., before commutation if any and will also include the pensionary equivalent of death-cum-retirement gratuity, if any.
. (iv) The term pay used in clauses (i) and (ii) shall be deemed to include also honorarium on fixed monthly rates in respect of officers appointed on a contract basis

8(23) "Honorarium" means a recurring or non-recurring payment granted to a Government servant (from the Consolidated Fund of the State) under whom he is employed or of any other Government in India as remuneration office work of an occasional or intermittent character.

ಈಗ ಶ್ರೀ ಎಸ್.ಎಸ್. ಬಳೊಳ್ಳಿ, ಇವರ ಎರಡನೇ ಆರು ತಿಂಗಳ ಅವಧಿಯು ದಿನಾಂಕ: 15.7.2022 ರಂದು ಕೊನೆಗೊಂಡಿರುವ ಪ್ರಯುಕ್ತ ಮಾನ್ಯ ಉಚ್ಚನ್ಯಾಯಾಲಯದ ಅಡಿಷನಲ್ ರೆಜಿಸ್ಟರ್ ಜನರಲ್, ಅವರಿಂದ ಧಾರವಾಡದಲ್ಲಿ ಅಥವಾ ಧಾರವಾಡ ನಗರಕ್ಕೆ ಹತ್ತಿರದಲ್ಲಿ ವಾಸಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾದೀಶರ ಯಾದಿಯನ್ನು ಕಳುಹಿಸಲು ಕೋರಲಾಗಿತ್ತು. ಅದರಂತೆ, ಮಾನ್ಯ ಉಚ್ಚನ್ಯಾಯಾಲಯದ ಅಡಿಷನಲ್ ರೆಜಿಸ್ಟರ್ ಜನರಲ್, ಅವರು ದಿನಾಂಕ: 19.07.2022 ರಂದು 6 ಜನ ನಿವೃತ್ತ ಜಿಲ್ಲಾ ನ್ಯಾಯಾದೀಶರ ಹೆಸರುಗಳನ್ನು ಸೂಚಿಸಿ ಅದರಲ್ಲಿ ಶ್ರೀ ಎಂ.ಎಸ್. ಪಾಟೀಲ್, ನಿವೃತ್ತ ಜಿಲ್ಲಾ ನ್ಯಾಯಾದೀಶರು ಅವರು ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ಕಾರ್ಯನಿರ್ವಹಿಸಲು ಒಪ್ಪಿಗೆ ಸೂಚಿಸಿದ್ದಾರೆಂದು ತಿಳಿಸಿದ್ದಾರೆ.

ಅದೇ ರೀತಿಯಾಗಿ ಶ್ರೀ ಜಿ.ವಿ. ತುರಮರಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರು ತಾವು ದಿನಾಂಕ: 30.06.2020 ರಂದು ಸೇವೆಯಿಂದ ನಿವೃತ್ತರಾಗಿದ್ದು, ತಮ್ಮನ್ನು ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಹುದ್ದೆಗೆ ಪರಿಗಣಿಸಲು ಕೋರಿದ್ದಾರೆ.

ಮೇಲೆ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ನೇಮಕಾತಿ ಮಾಡುವ ಪ್ರಸ್ತಾವನೆಯ ಬಗ್ಗೆ ಚರ್ಚಿಸಿದ ಸಿಂಡಿಕೇಟ ಸಭೆಯು ಶ್ರೀ. ಜಿ. ಎಮ್. ಕುಂಬಾರ, ನಿವೃತ್ತ ಜಿಲ್ಲಾ ನ್ಯಾಯಾದಿಶರು (ಗ್ರಾಹಕರ ವೇದಿಕೆ, ಸಿವಿಲ್ ನ್ಯಾಯಾಲಯ ಸಂಕೀರ್ಣ, ಧಾರವಾಡ), ಸನ್ಮತಿನಗರ, ಧಾರವಾಡ ಇವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರನ್ನಾಗಿ ಪ್ರತಿ ತಿಂಗಳು ರೂ.30,000/- (ಗೌರವಧನ) + ರೂ.5,000/- ಗಳನ್ನು (ಸಂಚಾರ ಭತ್ಯೆಯೊಂದಿಗೆ) ನಿಗದಿ ಪಡಿಸಿ ನೇಮಕ ಮಾಡಲು ಒಮ್ಮತದಿಂದ ಠರಾಯಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–13: ವಿಷಯ–: Ratification of the action taken by the Hon'ble Vice-Chancellor for having relieved Dr.T.M. Bhaskar to assume the office of the Vice-Chancellor, Karnatak Janapada Vishwavidyalaya, Gotagodi as per Governor's Secretariat Notification.

**NOTE:**

As per Governor's Secretariat Notification No. GS 03 JUM 2021 dated 18.07.2022 Dr. T.M. Bhaskar, Professor, Dr. R.C. Hiremath Institute of Kannada Studies, K.U. Dharwad has been appointed as Vice-Chancellor, Karnatak Janapada Vishwavidyalaya, Gotagodi for a period four years with effect from the date of assumption of office or until he attains the age of 67 years whichever is earlier. Further, Dr. T.M. Bhaskar, Professor vide his letter dated 18.07.2022 has requested to relieve him from the duties of Professor and permit him to join for duty as Vice-Chancellor of the Janapada Vishwavidyalaya, Gotagodi.

In view of Governor's Secretariat Notification and by the direction of the Hon'ble Vice-Chancellor, Dr. T.M. Bhaskar, Professor was relieved from his duties on 18.07.2022 after office hours (vide office order No. KU/DPAR/T-4/2022/852 dated 18.07.2022) so as to assume the office of the Vice-Chancellor, Janapada Vishwavidyalaya, Gotagodi. Further, presently Dr. T.M. Bhaskar is directed to handover the charges of Professor and other assignments of Karnatak University, Dharwad.

Hence, action taken by the Hon'ble Vice-Chancellor for having relieved Dr.T.M.Bhaskar to assume the office of the Vice-Chancellor, Janapada Vishwavidyalaya, Gotagodi as per Governor's Secretariat Notification is placed for ratification

ನಿರ್ಣಯ

**Syndicate considered and ratified the action taken by the Hon'ble Vice-Chancellor for having relieved Dr.T.M. Bhaskar to assume the office of the Vice-Chancellor, Karnatak Janapada Vishwavidyalaya, Gotagodi as per Governor's Secretariat Notification No. GS 03 JUM 2021 dated 18.07.2022.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-14: ವಿಷಯ-: Ratification of the action taken by the Hon`ble Vice-Chancellor for having permitted and sanctioned OOD to Dr.Devarajan Thangadurai, Associate Professor, P G Department of Studies in Botany, K U Dharwad to attend ***Short-term training on "Microbial Technology for Sustainable Agricultural Development"*** held at ***Bangkok, Thailand*** from ***$6^{th}$ to $9^{th}$ June, 2022.***

**Note :**

Dr.Devarajan Thangadurai, Associate Professor, P G Department of Studies in Botany, K U Dharwad in his letter dated:12.05.2022, has stated that, he would like to visit ***Association of Agricultural Technology in Southeast Asia (AATSEA)*** and Biocontrol Research Unit, Faculty of Agricultural Technology, ***King Mongkut`s Institute of Technology Ladkarbang (KMITL), Bangkok, Thailand*** to Participate in the ***Short-term training*** on ***"Microbial Technology for Sustainable Agricultural Development"*** during ***$6^{th}$ to $9^{th}$ June, 2022.*** Further, he also stated that, during this time efforts will be made to develop an ***MOU between Karnatak University, Dharwad, India***; ***Association of Agricultural Technology in Southeast Asia (AATSEA), Thailand*** and ***King Mongkut`s Institute of Technology Ladkrabang (KMITL), Bangkok, Thailand*** for ***collaborative research*** in the area of ***"Microbial Technology for Sustainable Agro farming".*** In this connection, he has requested to permit him to attend the said ***Short-term training*** and to sanction ***OOD*** from ***06.06.2022 to 11.06.2022.*** He has forwarded his requisition letter through the Chairman, P G Department of Botany, K U Dharwad along with a ***copy of invitation*** letter received from the concerned authorities for kind consideration.

Dr.Devarajan Thangadurai has submitted the duly certified filled in prescribed proforma issued under this ***Office Circular No.656, Dated:17.05.2017*** as per the directions received from the ***Principal Secretary, Department of Education (Education Higher), Bangalore under letter No.ED 178 UNE 2016, Dated:17.04.2017.***

It is submitted here that, as per ***Syndicate Resolution No.47*** held on ***09.05.2009/23.06.2009, Hon`ble Vice-Chancellor*** has been authorized to permit Faculty Member to go abroad on Exchange Programmes/MOU`s and other short visits (Conference etc,) under unassigned grants and the same is to be placed before Syndicate for perusal.

Accordingly, as per orders of the Hon`ble Vice-Chancellor Dated:08.06.2022, Dr.Devarajana Thangadurai, Associate Professor, P G Department of Studies in Botany, K U Dharwad has been permitted to attend ***Short-term training on "Microbial Technology for Sustainable Agricultural Development"*** held at ***Bangkok, Thailand*** from ***$6^{th}$ to $9^{th}$ June, 2022*** and sanctioned ***OOD*** from ***06.06.2022 to 11.06.2022*** without any financial commitment on the part of the University vide this Office letter No.KU/DPAR/T-02(E-27823)/2022/514 Dated:10.06.2022.

ಕುಲಸಚಿವರು

ಕುಲಪತಿಗಳು

Hence, the action taken by the Hon'ble Vice-Chancellor for having permitted and sanctioned OOD to Dr.Devarajan Thangadurai, Associate Professor, P G Department of Studies in Botany, K U Dharwad to attend ***Short-term training on "Microbial Technology for Sustainable Agricultural Development"*** held at ***Bangkok, Thailand*** from ***6th to 9th June, 2022*** is placed before the Syndicate for its ratification.

ನಿರ್ಣಯ

Synidcate considered and ratified the action taken by the Hon'ble Vice-Chancellor for having permitted and sanctioned OOD to Dr.Devarajan Thangadurai, Associate Professor, P G Department of Studies in Botany, K U Dharwad to attend ***Short-term training on "Microbial Technology for Sustainable Agricultural Development"*** held at ***Bangkok, Thailand*** from ***6th to 9th June, 2022.***

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-15: ವಿಷಯ-: Ratification of the action taken by the Hon`ble Vice-Chancellor for having permitted and sanctioned OOD to Dr.Devarajan Thangadurai, Associate Professor, P G Department of Studies in Botany, K U Dharwad to attend ***International Conference of the Genetics Society of Thailand*** held at ***Kasetsart University, Thailand*** from ***30th May to 2nd June, 2022.***

**Note :**

Dr.Devarajan Thangadurai, Associate Professor, P G Department of Studies in Botany, K U Dharwad in his letter dated:04.05.2022, has stated that, his candidature has been selected for participation in the shortcoming ***"Mini-Symposium on the Metagenome and Systems Biology for Sustainable Agriculture and Food"***. Further, he also stated that, an Abstract entitled ***"Phenotypic Improvement of Autochthonous Saccharomyces cerevisiae through Genome Shuffling for Improved Sugar Tolerance and Enhanced Alcohol Production"*** has been accepted for oral presentation in the shortcoming ***"International Conference of the Genetics Society of Thailand"*** during ***30th May, 2022 to 2nd June, 2022*** to be held at ***Kasetsart University, Thailand.*** In this connection, he has requested to permit him to attend the said Conference and to sanction ***OOD*** from ***27.05.2022 to 04.06.2022.*** He has forwarded his requisition letter through the Chairman, P G Department of Botany, K U Dharwad along with a ***copy of invitation*** letter received from the concerned authorities for kind consideration.

Dr.Devarajan Thangadurai has submitted the duly certified filled in prescribed proforma issued under this ***Office Circular No.656, Dated:17.05.2017*** as per the directions received from the ***Principal Secretary, Department of Education (Education Higher), Bangalore under letter No.ED 178 UNE 2016, Dated:17.04.2017.***

It is submitted here that, as per ***Syndicate Resolution No.47*** held on ***09.05.2009/23.06.2009, Hon`ble Vice-Chancellor*** has been authorized to permit Faculty Member to go abroad on Exchange Programmes/MOU`s and other short visits (Conference etc.) under unassigned grants and the same is to be placed before Syndicate for perusal.

Accordingly, as per orders of the Hon`ble Vice-Chancellor dated:14.05.2022, Dr.Devarajana Thangadurai, Associate Professor, P G Department of Studies in Botany, K U Dharwad has been permitted to attend ***International Conference of the Genetics Society of Thailand*** held at ***Kasetsart University, Thailand*** from ***30th May to 2nd June, 2022*** and sanctioned OOD from ***27th May to 4th June, 2022*** without any financial commitment on the part of the University vide this Office letter No.KU/DPAR/T-02(E-30056)/2022/410 Dated:26.05.2022.

ಕುಲಸಚಿವರು ಕುಲಪತಿಗಳು

Hence, the action taken by the Hon'ble Vice-Chancellor for having permitted and sanctioned OOD to Dr.Devarajan Thangadurai, Associate Professor, P G Department of Studies in Botany, K U Dharwad to attend ***International Conference of the Genetics Society of Thailand*** held at ***Kasetsart University, Thailand*** from ***30$^{th}$ May to 2$^{nd}$ June, 2022*** is placed before the Syndicate for its ratification.

ನಿರ್ಣಯ

Syndicate considered and ratified the action taken by the Hon'ble Vice-Chancellor for having permitted and sanctioned OOD to Dr. Devarajan Thangadurai, Associate Professor, P G Department of Studies in Botany, K U Dharwad to attend ***International Conference of the Genetics Society of Thailand*** held at ***Kasetsart University, Thailand*** from ***30$^{th}$ May to 2$^{nd}$ June, 2022.***

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–16: ವಿಷಯ–:** ಕ.ವಿ.ವಿ. ಆವರಣದಲ್ಲಿರುವ ವಿಶ್ವಚೇತನ ಸಮೀಪದ ಹಳೆಯ ವಾಣಿಜ್ಯ ಸಂಕೀರ್ಣ ಕೆಡವಿ ಬಸ್ ನಿಲ್ದಾಣವನ್ನು ನಿರ್ಮಿಸಿ ಬಸ್ ರೂಟ್ ಬದಲಾಯಿಸುವ ಕುರಿತು ಪರಿಶೀಲಿಸುವದು.

**ಟಿಪ್ಪಣಿ :**

ಕ.ವಿ.ವಿ. ಆವರಣದಲ್ಲಿರುವ ವಿಶ್ವಚೇತನ ಸಮೀಪದ ಹಳೆಯ ವಾಣಿಜ್ಯ ಸಂಕೀರ್ಣ ಕೆಡವಿ ಬಸ್ ನಿಲ್ದಾಣವನ್ನು ನಿರ್ಮಿಸಲು ಮಾನ್ಯ ಕುಲಪತಿಗಳು ಸೂಚಿಸಿರುವರು.

ಸದರಿ ವಿಶ್ವಚೇತನ ಸಮೀಪದ ಹಳೆಯ ವಾಣಿಜ್ಯ ಸಂಕೀರ್ಣದ ವಿವರ ಇಂತಿವೆ :–

1. ವಾಣಿಜ್ಯ ಮಳಿಗೆ –4 (ನಿರ್ಮಾಣ 1959–60)
2. ವಿಸ್ತೀರ್ಣ – 3102 ಚ.ಅಡಿ
3. ಹೆಚ್.ಡಿ.ಎಂ.ಸಿ ಪಿ.ಆಯ್.ಡಿ ನಂ : 17ಅ/918
4. ಮುನ್ಸಿಪಾಲಟಿ ನಂ : 13847–849 ಮತ್ತು 13854 (ಒಟ್ಟು 4 ಆಸ್ತಿ)
5. ನಿರ್ಮಾಣ (1959–60 ರಲ್ಲಿ) ವೆಚ್ಚ : ರೂ.30,232/–
6. ಮಹಾನಗರ ಪಾಲಿಕೆ ಆಸ್ತಿ ತೆರಿಗೆ (2022–23) ರೂ. 20,789=00

ಸದರಿ ವಾಣಿಜ್ಯ ಮಳಿಗೆಗಳು ಸಂಪೂರ್ಣ ಹಾಳಾಗಿದ್ದು, ಅಲ್ಲಿ ರೇಶನ್ ಅಂಗಡಿ ಹೊರತಾಗಿ ಬೇರೆ ಯಾವ ವ್ಯಾಪಾರ ವಹಿವಾಟು ನಡೆಯುತ್ತಿಲ್ಲ. ಈಗಿನ ಬಸ್ ವೃತ್ತದಲ್ಲಿ ಜನ ಸಂದಣಿ ಹಾಗೂ ವಾಹನ ದಟ್ಟನೆ ಹೆಚ್ಚಾಗಿರುವದರಿಂದ ವಿಶ್ವವಿದ್ಯಾಲಯದ ಶಾಂತತೆಗೆ ತೊಂದರೆಯಾಗುತ್ತಿದೆ. ಅದೂ ಅಲ್ಲದೇ ಶ್ರೀನಗರ್ ವೃತ್ತದಿಂದ ವಿಶ್ವಚೇತನದ ಸಮೀಪ, ಪ್ರಸಾರಂಗದವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಿರುವದರಿಂದ ಕವಿವಿ ಆವರಣಕ್ಕೆ ಬರುವ ಬಸ್/ಇತರೆ ವಾಹನಗಳ ಸಂಚಾರಕ್ಕೆ ತುಂಬಾ ಅನುಕೂಲಕರವಾಗಲಿದೆ. ಸದರಿ ವಿಷಯವಾಗಿ ಈ ಕೆಳಗಿನ ಅಂಶಗಳ ಪರಿಶೀಲನೆಗೆ ನಿವೇದಿಸಿದೆ.

1. ಹಳೆಯ ವಾಣಿಜ್ಯ ಸಂಕೀರ್ಣ ಕೆಡವುದು.
2. ಬಸ್ ಸಂಚಾರ ಮಾರ್ಗ ಬದಲಾವಣೆ ಮಾಡುವುದು.

ಸದರಿ ವಿಷಯವನ್ನು ಪರಿಶೀಲನೆಗಾಗಿ ಸಿಂಡಿಕೇಟ ಸಭೆಗೆ ಮಂಡಿಸಲಾಗಿದೆ.

## ನಿರ್ಣಯ

ಕ.ವಿ.ವಿ. ಆವರಣದಲ್ಲಿರುವ ವಿಶ್ವಚೇತನ ಸಮೀಪದ ಹಳೆಯ ವಾಣಿಜ್ಯ ಸಂಕೀರ್ಣ ತೆರವುಗೊಳಿಸಿ ಬಸ್ ನಿಲ್ದಾಣವನ್ನು ನಿರ್ಮಿಸಿ ಬಸ್ ರೂಟ್ ಬದಲಾಯಿಸುವ ಪ್ರಸ್ತಾವನೆಯ ಬಗ್ಗೆ ಚರ್ಚಿಸಿದ ಸಿಂಡಿಕೇಟ ಸಭೆಯು ಅನುಮೋದಿಸಿತು. ಮುಂದುವರೆದು, ಸದರಿ ಕಾರ್ಯವನ್ನು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಜರುಗಿಸುವಂತೆ ಕ್ರಮಕೈಗೊಳ್ಳಲು ಠರಾಯಿಸಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–17: ವಿಷಯ–**: 2018–19 ರಿಂದ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನಕ್ಕೆ ಪ್ರತ್ಯೇಕ ಖಾತೆ ತೆಗೆದಿರುವುದನ್ನು ಸಿಂಡಿಕೇಟ್ ಸಮಿತಿ ಸಭೆಯ ದೃಢೀಕರಣಕ್ಕಾಗಿ ಕಲಂ.

**ಟಿಪ್ಪಣಿ:**

ಹಣಕಾಸು ವಿಭಾಗದ ಕಟ್ಟಡ ಶಾಖೆಯಲ್ಲಿ 2009–10 ರಿಂದ ಅಭಿವೃದ್ಧಿ ಅನುದಾನ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನಗಳನ್ನು ಒಂದೇ ಖಾತೆಯಲ್ಲಿ ನಿರ್ವಹಣೆ ಮಾಡುತ್ತ ಬಂದಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು ಅಭಿವೃದ್ಧಿ ಅನುದಾನ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನಗಳನ್ನು ಪ್ರತಿ ವರ್ಷ ಬಿಡುಗಡೆ ಮಾಡುತ್ತ ಬಂದಿರುತ್ತಾರೆ. ಇತ್ತೀಚಿಗೆ ಸರ್ಕಾರವು ಪ್ರತಿ ವರ್ಷದ ಅನುದಾನಗಳ ಖರ್ಚು ವೆಚ್ಚಗಳ ಮಾಹಿತಿ ಕೇಳುತ್ತಿರುವುದರಿಂದ, ಅನುದಾನಗಳ ಪ್ರತ್ಯೇಕವಾದ ಮಾಹಿತಿ ನೀಡಲು ತೊಂದರೆ ಆಗುತ್ತಿರುವುದರಿಂದ 2018–19 ನೇ ಸಾಲಿನಲ್ಲಿ ಪ್ರತ್ಯೇಕವಾಗಿ ಎಸ್.ಸಿ.ಪಿ/ಟಿ.ಎಸ್.ಪಿ ಖಾತೆಯನ್ನು ಕೆನರಾ ಬ್ಯಾಂಕ್, ಕ.ವಿ.ವಿ ಆವರಣವದಲ್ಲಿ ಅಂದಿನ ಹಣಕಾಸು ಅಧಿಕಾರಿಗಳ ಕಂಡಿಕೆ ಸಂಖ್ಯೆ ನಂ.8 ದಿನಾಂಕ 26–05–2018 ರ ಆದೇಶದ ಮೇರೆಗೆ ತೆಗೆದಿರುತ್ತದೆ.

ಈ ಹಿಂದೆ ತೆಗೆದಿರುವ ಖಾತೆಯು ಅಭಿವೃದ್ಧಿ ಖಾತೆಯಾಗಿದ್ದು, ಅದರಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಉಳಿದಿರುವ ಮೊತ್ತವನ್ನು ಹೊಸದಾಗಿ ತೆಗೆದಿರುವ ಎಸ್.ಸಿ.ಪಿ/ಟಿ.ಎಸ್.ಪಿ ಖಾತೆಗೆ ರೂ.3,14,40,660/– ಗಳನ್ನು ಹಿಂದಿನ ಹಣಕಾಸು ಅಧಿಕಾರಿಗಳು ವರ್ಗಾವಣೆ ಮಾಡಿರುತ್ತಾರೆ.

2018–19 ನೇ ಸಾಲಿನ ಲೆಕ್ಕ ಪರಿಶೋಧಕರ ವಿಚಾರಣಾ ಪತ್ರ ಸಂ: 116 ದಿನಾಂಕ 9–12–2021 ರಲ್ಲಿ ಹೊಸದಾಗಿ ಎಸ್.ಸಿ.ಪಿ/ಟಿ.ಎಸ್.ಪಿ ಖಾತೆ ತೆರೆಯಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಇರುವ ಕಾರಣ ಆಕ್ಷೇಪಣೆ ಮಾಡಿರುತ್ತಾರೆ.

ಆದ ಕಾರಣ, ಈಗಾಗಲೇ ಎಸ್.ಸಿ.ಪಿ/ಟಿ.ಎಸ್.ಪಿ ಹೆಸರಿನಲ್ಲಿ ಹೊಸ ಉಳಿತಾಯ ಖಾತೆಯನ್ನು (ಖಾತೆ ಸಂಖ್ಯೆ:12062140000121) ಕ.ವಿ.ವಿ ಆವರಣದ ಕೆನರಾ ಬ್ಯಾಂಕಿನಲ್ಲಿ ತೆರೆದಿದ್ದು, ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರಿಂದ ಘಟನೋತ್ತರ ಆಡಳಿತಾತ್ಮಕ ಒಪ್ಪಿಗೆ ಪಡೆಯಲಾಗಿರುತ್ತದೆ.

ಅದರಂತೆ, ಎಸ್.ಸಿ.ಪಿ/ಟಿ.ಎಸ್.ಪಿ ಹೆಸರಿನಲ್ಲಿ ಹೊಸ ಉಳಿತಾಯ ಖಾತೆಯನ್ನು (ಖಾತೆ ಸಂಖ್ಯೆ:12062140000121) ತೆಗೆಯಲು ಮಾನ್ಯ ಕುಲಪತಿಗಳ ಆದೇಶನ್ವಯ ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯ ದೃಢೀಕರಣಕ್ಕಾಗಿ ಕಲಂನ್ನು ಸಿದ್ಧಡಿಸಿ ಮಂಡಿಸಲಾಯಿತು.

## ನಿರ್ಣಯ

**2018–19 ರಿಂದ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಹೆಸರಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆಯನ್ನು (ಖಾತೆ ಸಂಖ್ಯೆ:12062140000121) ಕ.ವಿ.ವಿ ಆವರಣದ ಕೆನರಾ ಬ್ಯಾಂಕಿನಲ್ಲಿ ತೆರೆದಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದೃಢೀಕರಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-18: ವಿಷಯ-: ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯು ದೃಡೀಕರಿಸುವ ಕುರಿತು.

ಟಿಪ್ಪಣಿ:

1) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ಸಂಖ್ಯೆ D.O.No GS 03 KUM 2014 ದಿನಾಂಕ 14.10.2014 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳಿಗೆ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶಿಸಿದಂತೆ, ದಿನಾಂಕ 18.12.2014 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸದರ ನಡಾವಳಿಗಳು ದೃಡೀಕರಣಗೊಂಡಿರುವುದಿಲ್ಲ. ಸದರ ಪತ್ರದಲ್ಲಿ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳು ಕೂಡ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶನವಿರುತ್ತದೆ.
2) ದಿನಾಂಕ 01.08.2014 ರ ಸಿಂಡಿಕೇಟ ಸಭೆಯ ಠರಾವು ಸಂಖ್ಯೆ 28 ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ್ದು, ಸದರ ಠರಾವಿನನ್ವಯ ಕ್ರಮ ಜರುಗಿಸಲು ಅನುಮೋದನೆ ಕೋರಿ ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ದಿನಾಂಕ 28.02.2018 ಮತ್ತು 19.01.2021 ರ ಪತ್ರಗಳ ಮೂಲಕ ವಿನಂತಿಸಲಾಗಿತ್ತು.
3) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 18.02.2021 ಮತ್ತು 25.05.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಒಟ್ಟು 47 ನಡಾವಳಿಗಳು ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ಒಟ್ಟು 09 ನಡಾವಳಿಗಳು ಹಾಗೂ ಅಜೆಂಡಾ ಪ್ರತಿಗಳನ್ನು ಇಂಗ್ಲೀಷ ಭಾಷೆಯಲ್ಲಿ ಸಲ್ಲಿಸುವಂತೆ ನಿರ್ದೇಶಿಸಿದ ಪ್ರಯುಕ್ತ, ಸದರ ಸಭೆಗಳ ನಡಾವಳಿಗಳನ್ನು ಮತ್ತು ಅಜೆಂಡಾ ಪ್ರತಿಗಳನ್ನು ಪತ್ರ ದಿನಾಂಕ 07.06.2021 ರ ಮೂಲಕ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗಿತ್ತು.
4) ದಿನಾಂಕ 07.06.2021 ರ ಪತ್ರಕ್ಕನುಗುಣವಾಗಿ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 10.06.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಈ ಹಿಂದೆ ಆದೇಶಿಸಿದಂತೆ "ಯಾವುದೇ ಕ್ರಮ ಜರುಗಿಸಬಾರದೆಂಬ" ಆದೇಶವನ್ನು ಈ ಕೆಳಗೆ ನಮೂದಿಸಿದಂತೆ ಹಿಂಪಡೆಯಲಾಗಿರುತ್ತದೆ.

   **"With reference to the above mentioned subject, I am directed to inform that, the orders passed not to act on the resolutions passed in the Syndicate meetings held on 01.08.2014 and 03.09.2014 and the Finance Committee Meeting held on 20.09.2014 has been withdrawn by the Hon'ble Governor and Chancellor".**

5) ಆದ್ದರಿಂದ, ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯ ದೃಡೀಕರಣಕ್ಕಾಗಿ ಮಂಡಿಸಲಾಗಿದೆ.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–19: ವಿಷಯ–**: ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು ನಿವೃತ್ತಿ ಹೊಂದಿದ ಪ್ರಯುಕ್ತ/ ಅಧಿಕಾರದ ಅವಧಿಯು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ರ ಅಡಿಯಲ್ಲಿ, ಜೇಷ್ಠತೆಯ ಅನುಸಾರ ಆಯಾ ವಿಭಾಗಗಳ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ದಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ, ಈ ಕೆಳಗಿನ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ಆಯಾ ವಿಭಾಗಗಳ ಶಿಕ್ಷಕರ ಜೇಷ್ಠತೆಯ ಅನುಸಾರವಾಗಿ ಹಿರಿಯ ಪ್ರಾಧ್ಯಾಪಕರನ್ನು ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | ಡಾ. ಜೆ. ಎಮ್. ಚಂದುನವರ | 29–06–2022 | ಡಾ. ನಾಗರಾಜ ಆರ್. ಹಳ್ಳಿಯವರ | 30–06–2022 | 30–06–2022 |
| | | ಡಾ. ನಾಗರಾಜ ಆರ್. ಹಳ್ಳಿಯವರ | 31–07–2022 (ನಿವೃತ್ತ) | ಡಾ. ಜೆ. ಎಮ್. ಚಂದುನವರ | 01–08–2022 | 27–07–2022 |
| 2) | ಭೌತಶಾಸ್ತ್ರ | ಡಾ. ಎಲ್. ಆರ್. ನಾಯಿಕ | 17–07–2022 | ಡಾ. ರಾಜಶೇಖರ ಎಫ್. ಭಜಂತ್ರಿ | 18–07–2022 | 18–07–2022 |

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-20: ವಿಷಯ-: ಶ್ರೀ ಸಂದೀಪ ಬೂದಿಹಾಳ ಸಿಂಡಿಕೇಟ ಸದಸ್ಯರು ಇವರು ನಕಲು ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಪ್ರಸ್ತಾವಣೆಯನ್ನು ಆಡಳಿತ ಮಂಡಳಿ ಸಭೆಯ ಪರಿಶೀಲಿಸಿಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

ಮಾರ್ಚ/ಎಪ್ರೀಲ್ 2022 ರಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳು ಜರುಗಿರುತ್ತವೆ ಈ ವಿಷಯವಾಗಿ ಪರೀಕ್ಷಾ ಕೇಂದ್ರಗಳಿಗೆ ಬೇಟಿ ನೀಡಿ ಪರಿಶೀಲಿಸಲು ಕವಿವಿ ನಿಯಮಾನುಸಾರ ಪ್ರತಿ ಜಿಲ್ಲೆಗೊಂದು ವಿಚಕ್ಷಣ ದಳವನ್ನು ರಚಿಸಲಾಗಿರುತ್ತದೆ. ಸದರ ವಿಚಕ್ಷಕ ದಳವು ಪ್ರತಿ ಪರೀಕ್ಷಾ ಕೇಂದ್ರಕ್ಕೆ ಬೇಟಿ ನೀಡಿ ನಕಲು ಪ್ರಕರಣಗಳು ಸಿಕ್ಕಾಗ ಅವುಗಳ ಧಾಖಲಾತಿಗಳನ್ನು ವಶಪಡಿಸಿಕೊಂಡು ಅವುಗಳೊಂದಿಗೆ ಉತ್ತರ ಪತ್ರಿಕೆಯನ್ನು ಶೀಲ್ಡ ಕವರನಲ್ಲಿ ಕವಿವಿ ಮರು ಮಲ್ಯಮಾಪನ ಕೇಂದ್ರಕ್ಕೆ ಪ್ರಾಚಾರ್ಯರ ಮುಖಾಂತರ ರವಾನಿಸಿರುತ್ತಾರೆ.

ಮುಂದುವರೆದು ನಾಲ್ಕು ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಲ್ಲಿ ನಕಲು ಪ್ರಕರಣಗಳಲ್ಲಿ ಸಂಖ್ಯೆ ಗನುಗುಣವಾಗಿ ರಾಜ್ಯ ಸರಕಾರದ ಆದೇಶ ಸಂಖ್ಯೆ GS-03KUM-2018 Date 03.07.2018 ಪ್ರತಿಯಲ್ಲಿ R.8. Schedule of Punishment for Mallpractice/Indisepline /Impersonation ರ ಕ್ರಮ ಸಂಖ್ಯೆ:17 ರ ಪ್ರಕಾರ ಈ ಕೆಳಗಿನಂತೆ ನಕಲು ಪ್ರಕರಣಗಳಿಗೆ ದಂಡದ ಮೊತ್ತವನ್ನು ನಿಗದಿಗೊಳಿಸಲಾಗಿದೆ.

| | |
|---|---|
| Mass Copying | "The, performance of the candidates in the particular block of the examination centre alleged to be indulged in mass copying shall be cancelled for that semester/year. The Syndicate shall levy a suitable penalty in the Institution as under".<br>25,000/- up to 05 MPC cases<br>50,000/- from 06-10 MPC cases<br>1,00,000/- for above 10 MPC cases and cacellation of examination centre for a minimum period of 05 years |

ಸದರ ವಿಷಯವಾಗಿ ಶ್ರೀ. ಸಂದೀಪ ಬೂದಿಹಾಳ ಸಿಂಡಿಕೇಟ ಸದಸ್ಯರು ಇವರು ಮಾರ್ಚ/ಎಪ್ರೀಲ್ - 2022 ರಲ್ಲಿ ಜರುಗಿದ ಸ್ನಾತಕ /ಸ್ನಾತಕೋತ್ತರ ಪರೀಕ್ಷೆಗಳಲ್ಲಿ ನಕಲು (MPC) ಪ್ರಕರಣಗಳಿಗೆ ವಿಧಿಸಿದ ದಂಡದ ಹಣ ಭರಣ ಮಾಡುವ ವಿಷಯವನ್ನು ಪರಾಮರ್ಶಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಸದರ ವಿಷಯವನ್ನು ಆಡಳಿತ ಮಂಡಳಿ ಸಭೆಯ ಚರ್ಚೆಗಾಗಿ ಮಂಡಿಸಲಾಯಿತು.

## ನಿರ್ಣಯ

ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-21: ವಿಷಯ-: ಬಿಸಿಎ 1ನೇ ಸೆಮೆಸ್ಟರ್ 'Computer Concepts & C Programming' (Non-CBCS/CBCS) ವಿಷಯದ ಪರೀಕ್ಷೆಗಳನ್ನು ದಿನಾಂಕ 05.04.2022 ಹಾಗೂ ದಿನಾಂಕ 18.04.2022 ರಂದು ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಪರೀಕ್ಷೆಗಳನ್ನು ಜರುಗಿಸಿರುವ ಬಗ್ಗೆ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

ಗ್ಲೋಬಲ್ ಇನ್ನೋವೇಟಿವ್ ಮಹಾವಿದ್ಯಾಲಯ, ಹುಬ್ಬಳ್ಳಿ ಇವರು ದಿನಾಂಕ. **05.04.2022** ರಂದು ಜರುಗಬೇಕಿದ್ದ "Computer Concepts & C Programming"(Non-CBCS) ಬಿಸಿಎ 1ನೇ ಸೆಮೆಸ್ಟರ್ ಪರೀಕ್ಷೆಯಲ್ಲಿ ದಿನಾಂಕ 18.04.2022 ರಂದು ಜರುಗಬೇಕಾಗಿದ್ದ "Computer Concepts & C Programming"(CBCS) ವಿಷಯದ ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಪರೀಕ್ಷೆಗಳನ್ನು ಜರುಗಿಸಿದ್ದು ಸದರಿ ಪರೀಕ್ಷೆಯಲ್ಲಿ 07 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿರುತ್ತಾರೆ. ಮುಂದುವರೆದು, ದಿನಾಂಕ 18.04.2022 ರಂದು ಜರುಗಿದ "Computer Concepts & C Programming"(CBCS) ವಿಷಯದ ಪರೀಕ್ಷೆಗೆ 4 ಜನ ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಿಗೂ ಸಹ ಅದೇ ಪ್ರಶ್ನೆ ಪತ್ರಿಕೆಯನ್ನು ನೀಡಿ ಪರೀಕ್ಷೆಯನ್ನು ಜರುಗಿಸಿರುವ ವಿಷಯವು ಮೌಲ್ಯಮಾಪನ ಮಾಡುವ ಸಮಯದಲ್ಲಿ ಕಂಡು ಬಂದಿರುವುದನ್ನು ಮುಖ್ಯ ಸಂಯೋಜಕರು ಕುಲಸಚಿವರು (ಮೌಲ್ಯಮಾಪನ) ಇವರ ಗಮನಕ್ಕೆ ತಂದಿರುತ್ತಾರೆ.

ಮೇಲ್ಕಾಣಿಸಿದಂತೆ ಮುಖ್ಯ ಸಂಯೊಜಕರು, ಬಿಬಿಎ/ಬಿಸಿಎ ವಿಷಯಗಳು ಇವರು ಸಲ್ಲಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು ಪರಿಶೀಲಿಸಲು ದಿನಾಂಕ.04.05.2022 ರಂದು ಸಾಯಂಕಾಲ 4.30 ಘಂಟೆಗೆ ಸಿಂಡಿಕೇಟ್ ಸಭಾ ಭವನದಲ್ಲಿ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಹಾಗೂ ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ ಇವರ ಸಮ್ಮುಖದಲ್ಲಿ ಗ್ಲೋಬಲ್ ಇನ್ನೋವೇಟಿವ್ ಮಹಾವಿದ್ಯಾಲಯ, ಹುಬ್ಬಳ್ಳಿಯ ಪ್ರಾಚಾರ್ಯರು/ ಆಂತರಿಕ ಮುಖ್ಯ ಅಧೀಕ್ಷಕರಾದ ಶ್ರೀಮತಿ. ಸಾಜಿದಾ ಶೇಖ್ ಹಾಗೂ ಕವಿವಿಯಿಂದ ನಿಯೋಜಿಸಿದ ಬಾಹ್ಯ ಮುಖ್ಯ ಅಧೀಕ್ಷಕರಾದ ಶ್ರೀ. ತಿಪ್ಪೇಶ ಮರಿಗೌಡರ್, ನೆಹರು ಮಹಾವಿದ್ಯಾಲಯ, ಹುಬ್ಬಳ್ಳಿ ಹಾಗೂ ಗ್ಲೋಬಲ್ ಇನ್ನೋವೇಟಿವ್ ಮಹಾವಿದ್ಯಾಲಯದ ಫ್ಯಾಕ್ಟೋಟಮ್ ಆದ ಶ್ರೀಮತಿ ಪೂರ್ಣಿಮಾ ಶೆಟ್ಟಿ ಇವರನ್ನು ಕರೆದು ಸದರ ವಿಷಯವಾಗಿ ಕೂಲಂಕುಷವಾಗಿ ವಿಚಾರಿಸಲಾಗಿ ಅವರುಗಳು ತಾವು ಮಾಡಿರುವ ತಪ್ಪನ್ನು ಒಪ್ಪಿಕೊಂಡು ತಮ್ಮ ಲಿಖಿತ ವಿವರಣೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಸದರ ವಿಷಯವನ್ನು ಮಾನ್ಯ ಕುಲಪತಿಗಳ ಆದೇಶದಂತೆ ಸದರ ಮಹಾವಿದ್ಯಾಲಯ ಸೇರಿ ಒಟ್ಟು 25 ಬಿಸಿಎ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ದಿನಾಂಕ 30.06.2022 ರಂದು ಮರು ಪರೀಕ್ಷೆ ಜರುಗಿಸಲಾಗಿದೆ.

ಆದ್ದರಿಂದ, ಸದರ ವಿಷಯ ಕುರಿತು ಪರೀಕ್ಷಾ ಕಾರ್ಯ ನಿರ್ವಹಿಸುವ ವೇಳೆಯಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ No.GS03KUM2018 Dated: 03.07.2018 ರನ್ವಯ ನಿಯಮಾನುಸಾರ ಪರೀಕ್ಷಾ ವೆಚ್ಚವನ್ನು ಸಂಬಂಧಿಸಿದ ಸಿಬ್ಬಂದಿಗೆ ಭರಿಸುವ ಕುರಿತು ಆದೇಶಕ್ಕಾಗಿ ಮಂಡಿಸಲಾಗಿತ್ತು ಅದರಂತೆ ಮಾನ್ಯ ಕುಲಪತಿಗಳ ಆದೇಶದಂತೆ ಪರೀಕ್ಷಾ ವೆಚ್ಚ ರೂ. 1,41,755/-ದೊಂದಿಗೆ ದಂಡದ ಶುಲ್ಕ ವಿಧಿಸುವ ವಿಷಯವಾಗಿ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-22: ವಿಷಯ-: ಡಾ.ಎಚ್.ಎಚ್.ಉಳಿವೆಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರ ಸೇವಾವಧಿಯಲ್ಲಿ ಸದರಿಯವರಿಗೆ ಸೇವಾವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳನ್ನು ಫೀಡರ್‌ಕೇಡರ್ ಅಡಿಯಲ್ಲಿ ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು, 2006 ರ ಪರಿಷ್ಕೃತ ವೇತನ ಶ್ರೇಣಿಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಿದ ಕುರಿತು ಹಾಗೂ ಸದರಿಯವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಮತ್ತು ಹಣಕಾಸು ಸಮಿತಿ ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸುವ ಕುರಿತು.

ಪ್ರಸ್ತಾವನೆ:

**ಡಾ.ಎಚ್.ಎಚ್.ಉಳಿವೆಪ್ಪ**, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರು ದಿನಾಂಕ.28.02.2017 ರಂದು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಶ್ರೀಯುತರಿಗೆ ಸೇವಾವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳನ್ನು ಫೀಡರ್‌ಕೇಡರ್ ಅಡಿಯಲ್ಲಿ ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು, 2006 ರ ಪರಿಷ್ಕೃತ ವೇತನ ಶ್ರೇಣಿಗಳ ಸಿ.ಎ.ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಿದ ಕುರಿತು ಹಾಗೂ ಸದರಿಯವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತು **2011-12, 2012-13, 2013-14, 2014-15, 2015-16 ಮತ್ತು 2016-17 ನೇ ಸಾಲಿನ ಬೋಧಕ ಸಿಬ್ಬಂದಿಗಳ ವೇತನ ವಿಭಾಗದ ಲೆಕ್ಕ ಪರಿಶೋಧನಾ ವರದಿಯ ವಿವಿಧ ಕಂಡಿಕೆಗಳಲ್ಲಿ** ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿಯವರ ನಿವೃತ್ತಿ ಉಪದಾನದಲ್ಲಿ ಆಕ್ಷೇಪಣಾ ಮೊತ್ತ ರೂ.4,19,771/-ಗಳನ್ನು ಮಾತ್ರ ತಡೆಹಿಡಿದು ಬಾಕಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, **ಡಾ.ಎಚ್.ಎಚ್.ಉಳಿವೆಪ್ಪ** ಇವರ ಸೇವಾವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳನ್ನು ಫೀಡರ್‌ಕೇಡರ್ ಅಡಿಯಲ್ಲಿ ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು, 2006 ರ ಪರಿಷ್ಕೃತ ವೇತನ ಶ್ರೇಣಿಗಳ ಸಿ.ಎ.ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಿದ ಕುರಿತು ಹಾಗೂ ಸದರಿಯವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸೂಕ್ತ ಅನುಸರಣೆಯನ್ನು ಸಲ್ಲಿಸುವುದು ಅವಶ್ಯಕವಾಗಿರುತ್ತದೆ.

ಆದುದರಿಂದ, **ಡಾ.ಎಚ್.ಎಚ್.ಉಳಿವೆಪ್ಪ** ಇವರ ಸೇವಾ ವಹಿ ಹಾಗೂ ವೈಯಕ್ತಿಕ ಕಡತವನ್ನು ಪರಿಶೀಲಿಸಲಾಗಿ, ಸದರಿಯವರು **ದಿನಾಂಕ.03.06.1985** ರ **ಈ ಕಚೇರಿ ಆದೇಶ ಸಂಖ್ಯೆ:ಕೆಯು/ಇಸಿಓ/ಎಸ್‌ಆರ್‌ಟಿ/85/1456** ರನ್ವಯ ಅರ್ಥಶಾಸ್ತ್ರ ವಿಭಾಗದ ಉಪನ್ಯಾಸಕ ಹುದ್ದೆಗೆ ನೇಮಕಗೊಂಡು ಮುಂದೆ **ದಿನಾಂಕ:21.06.1985** ರಂದು ಸೇವೆಗೆ ವರದಿ ಮಾಡಿಕೊಂಡಿರುತ್ತಾರೆ. **ಅಗಸ್ಟ 1992** ರಲ್ಲಿ **"ಅರ್ಥಶಾಸ್ತ್ರ"** ವಿಷಯದಲ್ಲಿ **"ಪಿಎಚ್.ಡಿ.,"** ಪದವಿಯನ್ನು ಹೊಂದಿರುತ್ತಾರೆ.

ಮುಂದುವರೆದು, ನಂತರದಲ್ಲಿ **ಡಾ.ಎಚ್.ಎಚ್.ಉಳಿವೆಪ್ಪ** ಇವರು ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇಲ್ಲಿ, **ದಿನಾಂಕ:09.03.1996** ರ **ಈ ಕಚೇರಿ ಆದೇಶ ಸಂಖ್ಯೆ:ಕೆಯು/ಡಿಪಿಎಆರ್/ಎಸ್‌ಆರ್‌ಟಿ/96/9386** ರನ್ವಯ **"ಪ್ರವಾಚಕ"** ಹುದ್ದೆಗೆ ನೇಮಕಗೊಂಡು **ದಿನಾಂಕ:14.03.1996** ರಂದು ಸೇವೆಗೆ ವರದಿ ಮಾಡಿಕೊಂಡಿರುತ್ತಾರೆ.

ಸದರಿಯವರಿಗೆ **ದಿನಾಂಕ 24.12.2009** ರ ಸರ್ಕಾರಿ ಆದೇಶ **ಸಂಖ್ಯೆ:ಇಡಿ 37 ಯುಎನ್‌ಇ 2009** ರ ಮೇರೆಗೆ ಪ್ರಾಧ್ಯಾಪಕ ಹುದ್ದೆಯಲ್ಲಿ ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯ ವೇತನದಲ್ಲಿ ವೇತನವನ್ನು ಪರಿಷ್ಕರಿಸಲಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

"ಪ್ರವಾಚಕ" ಹುದ್ದೆಯ ಅರ್ಹತಾ (ಪದೋನ್ನತಿ/ಸ್ಥಾನಿಕರಣ) ದಿನಾಂಕವನ್ನು ಹಾಗೂ "ಪ್ರಾಧ್ಯಾಪಕ" ಪದೋನ್ನತಿಯನ್ನು **ದಿನಾಂಕ.15.11.1999 ರ ಸರ್ಕಾರಿ ಆದೇಶ ಸಂಖ್ಯೆ.ಇಡಿ 100 ಯುಎನ್‌ಇ 99 ರ** ಮೂಲಕ ಜಾರಿಯಾದ **1996 ರ ಯುಜಿಸಿ ವೇತನ ಶ್ರೇಣಿ ಆದೇಶದ ಕಂಡಿಕೆ ಸಂಖ್ಯೆ.16 ಹಾಗೂ ದಿನಾಂಕ.06.03.2012 ರ ಸರ್ಕಾರದ ಪತ್ರ ಸಂಖ್ಯೆ.ಇಡಿ 33 ಯುಕೆವಿ 2012** ರಲ್ಲಿ ಕಲ್ಪಿಸಲಾದ ಅವಕಾಶದನ್ವಯ ಪದೋನ್ನತಿಗೆ ನಿಗದಿಪಡಿಸಿದ ವರ್ಷಗಳನ್ನು ಸರಿಹೊಂದಿಸಿದಂತೆ **ಫೀಡರ್‌ಕೇಡರ್ ಅಡಿಯಲ್ಲಿ** ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿ ಈ ಕೆಳಗಿನಂತೆ ನಿಗದಿಪಡಿಸಿ ಆದೇಶ ಜಾರಿ ಮಾಡಿದ್ದು ಗಮನಕ್ಕೆ ಬಂದಿರುತ್ತದೆ.

| ಅ.ಸಂ. | ಪದನಾಮ | ಪರಿಷ್ಕರಣಾ ಪೂರ್ವ ಪದೋನ್ನತಿ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ | ಪರಿಷ್ಕೃತ ಪದೋನ್ನತಿ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ |
|---|---|---|---|---|---|
| 01. | ಪ್ರವಾಚಕ | 09.03.1996 (ನೇಮಕ) | 9328/09.03.1996 | 20.03.1995 | 656/11.05.2009 |
| 02. | ಪ್ರಾಧ್ಯಾಪಕ | 09.03.2004 | 6809/03.03.2006 | 20.03.2003 | |

ಡಾ.ಎಚ್.ಎಚ್.ಉಳಿವೆಪ್ಪ ಇವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತು ಮಾನ್ಯ ಲೆಕ್ಕ ಪರಿಶೋಧಕರ ಆಕ್ಷೇಪಣೆಗೆ ಸಂಬಂಧಿಸಿದಂತೆ, ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಬೆಳಗಾವಿ ಇವರು **ದಿನಾಂಕ:08.02.2016 ರ ಕಚೇರಿ ಪತ್ರ ಸಂಖ್ಯೆ:ಪ್ರಾಂಕಬೆ/ಕವಿವಿಧಾ/ಲೆಪ/ ಅನುಸರಣೆ/2015-16/430** ರನ್ವಯ ತೀರುವಳಿಗೊಂಡಿರುತ್ತದೆ.

ಮುಂದುವರೆದು, ಇಲ್ಲಿ ನಿವೇದಿಸುವುದೇನೆಂದರೆ, ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಪೂರಕ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ಲೆಕ್ಕ ಪರಿಶೋಧಕರ ಆಕ್ಷೇಪಣೆಯ ಕುರಿತಂತೆ ದಿನಾಂಕ:10.12.2021 ರಂದು ಜರುಗಿದ ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿರುತ್ತದೆ.

**ಹಣಕಾಸು ಸಮಿತಿ ಸಭೆಯ ಠರಾವು ಸಂಖ್ಯೆ 5 ದಿನಾಂಕ:10.12.2021**

**"ಡಾ.ಎಚ್.ಎಚ್.ಉಳಿವೆಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರ ಸೇವಾವಧಿಯಲ್ಲಿ ಸದರಿಯವರಿಗೆ ಸೇವಾವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳನ್ನು ಫೀಡರ್ ಕೇಡರ್ ಅಡಿಯಲ್ಲಿ ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು, 2006 ರ ಪರಿಷ್ಕೃತ ವೇತನ ಶ್ರೇಣಿಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಿದ ಕುರಿತು ಹಾಗೂ ಸದರಿಯವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಈಗಾಗಲೇ ಇಂತಹ ಪ್ರಕರಣಗಳಲ್ಲಿ ಕಂಡಿಕೆಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಕೈಬಿಡಲಾಗಿದ್ದು, ಅದರಂತೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಸಭೆಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."**

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, **ಡಾ.ಎಚ್.ಎಚ್.ಉಳಿವೆಪ್ಪ**, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರ ಸೇವಾವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳನ್ನು ಫೀಡರ್ ಕೇಡರ್ ಅಡಿಯಲ್ಲಿ ಪರಿಷ್ಕರಿಸಿ, ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು, 2006 ರ ಪರಿಷ್ಕೃತ ವೇತನ ಶ್ರೇಣಿಗಳ ಸಿ.ಎ.ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಿದ ಕುರಿತು ಹಾಗೂ ಸದರಿಯವರಿಗೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾನ್ಯ ಕುಲಾಧಿಪತಿಗಳ ಆದೇಶ ಪಡೆಯದೇ ವರ್ಗಾವಣೆಗೆ ಅನುಮತಿಸಿರುವ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಾಗೂ ಈ ಬಗ್ಗೆ ಹಣಕಾಸು ಸಮಿತಿ ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು | ಕುಲಪತಿಗಳು

**ಕಲಂ ಸಂಖ್ಯೆ–23: ವಿಷಯ–:** ಡಾ.ಬಿ.ಬಿ.ಕಲಿವಾಳ, ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರಿಗೆ ಸೇವಾವಧಿಯಲ್ಲಿ ಫೀಡರ್ ಕೇಡರ್/ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಬಗ್ಗೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:

ಡಾ.ಬಿ.ಬಿ.ಕಲಿವಾಳ, ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರು ದಿನಾಂಕ. **31.07.2016** ರಂದು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಸದರಿಯವರಿಗೆ ಸೇವಾವಧಿಯಲ್ಲಿ ಫೀಡರ್ ಕೇಡರ್/ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಬಗ್ಗೆ ಮಾನ್ಯ ಲೆಕ್ಕ ಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಸದರಿಯವರಿಗೆ ಅವರ ನಿವೃತ್ತಿ ಉಪದಾನಗಳನ್ನು ತಡೆಹಿಡಿದು ನಿವೃತ್ತಿ ವೇತನ ಮಾತ್ರ ಮಂಜೂರು ಮಾಡಲಾಗಿರುತ್ತದೆ. ವರ್ಷವಾರು ಮಾನ್ಯ ಸರ್ಕಾರಿ ಲೆಕ್ಕ ಪರಿಶೋಧಕರು ಸಲ್ಲಿಸಿದ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಲಾಗಿ, ಶ್ರೀಯುತರಿಗೆ ಸೇವಾವಧಿಯಲ್ಲಿ ಫೀಡರ್ ಕೇಡರ್/ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು ***2011–12, 2012–13, 2013–14, 2014–15, 2015–16 ಮತ್ತು 2016–17 ನೇ ಸಾಲಿನ ಬೋಧಕ ಸಿಬ್ಬಂದಿಗಳ ವೇತನ ವಿಭಾಗದ ಲೆಕ್ಕ ಪರಿಶೋಧನಾ ವರದಿಯ ವಿವಿಧ ಕಂಡಿಕೆಗಳಲ್ಲಿ*** ಈ ಕೆಳಕಂಡಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ಇರುತ್ತದೆ.

*2011–12, 2012–13, 2013–14, 2014–15, 2015–16 ಮತ್ತು 2016–17 ನೇ ಸಾಲಿನ ಬೋಧಕ ಸಿಬ್ಬಂದಿಗಳ ವೇತನ ವಿಭಾಗದ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ. 04, 04, 03, 03 ಮತ್ತು 05.*

*ಪ್ರಾಧ್ಯಾಪಕರುಗಳಿಗೆ ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ಪರಿಷ್ಕರಿಸಿರುವುದು.*

ಕರ್ನಾಟಕ ವಿಶ್ವವಿದ್ಯಾಲಯದ ಪ್ರವಾಚಕರಿಗೆ ಫೀಡರ್ ಕೇಡರ್ ಸೌಲಭ್ಯ ನೀಡಿರುವ ಕುರಿತು ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ಇದ್ದಾಗ್ಯೂ ಸದರಿ ಆದೇಶಗಳನ್ನು ಹಿಂಪಡೆದು ಅವರ ಪದೋನ್ನತಿ ನೀಡಿಕೆಯನ್ನು ಸರಿಪಡಿಸಿ ಹೆಚ್ಚುವರಿ ವೇತನ ಭತ್ಯಗಳನ್ನು ವಸೂಲಿ ಮಾಡಲು ಯಾವ ಕ್ರಮ ಕೈಗೊಳ್ಳದೇ ಸದರಿ ಫೀಡರ್ ಕೇಡರ್ ಅಡಿಯಲ್ಲಿ ಹಾರ್ಡಶಿಪ್ ಎಂದು ಪ್ರಾಧ್ಯಾಪಕರ ಹುದ್ದೆಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕೆಲವು ಹಿರಿಯ ಬೋಧಕ ಸಿಬ್ಬಂದಿಯವರಿಗೆ ಸಹಿತ ಅನಿಯಮಿತವಾಗಿ ಅವರು ಹುದ್ದೆಗೆ ಸೇರಿದ ದಿನಾಂಕದಿಂದ ಆ ಅವಧಿಯಲ್ಲಿ ಪ್ರಚಲಿತ ವಿದ್ದ ಯುಜಿಸಿ ವೇತನ ಶ್ರೇಣಿಗಳು 1973, 1986 ಮತ್ತು 1996 ರ ನಿಯಮಗಳಲ್ಲಿ ಅವಕಾಶವಿಲ್ಲದಿದ್ದಾಗ್ಯೂ ಪರಿಗಣಿಸಿ ಪದೋನ್ನತಿ ನೀಡಲಾಗಿರುತ್ತದೆ.

ಈ ಕುರಿತು ಪರಿಶೀಲಿಸಲಾಗಿ ಯುಜಿಸಿ 1973 ವೇತನ ಶ್ರೇಣಿಗಳಲ್ಲಿ ಕರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್ ಎಂಬ ಪದೋನ್ನತಿ ಪರಿಕಲ್ಪನೆಯೇ ಇರುವುದಿಲ್ಲ. ದಿನಾಂಕ: 01.01.1986 ಕ್ಕಿಂತ ಪೂರ್ವದಲ್ಲಿ ಸದರಿ ಪ್ರಾಧ್ಯಾಪಕರುಗಳಿಗೆ ಹಿರಿಯ ಶ್ರೇಣಿ ಎಂದು ಅವರು ನಾಲ್ಕು ವರ್ಷ ಸೇವೆ ಸಲ್ಲಿಸಿರುವುದಕ್ಕೆ ಒಂದು ವೇತನ ಬಡ್ತಿಯನ್ನು ನೀಡಿ ದಿನಾಂಕ: 01.01.1986 ರಂದು ಹೊಸ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಹಿರಿಯ ವೇತನ ಶ್ರೇಣಿ `. 3000–5000 ರಲ್ಲಿ ಎಂದು ಅವರ ವೇತನ ನಿಗದಿ ಮಾಡಲಾಗಿದೆ. 1973 ರ ವೇತನ ಶ್ರೇಣಿಯಲ್ಲಿ ಹಿರಿಯ ವೇತನ ಶ್ರೇಣಿ ಎಂದು ಇರುವುದಿಲ್ಲವಾದ ಕಾರಣ ಅವರುಗಳಿಗೆ ಅಲ್ಲಿ ಹಿರಿಯ ವೇತನ ಶ್ರೇಣಿಯಲ್ಲಿ ಒಂದು ವೇತನ ಬಡ್ತಿ ನೀಡಿರುವುದನ್ನು ಸರಿ ಎನ್ನಲಾಗುವುದಿಲ್ಲ. ಅದರಂತೆ ಯು.ಜಿ.ಸಿ 1986 ರ ವೇತನ ಶ್ರೇಣಿಗಳಲ್ಲಿ ಉಪನ್ಯಾಸಕ, ಉಪನ್ಯಾಸಕ ಹಿರಿಯ ವೇತನ ಶ್ರೇಣಿ, ಆಯ್ಕೆ ವೇತನ ಶ್ರೇಣಿ ಪ್ರವಾಚಕ, ಹಾಗೂ ಪ್ರಾಧ್ಯಾಪಕ ವೃಂದಗಳಿದ್ದು ಅವುಗಳ ವೇತನ ಶ್ರೇಣಿ ಕ್ರಮವಾಗಿ `. 2200–4000, `. 3000–5000, `. 3700–5700 ಮತ್ತು `.4500–7300 ಇರುತ್ತದೆ. ಅವುಗಳಲ್ಲಿ ಕಾರ್ಯ ನಿರತ ಬೋಧಕ ಸಿಬ್ಬಂದಿಗೆ ಸಿ.ಎ.ಎಸ್. ಅಡಿಯಲ್ಲಿ ನಿಯಮ–11 ಮತ್ತು 12 ರಲ್ಲಿ ಪದೋನ್ನತಿ ನೀಡಲು ಈ ಕೆಳಗಿನಂತೆ ಅವಕಾಶಗಳಿರುತ್ತವೆ.

1) ದಿನಾಂಕ: 01.01.1996 ರಂದು ಪಿ.ಎಚ್.ಡಿ/ಎಂ.ಫಿಲ್ ಪದವಿ ಹೊಂದಿದ್ದು ಪದೋನ್ನತಿ ಕುರಿತು ಇತರೆ ನಿಬಂಧನೆಗಳನ್ನು ಪೂರೈಸಿರುವ ಸೇವೆಯಲ್ಲಿರುವ `.700–1600 ರ ವೇತನ ಶ್ರೇಣಿಯಲ್ಲಿ ಕಾರ್ಯನಿರತ ಉಪನ್ಯಾಸಕರ ವೇತನವನ್ನು `2200–4000 ರಲ್ಲಿ ನಿಗದಿಪಡಿಸಿ ಅವರು (5) ಐದು/ (7) ಏಳು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ ಅವರಿಗೆ `.3000–5000 ವೇತನ ಶ್ರೇಣಿ (ಹಿರಿಯ ವೇತನ ಶ್ರೇಣಿ) ಉಪನ್ಯಾಸಕರೆಂದು ಪದೋನ್ನತಿ ನೀಡಬಹುದಾಗಿರುತ್ತದೆ. ಮತ್ತು ಇತರರಿಗೆ ಎಂಟು (8) ವರ್ಷಕ್ಕೆ ನೀಡಬಹುದಾಗಿದೆ.

2) ಅದೇ ರೀತಿ ಹಿರಿಯ ವೇತನ ಶ್ರೇಣಿ `.3000–5000 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು ಎಂಟು (8) ವರ್ಷಗಳ ಅರ್ಹತಾದಾಯಕ ಸೇವೆಯನ್ನು ಸಲ್ಲಿಸಿದ್ದು ಇತರೆ ನಿಬಂಧನೆಗಳನ್ನು ಪೂರೈಸಿದ್ದಲ್ಲಿ ಅವರಿಗೆ `. 3700–5700 ರಲ್ಲಿ ಆಯ್ಕೆ ವೇತನ ಶ್ರೇಣಿ/ ಪ್ರವಾಚಕ ಹುದ್ದೆಗೆ ಆಯ್ಕೆ ಸಮಿತಿ ಮುಖಾಂತರ ಪದೋನ್ನತಿ ನೀಡಲು ಅವಕಾಶಗಳಿರುತ್ತವೆ. ಹಾಗೂ ನಂತರದ (8) ಎಂಟು ವರ್ಷಗಳಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲು ಅವಕಾಶಗಳಿರುತ್ತವೆ.

ಈ ಎಲ್ಲ 1973 ಮತ್ತು 1986 ರ ವೇತನ ಶ್ರೇಣಿಗಳಲ್ಲಿ ನಿರ್ಧಿಷ್ಟಪಡಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳನ್ನು ಪರಿಗಣಿಸದೇ 1996 ರ ಯು.ಜಿ.ಸಿ ವೇತನ ಶ್ರೇಣಿಗಳಲ್ಲಿ ತಿಳಿಸಲಾಗಿರುವ ಪಿ.ಹೆಚ್.ಡಿ ಪದವಿ ಹೊಂದಿದ ಉಪನ್ಯಾಸಕರುಗಳಿಗೆ 4 ವರ್ಷಗಳಿಗೆ, ಎಂ.ಫಿಲ್ ಹೊಂದಿದವರಿಗೆ 5 ವರ್ಷಗಳಿಗೆ ಮತ್ತು ಇತರರಿಗೆ 6 ವರ್ಷಗಳಿಗೆ ಹಿರಿಯ ವೇತನ ಶ್ರೇಣಿ, 5 ವರ್ಷ ಸೇವೆಯನ್ನು ಸಲ್ಲಿಸಿದವರಿಗೆ ಆಯ್ಕೆ ವೇತನ ಶ್ರೇಣಿ/ ಪ್ರವಾಚಕ ಮತ್ತು ಈ ಹುದ್ದೆಗಳಲ್ಲಿ 8 ವರ್ಷ ಸೇವೆ ಸಲ್ಲಿಸಿದವರಿಗೆ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ಒಟ್ಟು ಪಿ.ಹೆಚ್.ಡಿ ಹೊಂದಿದವರು 17 ವರ್ಷಗಳಲ್ಲಿ, ಎಂ.ಫಿಲ್

ಕುಲಸಚಿವರು                                                                 ಕುಲಪತಿಗಳು

ಪದವಿಯವರು 18 ವರ್ಷಗಳಿಗೆ ಮತ್ತು ಇತರರು 19 ವರ್ಷಗಳಿಗೆ ಉಪನ್ಯಾಸಕರ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆ ಪಡೆಯುವ ಅವಕಾಶವನ್ನು ಅನಿಯಮಿತವಾಗಿ, ಹಿಂದಿನ ವೇತನ ಶ್ರೇಣಿಗಳಲ್ಲಿ ತಿಳಿಸಿದ ಅವಕಾಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ನೀಡಲಾಗಿದೆ ಮತ್ತು ಈ ರೀತಿ ಪದೋನ್ನತಿಯನ್ನು ಅವರಿಗೆ ಹಿಂದಿನ ದಿನಾಂಕದಿಂದಲೇ ನೀಡಿರುವುದಕ್ಕೆ ನಿಯಮಾನುಸಾರ ಆಯ್ಕೆ ಸಮಿತಿಯಿಂದ ಅವರನ್ನು ಅರ್ಹಗೊಳಿಸಿದ ಬಗ್ಗೆ ಯಾವ ದಾಖಲೆಗಳು ಕಂಡು ಬರುವುದಿಲ್ಲ. ಮತ್ತು ಅವರು ಪೂರ್ವಾನ್ವಯವಾಗಿ ನೀಡಿದ ಬಡ್ತಿ ದಿನಾಂಕದಂದು ಎಲ್ಲ ಅರ್ಹತೆ ಹೊಂದಿರುವ ಕುರಿತು ಸಹ ಯಾವ ಮಾಹಿತಿ ಲಭ್ಯಪಡಿಸಲಾಗಿಲ್ಲ. 2010-11 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಈ ರೀತಿ ಅನಿಯಮಿತವಾಗಿ ಹಾರ್ಡಶಿಪ್ ನೀಡಲಾದ ಪ್ರಕರಣಗಳನ್ನು ಅವರ ಸ್ಥಾನೀಕರಣ ದಿನಾಂಕದೊಂದಿಗೆ ವಿವರಿಸಲಾಗಿದೆ.

ಈ ಅಂಶಗಳ ಹಿನ್ನಲೆಯಲ್ಲಿ ಎಲ್ಲ ವೇತನ ಶ್ರೇಣಿಗಳಲ್ಲಿನ ನಿಯಮಗಳನ್ನು ಪುನಃ ಪರಿಶೀಲಿಸಿ ಈ ರೀತಿ ಅನಿಯಮಿತವಾಗಿ ಫೀಡರ್ ಕೇಡರ್, ಹಾರ್ಡಶಿಪ್ ಎಂದು ಪ್ರಾಧ್ಯಾಪಕರುಗಳಿಗೆ ಪದೋನ್ನತಿ/ ಸ್ಥಾನೀಕರಣ ನೀಡಿರುವುದನ್ನು ಹಿಂದಕ್ಕೆ ಪಡೆದು, ಅವರ ಪದೋನ್ನತಿ/ಸ್ಥಾನೀಕರಣವನ್ನು ಪುನರ್ ನಿಗದಿಪಡಿಸಿ ಅನುಸರಣೆ ನೀಡುವಂತೆ ತಿಳಿಸಲಾದ ಹೊರತಾಗಿಯೂ ಇದುವರೆಗೂ ಯಾವುದೇ ಪರಿಣಾಮಕಾರಿ ಕ್ರಮಕೈಗೊಂಡು ಅನುಸರಣಾ ವರದಿ ನೀಡಿಲ್ಲ.

ಈ ಹಿನ್ನೆಲೆಯಲ್ಲಿ ದಿನಾಂಕ: 01.01.2006 ರಿಂದ 24.12.2009 ರ ಒಳಗಡೆ ಈಗಾಗಲೇ ಮಂಜೂರಿ ಮಾಡಲಾಗಿರುವ ಮತ್ತು ಅರ್ಹತಾ ದಿನಾಂಕಗಳಂದು ಮಂಜೂರು ಮಾಡಬೇಕಾದ ಎ.ಜಿ.ಪಿ ಯೊಂದಿಗೆ ವೇತನದ ಬದಲಾವಣೆ ಮುಂತಾದ ಪ್ರಕರಣಗಳನ್ನು ದಿನಾಂಕ: 24.12.2009 ರಿಂದ ಮಾತ್ರ ನೀಡಬೇಕಾಗುತ್ತದೆ. ಆದರೆ ಮೇಲ್ಕಾಣಿಸಿದಂತೆ ಫೀಡರ್ ಕೇಡರ್ ಅಡಿಯಲ್ಲಿ ನೀಡಲಾಗಿರುವ ಪದೋನ್ನತಿ ಮತ್ತು ಸ್ಥಾನೀಕರಣ ಸೌಲಭ್ಯವನ್ನು ಸರಕಾರದ ಆದೇಶ ದಿನಾಂಕ: 24.12.2009 ರಲ್ಲಿ ತಿಳಿಸಲಾದಂತೆ ದಿನಾಂಕ: 24.12.2009 ರಿಂದ ಮಾತ್ರ ಅನ್ವಯಿಸಿ ಮಂಜೂರಿ ಮಾಡದೇ ಅರ್ಹತಾ ದಿನಾಂಕಗಳಿಂದಲೇ ಮಂಜೂರಿ ಮಾಡಿರುವುದು ಸರಕಾರದ ಆದೇಶಕ್ಕೆ ವ್ಯತಿರಿಕ್ತವಾಗಿರುತ್ತದೆ. ಇಂತಹ ಕ್ರಮ-ಬದ್ಧವಲ್ಲದ ಪದೋನ್ನತಿ/ ಸ್ಥಾನೀಕರಣ ನೀಡಿಕೆಯನ್ನು 2014-15 ನೇ ಸಾಲಿನಲ್ಲಿ ಸಹ ಮುಂದುವರೆಸಲಾಗಿದೆ. ಈ ಅಕ್ರಮವಾದ ಪದೋನ್ನತಿ/ಸ್ಥಾನೀಕರಣಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಮಾನ್ಯ ಮಾಡಲಾಗುವುದಿಲ್ಲ. ಕಾರಣ ಇಂತಹ ಅನಿಯಮಿತವಾಗಿ ನೀಡಲಾದ ಪ್ರಕರಣಗಳನ್ನು ಅನುಬಂಧ-1 (ಫೀಡರ್ ಕೇಡರ್) ಮತ್ತು 1ಎ (ಹಾರ್ಡಶಿಪ್) ರಲ್ಲಿ ನೀಡಲಾಗಿದ್ದು ಅದರಲ್ಲಿ ತಿಳಿಸಲಾದಂತೆ ಹೆಚ್ಚುವರಿಯಾಗಿ ಪಾವತಿಸಲಾದ ವೇತನ ಭತ್ಯಗಳ ಮೊತ್ತ ಅನುಬಂಧ-1 `.8,21,362/- ಮತ್ತು ಅನುಬಂಧ 1(ಅ) `.1,77,250/- ಒಟ್ಟು `.9,98,612 +ಭತ್ಯೆಗಳನ್ನು ಸಂಬಂಧಿಸಿದವರಿಂದ ವಸೂಲಿ ಮಾಡಿ ಅನುಸರಣೆ ನೀಡಲು ಸೂಚಿಸಿದೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಡಾ. ಬಿ.ಬಿ. ಕಲಿವಾಳ ಇವರ ಸೇವಾವಧಿಯಲ್ಲಿ ವಿಸ್ತರಿಸಲಾದ ಫೀಡರ್ ಕೇಡರ್/ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸೂಕ್ತ ಅನುಸರಣೆಯನ್ನು ಸಲ್ಲಿಸುವುದು ಅವಶ್ಯಕವಾಗಿರುತ್ತದೆ.

ಆದುದರಿಂದ **ಡಾ. ಬಿ.ಬಿ. ಕಲಿವಾಳ** ಇವರ ಸೇವಾ ವಹಿ ಹಾಗೂ ವೈಯಕ್ತಿಕ ಕಡತವನ್ನು ಪರಿಶೀಲಿಸಲಾಗಿ ಗಮನಕ್ಕೆ ಬಂದ ಪ್ರಮುಖ ಅಂಶಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತೆ ಇರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 1976 ರ ನಿಯಮ 49 (2) (ಬಿ) ರ ಅಡಿಯಲ್ಲಿ ರಚಿಸಲ್ಪಟ್ಟ ನೇಮಕಾತಿ ಮಂಡಳಿ ಶಿಫಾರಸ್ಸಿನ ಅನುಗುಣವಾಗಿ ದಿನಾಂಕ.16.06.1981 ರ ಈ ಕಚೇರಿ ಆದೇಶ ಸಂಖ್ಯೆ.1890 ರ ಮೂಲಕ ಸ್ಪಷ್ಟ ಖಾಲಿ ಇರುವ ಹುದ್ದೆಗೆ ಎದುರಾಗಿ ಡಾ.ಬಿ.ಬಿ.ಕಲಿವಾಳ ಇವರು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ತಾತ್ಕಾಲಿಕ ಉಪನ್ಯಾಸಕರೆಂದು ನೇಮಕಗೊಂಡು ದಿನಾಂಕ.04.07.1981 ರಂದು ಸೇವೆಗೆ ವರದಿ ಮಾಡಿಕೊಂಡಿರುತ್ತಾರೆ. ತದನಂತರ ಡಾ.ಬಿ.ಬಿ.ಕಲಿವಾಳ ಇವರು ತಮ್ಮ ಸೇವೆಗೆ ಸೇರುವ ಪೂರ್ವದಲ್ಲಿಯೇ ಅಂದರೆ ದಿನಾಂಕ: 14.02.1981 ರಲ್ಲಿ "ಪಿಎಚ್.ಡಿ.." ಪದವಿಯನ್ನು ಹೊಂದಿರುತ್ತಾರೆ.

ಸದರಿಯವರು ಈ ಕಚೇರಿ ಆದೇಶ ನಂ. 1745 ದಿನಾಂಕ: 15.06.1984 ರನ್ವಯ, ಡಾ.ಬಿ.ಬಿ.ಕಲಿವಾಳ ಇವರು ದಿನಾಂಕ: 02.06.1984 ರಿಂದ ಅನ್ವಯವಾಗುವಂತೆ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರ ವಿಷಯದ ಉಪನ್ಯಾಸಕರೆಂದು ನೇಮಕಗೊಂಡು ಹಾಜರಾಗಿರುತ್ತಾರೆ.

ಮುಂದುವರೆದು, ಈ ಕಚೇರಿ ಆದೇಶ ಸಂಖ್ಯೆ.3899 ದಿನಾಂಕ: 10.08.1988 ರ ಪ್ರಕಾರ, ಸದರಿಯವರು ಕವಿವಿ ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರೆಂದು ನೇಮಕಗೊಂಡು ದಿನಾಂಕ: 11.08.1988 ರಂದು ಹಾಜರಾಗಿರುತ್ತಾರೆ.

ಸದರಿಯವರು ಪಿಎಚ್.ಡಿ ಪದವಿಯನ್ನು ಹೊಂದಿದ ಪ್ರಯುಕ್ತ 1986 ರ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಹಾಗೂ ದಿನಾಂಕ.18.12.1989 ರ ಯುಜಿಸಿ ಮಾರ್ಗ ಸೂಚಿಗಳ ಪ್ರಕಾರ ಪದೋನ್ನತಿ/ಸ್ಥಾನಿಕರಣಕ್ಕೆ ನಿಗದಿಪಡಿಸಿದ ಒಟ್ಟು ಸೇವಾವಧಿಯಲ್ಲಿ 03 ವರ್ಷ ಸಡಿಲಗೊಳಿಸಿ ದಿನಾಂಕ: 02.06.1989 ರಿಂದ ಅನ್ವಯವಾಗುವಂತೆ "ಉಪನ್ಯಾಸಕರು (ಹಿರಿಯ ಶ್ರೇಣಿ)" ಪದೋನ್ನತಿಯನ್ನು ಮಂಜೂರು ಮಾಡಿ ಈ ಕೆಳಗಿನಂತೆ ಆದೇಶ ಜಾರಿ ಮಾಡಲಾಗಿರುತ್ತದೆ.

| ಅ. ಸಂ. | ಪದನಾಮ | ಪದೋನ್ನತಿ ನೀಡಿದ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ. |
|---|---|---|---|
| 01. | ಉಪನ್ಯಾಸಕರು (ಹಿರಿಯ ವೇ.ಶ್ರೇಣಿ) | 02.06.1989 | ನಂ.ಕೆಯು/ಡಿಪಿಎಆರ್/ಎಸ್.ಆರ್.ಟಿ/90/40 75 ದಿ.15.09.1990) |

ತದನಂತರ, ಸದರಿಯವರು ಪ್ರವಾಚಕ ಹುದ್ದೆಗೆ ದಿನಾಂಕ:28.12.1998 ರಂದು ನೇಮಕ ಹೊಂದಿ ಹಾಜರಾಗಿರುತ್ತಾರೆ. ಈ ಕಚೇರಿ ಆದೇಶ ನಂ.ಕೆಯು/ಡಿಪಿಎಆರ್/ಎಸ್ಆರ್‌ಟಿ/98/5439 ದಿನಾಂಕ: 28.12.1998.

ಕುಲಸಚಿವರು ಕುಲಪತಿಗಳು

1986 ರ ಯುಜಿಸಿ ವೇತನ ಶ್ರೇಣಿಗಳ ಪ್ರಕಾರ, ಡಾ.ಬಿ.ಬಿ.ಕಲಿವಾಳ ಇವರು ದಿ.04.07.1981 ರಿಂದ ಒಟ್ಟಾರೆಯಾಗಿ 13 ವರ್ಷಗಳ ಸೇವೆಯನ್ನು ಸಲ್ಲಿಸಿದ ಪ್ರಯುಕ್ತ ದಿನಾಂಕ: 04.07.1994 ರಿಂದ ಅನ್ವಯವಾಗುವಂತೆ ಉಪನ್ಯಾಸಕ ಆಯ್ಕೆ ಶ್ರೇಣಿ ಪದೋನ್ನತಿಯನ್ನು ನೀಡಿ, ಅದೇ ದಿನಾಂಕದಿಂದ ಸದರಿಯವರನ್ನು ಪ್ರವಾಚಕರೆಂದು ನಾಮಕರಣಗೊಳಿಸಿ ದಿನಾಂಕ: 01.12.1999 ರ ಈ ಕಚೇರಿ ಆದೇಶ ಸಂಖ್ಯೆ. 5369 ರ ಮೂಲಕ ಆದೇಶ ಜಾರಿ ಮಾಡಲಾಗಿದೆ.

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ.ಇಡಿ 100 ಯುಎನ್ಇ 99 ದಿನಾಂಕ.15.11.1999 ರ ಮೂಲಕ ಜಾರಿಯಾದ 1996 ರ ಯುಜಿಸಿ ವೇತನ ಶ್ರೇಣಿಯಲ್ಲಿ ಸದರಿಯವರಿಗೆ ಪ್ರವಾಚಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್. ಅಡಿ ಈ ಕೆಳಗಿನಂತೆ ಪದೋನ್ನತಿ ನೀಡಿ ಆದೇಶ ಜಾರಿ ಮಾಡಲಾಗಿರುತ್ತದೆ.

| ಅ. ಸಂ. | ಪದನಾಮ | ಪದೋನ್ನತಿ ನೀಡಿದ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ. |
|---|---|---|---|
| 01. | ಪ್ರಾಧ್ಯಾಪಕರು | 04.07.2002 | ಸಂ.ಕೆಯು/ಡಿಪಿಎಆರ್/ಎಸ್.ಆರ್.ಟಿ/ 2003/352 ದಿ.22.04.2003. |

ದಿನಾಂಕ.15.11.1999 ರ ಸರ್ಕಾರಿ ಆದೇಶ ಸಂಖ್ಯೆ.ಇಡಿ 100 ಯುಎನ್ಇ 99 ರ ಮೂಲಕ ಜಾರಿಯಾದ 1996 ರ ಯುಜಿಸಿ ವೇತನ ಶ್ರೇಣಿ ಆದೇಶದ ಕಂಡಿಕೆ ಸಂಖ್ಯೆ.16 ರ ಪ್ರಕಾರ ಉಪನ್ಯಾಸಕ ಹಿರಿಯ ಶ್ರೇಣಿಯಿಂದ ಪ್ರವಾಚಕ ಪದೋನ್ನತಿಗೆ ಅಗತ್ಯವಿರುವ 5 ವರ್ಷಗಳ ಸೇವಾವಧಿಯನ್ನು ಪೂರೈಸಿದ್ದನ್ನು ಪಾಲಿಸುವದರೊಂದಿಗೆ ಸದರಿ ಆದೇಶದ ಖಂಡಿಕೆ ಸಂ.16 ಹಾಗೂ ದಿನಾಂಕ.06.03.2012 ರ ಸರ್ಕಾರದ ಪತ್ರ ಸಂಖ್ಯೆ.ಇಡಿ 33 ಯುಕೆವಿ 2012 ರಲ್ಲಿ ಕಲ್ಪಿಸಲಾದ ಅವಕಾಶದನ್ವಯ ಪದೋನ್ನತಿಗೆ ನಿಗದಿಪಡಿಸಿದ ವರ್ಷಗಳನ್ನು ಸರಿಹೊಂದಿಸಿದಂತೆ ಫೀಡರ ಕೇಡರ್/ಹಾರ್ಡಶಿಫ್ ಅಡಿಯಲ್ಲಿ ಪರಿಷ್ಕರಿಸಿ ಅರ್ಹತಾ ದಿನಾಂಕಗಳನ್ನು ಈ ಕೆಳಕಂಡಂತೆ ಮರುನಿಗದಿಪಡಿಸಿ ಆದೇಶ ಜಾರಿ ಮಾಡಿದ್ದು ಇರುತ್ತದೆ.

| ಅ.ಸಂ. | ಪದನಾಮ | ಪದೋನ್ನತಿ ನೀಡಿದ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ. |
|---|---|---|---|
| 01. | ಹಿರಿಯ ವೇತನ ಶ್ರೇಣಿ | 04.07.1986 | |
| 02. | ಪ್ರವಾಚಕ (ಸ್ಥಾನೀಕರಣ)<br>ಪ್ರವಾಚಕ ನೇಮಕಾತಿ | 04.07.1994<br>01.01.1998 | 1864/ 14.06.2010 |
| 03. | ಪ್ರಾಧ್ಯಾಪಕ | 04.07.2002 | |

ಡಾ. ಬಿ.ಬಿ.ಕಲಿವಾಳ ಇವರು ದಿನಾಂಕ 31.07.2016 ರಂದು ತಮ್ಮ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಸದರಿಯವರ ನೇಮಕಾತಿ ಆದೇಶ, ಸರ್ಕಾರಿ ಆದೇಶ ಸಂಖ್ಯೆ ಇಡಿ 100 ಯುಎನ್ಇ 99 ದಿನಾಂಕ.15.11.1999 ರ ಮಾರ್ಗಸೂಚಿ, ಸರ್ಕಾರದ ಪತ್ರ ಹಾಗೂ ಸದರ ವಿಷಯದ ಸಂಬಂಧಿತ ಈ ಕಚೇರಿ ಆದೇಶದ ಪ್ರತಿಗಳನ್ನು ತಮ್ಮ ಅವಗಾಹನೆಗಾಗಿ ಲಗತ್ತಿಸಲಾಗಿದೆ.

ಮುಂದುವರೆದು, ಇಲ್ಲಿ ನಿವೇದಿಸುವುದೇನೆಂದರೆ, ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.06.06.2018 ರಲ್ಲಿ 1996 ರ ಯುಜಿಸಿ ವೇತನ ಶ್ರೇಣಿ ಹಾಗೂ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನ್ನು ಬೋಧಕ ಸಿಬ್ಬಂದಿಗಳಿಗೆ ಅವರ ಸೇವಾವಧಿಯಲ್ಲಿ ದಿನಾಂಕ.15.11.1999 ಮತ್ತು 24.12.2009 ಕ್ಕಿಂತ ಮೊದಲು ಮಂಜೂರು ಮಾಡಿ ವಿಸ್ತರಿಸಿದ ಕುರಿತ ಆಕ್ಷೇಪಣೆಗಳ ತೀರುವಳಿ ಕುರಿತಂತೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.27.04.2018 ರ ತಮ್ಮ ಪತ್ರದಲ್ಲಿ ಈ ಕೆಳಗಿನಂತೆ ನಿರ್ದೇಶಿಸಿರುವುದಾಗಿ ತಿಳಿಸುತ್ತ ಅದರಂತೆ ಸದರ ಆಕ್ಷೇಪಿತ ಕಂಡಿಕೆಗಳಿಗೆ ಬೋಧಕ ಸಿಬ್ಬಂದಿವಾರು ಪ್ರತ್ಯೇಕವಾಗಿ ಅನುಸರಣೆಯನ್ನು ಸಲ್ಲಿಸುವಂತೆ ತಿಳಿಸಿದ್ದು ಇರುತ್ತದೆ.

*"1996 ರ ಯುಜಿಸಿ ವೇತನ ಶ್ರೇಣಿ ನಿಯಮಗಳನ್ವಯ ದಿ:1-1-1996 ರಿಂದ 15-11-1999 ರ ಅವಧಿಯಲ್ಲಿ ಯಾವುದೇ ಪದೋನ್ನತಿ/ಸ್ಥಾನಿಕರಣ ಮತ್ತು ಪಿಎಚ್.ಡಿ./ಎಂ.ಫಿಲ್‌ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯಗಳನ್ನು ನೀಡುವುದಿದ್ದಲ್ಲಿ ಸರ್ಕಾರದ ಆದೇಶ ಜಾರಿ ದಿ:15-11-1999 ರಿಂದಲೇ ಅನ್ವಯಿಸಿ ನೀಡುವುದು. ಒಂದು ವೇಳೆ ಯುಜಿಸಿ 1986 ರ ವೇತನ ಶ್ರೇಣಿ & 1989 ರ ಸಿಎಎಸ್ ಮಾರ್ಗಸೂಚಿಗಳನ್ವಯ ದಿ:1-1-1996 ರಿಂದ 15-11-1999 ಅವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ & ಪಿಎಚ್.ಡಿ./ಎಂ.ಫಿಲ್‌ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯ ನೀಡಿದ್ದಲ್ಲಿ ಸದರೀ ಮೂಲ ವೇತನಕ್ಕೆ ಸಂವಾದಿಯಾಗಿ 1996 ರ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದನ್ನು ಪರಿಶೀಲಿಸಿ, ಸದರೀ ಆಕ್ಷೇಪಿತ ಕಂಡಿಕೆಗಳ ತೀರುವಳಿ ಕುರಿತು ಕ್ರಮಕೈಗೊಳ್ಳಲು ಸೂಚಿಸಿದೆ."*

*"2006 ರ ಯುಜಿಸಿ ವೇತನ ಶ್ರೇಣಿ ನಿಯಮಗಳನ್ವಯ ದಿ:1-1-2006 ರಿಂದ 24-12-2009 ರ ಅವಧಿಯಲ್ಲಿ ಯಾವುದೇ ಪದೋನ್ನತಿ/ಸ್ಥಾನಿಕರಣ ಮತ್ತು ಪಿಎಚ್.ಡಿ. ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯಗಳನ್ನು ನೀಡುವುದಿದ್ದಲ್ಲಿ ಸರ್ಕಾರದ ಆದೇಶ ಜಾರಿ ದಿ:24-12-2009 ರಿಂದಲೇ ಅನ್ವಯಿಸಿ ನೀಡುವುದು. ಒಂದು ವೇಳೆ ಯುಜಿಸಿ 1996 ರ ವೇತನ ಶ್ರೇಣಿ & 2000 ರ ಸಿಎಎಸ್ ಮಾರ್ಗಸೂಚಿಗಳನ್ವಯ ದಿ:1-1-2006 ರಿಂದ 24-12-2009 ರ ಅವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ & ಪಿಎಚ್.ಡಿ ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯ ನೀಡಿದ್ದಲ್ಲಿ ಸದರೀ ಮೂಲ ವೇತನಕ್ಕೆ ಸಂವಾದಿಯಾಗಿ 2006 ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದನ್ನು ಪರಿಶೀಲಿಸಿ, ಸದರೀ ಆಕ್ಷೇಪಿತ ಕಂಡಿಕೆಗಳ ತೀರುವಳಿ ಕುರಿತು ಕ್ರಮಕೈಗೊಳ್ಳಲು ಸೂಚಿಸಿದೆ."*

ಕುಲಸಚಿವರು

ಕುಲಪತಿಗಳು

ಅಲ್ಲದೇ ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.27.11.2018 ರಲ್ಲಿ ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ ಈ ಕೆಳಕಾಣಿಸಿದಂತೆ ನಿರ್ದೇಶಿಸಿರುವುದಾಗಿ ತಿಳಿಸಿ, ಅದರಂತೆ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

> *"ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಈ ಕಚೇರಿಗೆ ಸಲ್ಲಿಸಿ ಆಕ್ಷೇಪಿತ ಕಂಡಿಕೆಗಳ ತೀರುವಳಿ ಮಾಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ. ಬಾಕಿ ಇರುವ ಎಲ್ಲಾ ವರ್ಷಗಳ ವರದಿಗಳಲ್ಲಿ ಕಾಣಿಸಿದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥ ಪಡಿಸದಿರುವ ವಿಷಯವನ್ನು ಕೇಂದ್ರ ಕಚೇರಿಯಲ್ಲಿ ಜರುಗಿಸಿದ್ದ ದಿನಾಂಕ.19.11.2018 ರ ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ. ಕಾರಣ ಸದರಿ ನಿರ್ದೇಶನದನುಸಾರ ಲೆಕ್ಕ ಪರಿಶೋಧನಾ ಆಕ್ಷೇಪಿತ ಕಂಡಿಕೆಗಳಿಗೆ ದ್ವಿಪ್ರತಿಗಳಲ್ಲಿ ಅನುಸರಣಾ ವರದಿ ಸಲ್ಲಿಸಲು ಕೋರಿದೆ."*

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಮೇಲ್ಕಂಡ ಪ್ರಮುಖ ಅಂಶಗಳನ್ನು ಲೆಕ್ಕ ಪರಿಶೋಧಕರ ಗಮನಕ್ಕೆ ತಂದು ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, ಡಾ.ಬಿ.ಬಿ.ಕಲಿವಾಳ, ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರಿಗೆ ಸೇವಾವಧಿಯಲ್ಲಿ ಫೀಡರ್ ಕೇಡರ್/ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಪ್ರಮುಖ ಅಂಶಗಳ ಪ್ರಕಾರ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಗಿತ್ತು, ಸದರ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**<u>ಹಣಕಾಸು ಸಮಿತಿ ಕಲಂ ಸಂಖ್ಯೆ. 04 ದಿನಾಂಕ 10.12.2021</u>**

"ಡಾ.ಬಿ.ಬಿ.ಕಲಿವಾಳ, ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರಿಗೆ ಫೀಡರ್ ಕೇಡರ್, ಹಾರ್ಡ್‌ಶಿಪ್ ಅಡಿಯಲ್ಲಿ ಪದೋನ್ನತಿ ನೀಡಿ ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿದ ಬಗ್ಗೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಈಗಾಗಲೇ ಇಂತಹ ಪ್ರಕರಣಗಳಲ್ಲಿ ಕಂಡಿಕೆಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಕೈಬಿಡಲಾಗಿದ್ದು, ಅದರಂತೆ ಸಮರ್ಪಕ ದಾಖಲೆಗಳನ್ನು ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಸಭೆಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."

ಆದ್ದರಿಂದ, ಸದರ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## <u>ನಿರ್ಣಯ</u>

ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು　　　　　　　　　　　　　　　　　　ಕುಲಪತಿಗಳು

**ಕಲಂ ಸಂಖ್ಯೆ-24: ವಿಷಯ-:** ಡಾ. ಗುರುರಾಜ ಹಡಗಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರಿಗೆ ನೇಮಕಾತಿ ಸಮಯದಲ್ಲಿ ಪಿಎಚ್.ಡಿ. ಹೊಂದಿದ್ದು ನೆಟ್/ಸೆಟ್/ಸ್ಲೆಟ್ ಹೊಂದದವರಿಗೆ ಪ್ರೋತ್ಸಾಹಕವಾಗಿ ವಿಶೇಷ ಬಡ್ತಿಗಳನ್ನು ಮಂಜೂರು ಮಾಡಿರುವ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಡಾ. ಗುರುರಾಜ ಹಡಗಲಿ, ಸಹಾಯಕ ಪ್ರಾಧ್ಯಾಪಕರು ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರಿಗೆ ಸದರಿಯವರಿಗೆ ನೇಮಕಾತಿ ಸಮಯದಲ್ಲಿ ಪಿ.ಹೆಚ್.ಡಿ ಪದವಿ ಹೊಂದಿದ್ದು ನೆಟ್/ಸೆಟ್/ಸ್ಲೆಟ್ ಹೊಂದದವರಿಗೆ ಪ್ರೋತಾಹಕವಾಗಿ ವಿಶೇಷ ಬಡ್ತಿಗಳನ್ನು ಮಂಜೂರು ಮಾಡಿರುವ ಕುರಿತು 2010-11, 2011-12, 2012-13, 2013-14, 2014-15, 2015-16 ಮತ್ತು 2016-17 ನೇ ಸಾಲಿನ ಬೋಧಕ ಸಿಬ್ಬಂದಿಗಳ ವೇತನ ವಿಭಾಗದ ಲೆಕ್ಕ ಪರಿಶೋಧನಾ ವರದಿಯ ವಿವಿಧ ಕಂಡಿಕೆಗಳಲ್ಲಿ ಈ ಕೆಳಕಂಡಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ಇರುತ್ತದೆ.

"ಯುಜಿಸಿ ವೇತನ ಶ್ರೇಣಿಗಳು-1986 ರ ಕಂಡಿಕೆ 9 ರಲ್ಲಿ, ಶಿಕ್ಷಕರಲ್ಲಿ ಸಂಶೋಧನಾ ಮನೋವೃತ್ತಿ ಪ್ರೊತ್ಸಾಹಿಸುವ ಕುರಿತು ಅಭ್ಯರ್ಥಿಗಳು ಉಪನ್ಯಾಸಕರ ಹುದ್ದೆಗೆ ನೇಮಕಾತಿ ಸಮಯದಲ್ಲಿ ಪಿ.ಎಚ್.ಡಿ ಮತ್ತು ಎಂ.ಫಿಲ್ ಪದವಿಯನ್ನು ಪಡೆದಿದ್ದಲ್ಲಿ ಅವರಿಗೆ ಕ್ರಮವಾಗಿ `.2200-4000 ವೇತನ ಶ್ರೇಣಿಯಲ್ಲಿ 3 (ಮೂರು) ಮತ್ತು 1 (ಒಂದು) ವಿಶೇಷ ಬಡ್ತಿ ಮಂಜೂರಿ ಮಾಡುವಂತೆ ತಿಳಸಲಾಗಿರುತ್ತದೆ. ಅದೇ ರೀತಿ ಸರಕಾರದ ಆದೇಶ ಸಂಖ್ಯೆ ಇಡಿ/100/ಯುಎನ್ಇ/99 ದಿನಾಂಕ: 15.11.1999 ಮತ್ತು ಕವಿವಿ ಪರಿಷ್ಕೃತ ವೇತನ ಶ್ರೇಣಿಗಳ ಅಧಿನಿಯಮ ದಿನಾಂಕ: 2.11.2007 ರ ಕಂಡಿಕೆ 12 ಮತ್ತು 9 ರಲ್ಲಿ ನೇಮಕಾತಿ ಸಮಯದಲ್ಲಿ ಅಭ್ಯರ್ಥಿಗಳು ಪಿ.ಎಚ್.ಡಿ ಮತ್ತು ಎಂ.ಫಿಲ್ ಪದವಿ ಹೊಂದಿದ್ದಲ್ಲಿ ಅವರಿಗೆ ಕ್ರಮವಾಗಿ 4 (ನಾಲ್ಕು) ಮತ್ತು 2 (ಎರಡು) ವಿಶೇಷ ಬಡ್ತಿಗಳನ್ನು ಪ್ರೋತ್ಸಾಹಕ ರೂಪದಲ್ಲಿ ಮಂಜೂರಿ ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

ಸರಕಾರದ ಆದೇಶ ಸಂಖ್ಯೆ. ಇಡಿ/32/ಯುಎನ್ಇ/2009 ದಿನಾಂಕ: 24.12.2009 ರ ಅಪೆಂಡಿಕ್ಸ್ IV (I) ರ ಪ್ರಕಾರ ಪಿ.ಎಚ್.ಡಿ ಪದವಿಯನ್ನು ಹೊಂದಿದವರಿಗೆ 5 (ಐದು) (Non Compounded) ಮತ್ತು ಎಂ.ಫಿಲ್ ಪದವಿ ಹೊಂದಿದವರಿಗೆ 2 (ಎರಡು) (Non Compounded) ವಿಶೇಷ ಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಉಪನ್ಯಾಸಕರು ಮತ್ತು ಇತರೇ ಹುದ್ದೆಗಳ ನೇಮಕಾತಿಗೆ ಕನಿಷ್ಟ ವಿದ್ಯಾರ್ಹತೆ ಕುರಿತು ಯು.ಜಿ.ಸಿ ರೆಗ್ಯೂಲೇಷನ್ಸ್ 2000 ದ ಕಂಡಿಕೆ 2 ರ ಉಪಕಂಡಿಕೆ 1-3-3 ರ ಟಿಪ್ಪಣಿಗಳಲ್ಲಿ ಈ ರೀತಿ ತಿಳಸಲಾಗಿದೆ. NET Shall remain the compulsory requirement for appointment as lecturer even for candidates having Ph.D Degree. However the candidates who have completed M.Phil Degree or have submitted Ph.D thesis in the concerned subject upto 31.12.1993 are exempted from appearing in the NET examination. ಇದಲ್ಲದೇ 2006 ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳ ಕುರಿತು ಸರಕಾರಿ ಆದೇಶ ದಿನಾಂಕ: 24.12.2009 ರ ಕಂಡಿಕೆ 14 ಉಪಕಂಡಿಕೆ 14(O4) ರಲ್ಲಿ "NET/SLET/SET shall remain the minimum eligibility for recruitment and appointment of assistant professors in the University/Colleges/Institution Provided however that the candidates who are/have been awarded Ph.D Degree in compliance of UGC regulations-2009 shall be exempted from the requirement of the minimum eligibility condition of NET/SLET/SET for recruitment and appointment of Asst Prof. in University/Colleges/Institution.12

ಯು.ಜಿ.ಸಿ ರೆಗುಲೇಷನ್ಸ್-2000 ಜಾರಿಯಾಗುವುದಕ್ಕೆ ಪೂರ್ವದಲ್ಲಿ ಉಪನ್ಯಾಸಕರ ಹುದ್ದೆಗೆ ಕೇವಲ ಸ್ನಾತಕೋತ್ತರ ಪದವಿ ಮಾತ್ರ ಕನಿಷ್ಟ ವಿದ್ಯಾರ್ಹತೆಯಾಗಿದ್ದು ಪಿ.ಹೆಚ್.ಡಿ ಪದವಿ ಹೊಂದಿದ್ದಲ್ಲಿ ಅವರಿಗೆ ವಿಶೇಷ ಬಡ್ತಿ ಮಂಜೂರಿ ಮಾಡಿದ್ದಲ್ಲಿ ಕ್ರಮಬದ್ಧವಾಗಿರುತ್ತಿತ್ತು. ಆದರೆ ನೇಮಕಾತಿಗೆ ಪಿ.ಹೆಚ್.ಡಿ ಕನಿಷ್ಟ ಮತ್ತು ಅವಶ್ಯಕ ವಿದ್ಯಾರ್ಹತೆ ಎಂದು ಪರಿಗಣಿತವಾಗಿ ಅದೇ ಆಧಾರದ ಮೇಲೆ ಉಪನ್ಯಾಸಕರ ಹುದ್ದೆಗೆ ನೇಮಕವಾಗಿದ್ದಲ್ಲಿ ಅವರಿಗೆ ಈ ವಿಶೇಷ ಮುಂಗಡ ಬಡ್ತಿ ನೀಡಲು ಅವಕಾಶಗಳಿರುವುದಿಲ್ಲ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಹೊಂದಿರುವ ಉಪನ್ಯಾಸಕರುಗಳು, ನೇಮಕಾತಿ ಸಮಯದಲ್ಲಿ ಪ್ರಚಲಿತವಿದ್ದಂತಹ ನೇಮಕಾತಿ ನಿಯಮಗಳ ಅನುಸಾರ ಅವರ ನೇಮಕಾತಿಗೆ ಪಿ.ಹೆಚ್.ಡಿ ಪದವಿ ಅವಶ್ಯಕ ಮತ್ತು ಕಡ್ಡಾಯವಾದ ವಿದ್ಯಾರ್ಹತೆಯಾಗಿದ್ದಲ್ಲಿ, ಅವರಿಗೆ ಈ ಮೇಲ್ಕಾಣಿಸಿದ ನಿಯಮಗಳ ಹಿನ್ನಲೆಯಲ್ಲಿ ವಿಶೇಷ ಮುಂಗಡ ಬಡ್ತಿಗಳನ್ನು ನೀಡಲು ಅವಕಾಶಗಳಿರುವುದಿಲ್ಲ. ಒಂದು ವೇಳೆ ಅವರು ನೆಟ್/ಸ್ಲೆಟ್/ಸೆಟ್ ಮುಂತಾದ ಅರ್ಹತಾ ಪರೀಕ್ಷೆಗಳನ್ನು ಪಾಸು ಮಾಡಿದ್ದು, ಪಿ.ಹೆಚ್.ಡಿ ಪದವಿ ಹೊಂದಿದ್ದಲ್ಲಿ ಅವರಿಗೆ ಅದು ಹೆಚ್ಚುವರಿ ವಿದ್ಯಾರ್ಹತೆಯಾದಂತಾಗುತ್ತಿದ್ದು, ಅವರಿಗೆ ವಿಶೇಷ ಬಡ್ತಿ ಮಂಜೂರಿ ಮಾಡಬಹುದಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

ಈ ರೀತಿ ವಿಶೇಷ ಮುಂಗಡ ಬಡ್ತಿ ನೀಡಲು ನಿಯಮಗಳಿದ್ದು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಶೇಷ ಬಡ್ತಿ ಮಂಜೂರು ಮಾಡಲಾದ ಪ್ರತಿಯೊಬ್ಬ ಉಪನ್ಯಾಸಕರು ಯಾವ ಕನಿಷ್ಟ ವಿದ್ಯಾರ್ಹತೆ ಮೇಲೆ ನೇಮಕಗೊಂಡಿರುತ್ತಾರೆ ಎಂದು ತಿಳಿಸಲು ಮತ್ತು ಪಿ.ಹೆಚ್.ಡಿ/ಎಂ.ಫಿಲ್ ಪದವಿ ಕನಿಷ್ಟ ವಿದ್ಯಾರ್ಹತೆಯಾಗಿದ್ದು, ಅದರಂತೆ ನೇಮಕಗೊಂಡ ಅವರಿಗೆ ಈ ವಿಶೇಷ ಮುಂಗಡ ಬಡ್ತಿ ಮಂಜೂರು ಮಾಡಿದ್ದಲ್ಲಿ, ಅದನ್ನು ಹಿಂಪಡೆದು ಅವರ ವೇತನ್ನ ಮರುನಿಗದಿ ಮಾಡಿ ಹೆಚ್ಚುವರಿ ಪಾವತಿಸಲಾದ ವೇತನ ಭತ್ಯಗಳನ್ನು ವಸೂಲಿ ಮಾಡುವಂತೆ 2009-10 ರಿಂದ  2015-16 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳಲ್ಲಿ ತಿಳಿಸಲಾದ ಹೊರತಾಗಿಯೂ ಯಾವುದೇ ಕ್ರಮ ಜರುಗಿಸದೆ ಮುಂದುವರೆಸಲಾಗಿದೆ.

ಕಾರಣ ಈ ರೀತಿ ಕನಿಷ್ಟ ವಿದ್ಯಾರ್ಹತೆಯಾದ ಪಿ.ಎಚ್.ಡಿ ಮತ್ತು ಎಂ.ಫಿಲ್ ಪದವಿ ಹೊಂದಿರುವ ಉಪನ್ಯಾಸಕರಿಗೆ ನಿಯಮ ಬಾಹಿರವಾಗಿ ಮಂಜೂರು ಮಾಡಲಾದ ವಿಶೇಷ ಬಡ್ತಿಗಳನ್ನು ಸರಿ ಎಂದು ಒಪ್ಪದೇ ಅವರುಗಳಿಗೆ ವರದಿ ಅವಧಿಯಲ್ಲಿ ನೀಡಲಾದ ವೇತನ ಮತ್ತು ಭತ್ಯಗಳನ್ನು ಲೆಕ್ಕ ಹಾಕಿದ್ದು, ವಿವರಗಳನ್ನು ಅನುಬಂಧ "2, 2ಎ" ರಲ್ಲಿ ತೋರಿಸಿದಂತೆ ಅವರಿಂದ ಅನುಬಂಧ 2 `.1,03,860/- ಅನುಬಂಧ-2(ಅ) `.9,12,330/- ಒಟ್ಟು `.10,16,190/- ಭತ್ಯೆಗಳನ್ನು ವಸೂಲಿ ಮಾಡಿ ಅನುಸರಣೆ ನೀಡಲು ಸೂಚಿಸಿದೆ."

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಮಾನ್ಯ ಲೆಕ್ಕಪರಿಶೋಧಕರ ಮೇಲ್ಕಾಣಿಸಿದ ಆಕ್ಷೇಪಣೆಗೆ ಸಂಬಂಧಿಸಿದಂತೆ, ಅನುಸರಣೆಯನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 1976 ರ ನಿಯಮ 49 (2) (ಬಿ) ರ ಅಡಿಯಲ್ಲಿ ರಚಿಸಲ್ಪಟ್ಟ ನೇಮಕಾತಿ ಮಂಡಳಿ ಶಿಫಾರಸ್ಸಿನ ಅನುಗುಣವಾಗಿ ಡಾ.ಗುರುರಾಜ.ಎಸ್.ಹಡಗಲಿ ಇವರು ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಕವಿವಿ, ಧಾರವಾಡ ಇಲ್ಲಿ ದಿನಾಂಕ.24.06.2008 ರ ಈ ಕಚೇರಿ ಆದೇಶ ಸಂಖ್ಯೆ.ಕೆಯು/ಡಿಪಿಎಆರ್/ಟಿ/2008/1761 ರ ಮೂಲಕ ಉಪನ್ಯಾಸಕ ಹುದ್ದೆಗೆ ನೇಮಕಗೊಂಡು ಮುಂದೆ <u>ದಿನಾಂಕ.24.06.2008 ರಂದು</u> ಸೇವೆಗೆ ವರದಿ ಮಾಡಿಕೊಂಡಿರುತ್ತಾರೆ.

ಡಾ.ಗುರುರಾಜ.ಎಸ್.ಹಡಗಲಿ ಇವರು ತಮ್ಮ ಉಪನ್ಯಾಸಕ ನೇಮಕಾತಿ ಹೊಂದುವ  ಪೂರ್ವದಲ್ಲಿಯೇ ಅಂದರೆ ದಿನಾಂಕ: <u>30.12.2003 ರಂದು</u> ನೆಟ್ (NET) ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿದ್ದು ಮತ್ತು **"ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ"** ವಿಷಯದಲ್ಲಿ <u>ದಿನಾಂಕ:30.01.2008 ರಂದು</u> **"ಪಿಎಚ್.ಡಿ.,"** ಪದವಿಯನ್ನು ಹೊಂದಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯದ ನೇಮಕಾತಿಯ ಪ್ರಕಟಣೆ ಸಂಖ್ಯೆ. KU-BOA/ADVT/2007/1028 ದಿನಾಂಕ: 04.10.2007 ರಲ್ಲಿ ಉಪನ್ಯಾಸಕ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಈ ಕೆಳಗಿನಂತೆ ಇರುತ್ತದೆ.

<u>LECTURER:</u>

III) Good academic record with atleast 50% of the marks or an equivalent grade of B in the 7 point scale with latter grades O,A,B,C,D,E & F at Master's Degree Level in the relevant subject from an Indian University, or an equivalent degree from a Foreign University.

Notification No.F.3-1/2000(PS) dated: 4th April 2000, a relaxation of 5% is provided from 55% to 50% of marks at the Master's level for SC/ST Category only. However, all other conditions shall remain same.

As per recent UGC Notification dated: 14.06.2006, "NET shall remain the compulsory requirement for appointment as Lecturer for those with post-graduate degree.However, the candidates having Ph.D degree in the concerned subject are exempted from NET for PG level and UG level teaching. The candidates having SLET/M.Phil degree in the concerned subject are exempted from NET for UG level teaching only''. Accordingly candidates who are eligible may apply for the posts of Lecturer (PG/UG) as notified in the Advertisement.

ಸದರ ನೇಮಕಾತಿಯ ಪ್ರಕಟಣೆಯ ಪ್ರಕಾರ, ಉಪನ್ಯಾಸಕ ಹುದ್ದೆಯ ನೇಮಕಾತಿಗಾಗಿ ನೆಟ್ (NET) ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳಬೇಕೆಂಬ ಕನಿಷ್ಠ ಅವಶ್ಯಕ ವಿದ್ಯಾರ್ಹತೆ ಇರುತ್ತದೆ. ಅದರಂತೆ ಡಾ.ಗುರುರಾಜ.ಎಸ್.ಹಡಗಲಿ ಇವರು ನೇಮಕಾತಿ ಹೊಂದುವ ಸಮಯದಲ್ಲಿ ಅಂದರೆ ದಿನಾಂಕ: **30.12.2003** ರಂದು ನೆಟ್ (NET) ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವುದನ್ನು ಆಧರಿಸಿ ಉಪನ್ಯಾಸಕ ಹುದ್ದೆಗೆ ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ಮುಂದುವರೆದು, ಸದರಿಯವರು ನೇಮಕಾತಿ ಸಮಯದಲ್ಲಿ  ಪಿ.ಎಚ್‌ಡಿ ಪದವಿಯನ್ನು ಸಹ ಹೊಂದಿದ್ದರಿಂದ ಸರ್ಕಾರಿ ಆದೇಶ ಸಂಖ್ಯೆ. ED 100 UNE 99 dt. 15.11.1999 ರ ಅ.ನಂ.12 ರ ಪ್ರಕಾರ ಹೆಚ್ಚಿನ ವಿದ್ಯಾರ್ಹತೆ ಎಂದು ಪರಿಗಣಿಸಿ ಶ್ರೀಯುತರಿಗೆ ನೇಮಕಾತಿ ಹೊಂದಿದ ದಿನಾಂಕದಿಂದ ಅಂದರೆ <u>ದಿನಾಂಕ: 24.06.2008 ರಿಂದ ಅನ್ವಯವಾಗುವಂತೆ</u> ನಾಲ್ಕು(04) ಮುಂಗಡ ಬಡ್ತಿಗಳನ್ನು ಮಂಜೂರು ಮಾಡಿ ಆದೇಶ ಜಾರಿ ಮಾಡಲಾಗಿರುತ್ತದೆ.

**ಕಾರಣ,** ಸರ್ಕಾರಿ ಆದೇಶ ಸಂಖ್ಯೆ. ED 100 UNE 99 dt. 15.11.1999 ರ ಅ.ನಂ.12 ರ ಪ್ರಕಾರ,  ಸದರಿಯವರು ನೇಮಕಾತಿ ಸಮಯದಲ್ಲಿ ಪಿ.ಎಚ್.ಡಿ ಪದವಿಯನ್ನು ಹೊಂದಿದ್ದಕ್ಕಾಗಿ ಅವರಿಗೆ ನಾಲ್ಕು ಮುಂಗಡ ಬಡ್ತಿಗಳನ್ನು ಮಂಜೂರು ಮಾಡಿರುವುದು ಸರಿಯಾದ ಕ್ರಮವಾಗಿರುವುದರಿಂದ ಈ ಆಕ್ಷೇಪಣೆಯ ಕಂಡಿಕೆಯಿಂದ ಸದರಿಯವರ ಹೆಸರನ್ನು ಕೈಬಿಡುವಂತೆ ಮಾನ್ಯ ಲೆಕ್ಕ ಪರಿಶೋಧಕರಿಗೆ ಕೋರಲಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

ಮುಂದುವರೆದು, ಇಲ್ಲಿ ನಿವೇದಿಸುವುದೇನೆಂದರೆ, ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.06.06.2018 ರಲ್ಲಿ 1996 ರ ಯುಜಿಸಿ ವೇತನ ಶ್ರೇಣಿ ಹಾಗೂ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನ್ನು ಬೋಧಕ ಸಿಬ್ಬಂದಿಗಳಿಗೆ ಅವರ ಸೇವಾವಧಿಯಲ್ಲಿ ದಿನಾಂಕ.15.11.1999 ಮತ್ತು 24.12.2009 ಕ್ಕಿಂತ ಮೊದಲು ಮಂಜೂರು ಮಾಡಿ ವಿಸ್ತರಿಸಿದ ಕುರಿತ ಆಕ್ಷೇಪಣೆಗಳ ತೀರುವಳಿ ಕುರಿತಂತೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.27.04.2018 ರ ತಮ್ಮ ಪತ್ರದಲ್ಲಿ ಈ ಕೆಳಗಿನಂತೆ ನಿರ್ದೇಶಿಸಿರುವುದಾಗಿ ತಿಳಿಸುತ್ತ ಅದರಂತೆ ಸದರ ಆಕ್ಷೇಪಿತ ಕಂಡಿಕೆಗಳಿಗೆ ಬೋಧಕ ಸಿಬ್ಬಂದಿವಾರು ಪ್ರತ್ಯೇಕವಾಗಿ ಅನುಸರಣೆಯನ್ನು ಸಲ್ಲಿಸುವಂತೆ ತಿಳಿಸಿದ್ದು ಇರುತ್ತದೆ.

*"1996 ರ ಯುಜಿಸಿ ವೇತನ ಶ್ರೇಣಿ ನಿಯಮಗಳನ್ವಯ ದಿ:1-1-1996 ರಿಂದ 15-11-1999 ರ ಅವಧಿಯಲ್ಲಿ ಯಾವುದೇ ಪದೋನ್ನತಿ/ಸ್ಥಾನಿಕರಣ ಮತ್ತು ಪಿಎಚ್.ಡಿ./ಎಂ.ಫಿಲ್‌ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯಗಳನ್ನು ನೀಡುವುದಿದ್ದಲ್ಲಿ ಸರ್ಕಾರದ ಆದೇಶ ಜಾರಿ ದಿ:15-11-1999 ರಿಂದಲೇ ಅನ್ವಯಿಸಿ ನೀಡುವುದು. ಒಂದು ವೇಳೆ ಯುಜಿಸಿ 1986 ರ ವೇತನ ಶ್ರೇಣಿ & 1989 ರ ಸಿಎಎಸ್ ಮಾರ್ಗಸೂಚಿಗಳನ್ವಯ ದಿ:1-1-1996 ರಿಂದ 15-11-1999 ಅವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ & ಪಿಎಚ್.ಡಿ./ಎಂ.ಫಿಲ್‌ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯ ನೀಡಿದ್ದಲ್ಲಿ ಸದರೀ ಮೂಲ ವೇತನಕ್ಕೆ ಸಂವಾದಿಯಾಗಿ 1996 ರ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದನ್ನು ಪರಿಶೀಲಿಸಿ, ಸದರೀ ಆಕ್ಷೇಪಿತ ಕಂಡಿಕೆಗಳ ತೀರುವಳಿ ಕುರಿತು ಕ್ರಮಕೈಗೊಳ್ಳಲು ಸೂಚಿಸಿದೆ."*

*"2006 ರ ಯುಜಿಸಿ ವೇತನ ಶ್ರೇಣಿ ನಿಯಮಗಳನ್ವಯ ದಿ:1-1-2006 ರಿಂದ 24-12-2009 ರ ಅವಧಿಯಲ್ಲಿ ಯಾವುದೇ ಪದೋನ್ನತಿ/ಸ್ಥಾನಿಕರಣ ಮತ್ತು ಪಿಎಚ್.ಡಿ. ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯಗಳನ್ನು ನೀಡುವುದಿದ್ದಲ್ಲಿ ಸರ್ಕಾರದ ಆದೇಶ ಜಾರಿ ದಿ:24-12-2009 ರಿಂದಲೇ ಅನ್ವಯಿಸಿ ನೀಡುವುದು. ಒಂದು ವೇಳೆ ಯುಜಿಸಿ 1996 ರ ವೇತನ ಶ್ರೇಣಿ & 2000 ರ ಸಿಎಎಸ್ ಮಾರ್ಗಸೂಚಿಗಳನ್ವಯ ದಿ:1-1-2006 ರಿಂದ 24-12-2009 ರ ಅವಧಿಯಲ್ಲಿ ಪದೋನ್ನತಿ/ಸ್ಥಾನಿಕರಣ & ಪಿಎಚ್.ಡಿ ಗಾಗಿ ಪ್ರೋತ್ಸಾಹಕ ವೇತನ ಬಡ್ತಿ ಸೌಲಭ್ಯ ನೀಡಿದ್ದಲ್ಲಿ ಸದರೀ ಮೂಲ ವೇತನಕ್ಕೆ ಸಂವಾದಿಯಾಗಿ 2006 ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದನ್ನು ಪರಿಶೀಲಿಸಿ, ಸದರೀ ಆಕ್ಷೇಪಿತ ಕಂಡಿಕೆಗಳ ತೀರುವಳಿ ಕುರಿತು ಕ್ರಮಕೈಗೊಳ್ಳಲು ಸೂಚಿಸಿದೆ."*

ಅಲ್ಲದೇ ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.27.11.2018 ರಲ್ಲಿ ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ ಈ ಕೆಳಕಾಣಿಸಿದಂತೆ ನಿರ್ದೇಶಿಸಿರುವುದಾಗಿ ತಿಳಿಸಿ, ಅದರಂತೆ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

*"ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಈ ಕಚೇರಿಗೆ ಸಲ್ಲಿಸಿ ಆಕ್ಷೇಪಿತ ಕಂಡಿಕೆಗಳ ತೀರುವಳಿ ಮಾಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ. ಬಾಕಿ ಇರುವ ಎಲ್ಲಾ ವರ್ಷಗಳ ವರದಿಗಳಲ್ಲಿ ಕಾಣಿಸಿದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥ ಪಡಿಸದಿರುವ ವಿಷಯವನ್ನು ಕೇಂದ್ರ ಕಚೇರಿಯಲ್ಲಿ ಜರುಗಿಸಿದ್ದ ದಿನಾಂಕ.19.11.2018 ರ ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ. ಕಾರಣ ಸದರಿ ನಿರ್ದೇಶನದನುಸಾರ ಲೆಕ್ಕ ಪರಿಶೋಧನಾ ಆಕ್ಷೇಪಿತ ಕಂಡಿಕೆಗಳಿಗೆ ದ್ವಿಪ್ರತಿಗಳಲ್ಲಿ ಅನುಸರಣಾ ವರದಿ ಸಲ್ಲಿಸಲು ಕೋರಿದೆ."*

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, ಡಾ. ಗುರುರಾಜ ಹಡಗಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರಿಗೆ ನೇಮಕಾತಿ ಸಮಯದಲ್ಲಿ ಪಿಎಚ್.ಡಿ. ಹೊಂದಿದ್ದು ನೆಟ್/ಸೆಟ್/ಸ್ಲೆಟ್ ಹೊಂದದವರಿಗೆ ಪ್ರೋತ್ಸಾಹಕವಾಗಿ ವಿಶೇಷ ಬಡ್ತಿಗಳನ್ನು ಮಂಜೂರು ಮಾಡಿರುವ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಪ್ರಮುಖ ಅಂಶಗಳ ಪ್ರಕಾರ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

<u>ಹಣಕಾಸು ಸಮಿತಿ ಕಲಂ ಸಂಖ್ಯೆ. 02 ದಿನಾಂಕ 10.12.2021</u>

"ಡಾ. ಗುರುರಾಜ ಹಡಗಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರಿಗೆ ನೇಮಕಾತಿ ಸಮಯದಲ್ಲಿ ಪಿಎಚ್.ಡಿ. ಹೊಂದಿದ್ದು ನೆಟ್/ಸೆಟ್/ಸ್ಲೆಟ್ ಹೊಂದದವರಿಗೆ ಪ್ರೋತ್ಸಾಹಕವಾಗಿ ವಿಶೇಷ ಬಡ್ತಿಗಳನ್ನು ಮಂಜೂರು ಮಾಡಿರುವ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಈಗಾಗಲೇ ಇಂತಹ ಪ್ರಕರಣಗಳಲ್ಲಿ ಕಂಡಿಕೆಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಕೈಬಿಡಲಾಗಿದ್ದು, ಅದರಂತೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಸಭೆಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."

ಆದ್ದರಿಂದ, ಸದರ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–25: ವಿಷಯ–:** ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 05.08.2022ರ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 08.08.2022 ರ ಪತ್ರವನ್ನು ತಮ್ಮ ಅವಗಾಹನೆಗಾಗಿ ಮಂಡಿಸಲಾಗಿದೆ.

ಕುಲಸಚಿವರು, ಕವಿವಿ, ಧಾರವಾಡ ಇವರು ತಮ್ಮ ಪತ್ರದಲ್ಲಿ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು, ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಸಲ್ಲಿಸಿದ ದಿನಾಂಕ: 05.08.2022 ರ ಪತ್ರದಲ್ಲಿನ ವಿಷಯ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಮತ್ತು ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಸಲ್ಲಿಸಿದ ಪ್ರಸ್ತಾವನೆಯ ಬಗ್ಗೆ ತಿಳಿಸುತ್ತ ಸಿಂಡಿಕೇಟ ಸಭೆಗೆ ಕಲಂ ತಯಾರಿಸಿ ಮಂಡಿಸಲು ತಿಳಿಸಿರುತ್ತಾರೆ.

ಕುಲಸಚಿವರು, ಕವಿವಿ, ಧಾರವಾಡ ಇವರ ದಿನಾಂಕ:08.08.2022 ರ ಪತ್ರದ ಜೊತೆಗೆ ಲಗತ್ತಿಸಿದ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು, ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಸಲ್ಲಿಸಿದ ದಿನಾಂಕ: 05.08.2022 ರ ಪ್ರಸ್ತಾವನೆಯಲ್ಲಿ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಮತ್ತು ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ದಿನಾಂಕ: 18.08.2022 ರಂದು ಜರುಗುವ ಸಿಂಡಿಕೇಟ ಸಭೆಗೆ ಮಂಡಿಸಲು ಈ ಕೆಳಗಿನಂತೆ ಕೋರಿರುತ್ತಾರೆ.

> **"Karnatak Arts College is having Mathematics Department without any subjects either in its Degrees programmes or in PUC. Similarly, it has statistics department also having only one paper in B.A. with workload for a single teacher, but not in PUC. The recruited permanent faculties in Karnatak Arts College for the said subjects are working for Science College. Since both the subjects are purely belonging to Science stream, it is necessary to shift the said Departments along with Faculty from Karnatak Arts College to Karnatak Science College. Administratively, it is good also for monitoring the day-to-day academic activities by the Principal of Karnatak Science College.**
>
> **Hence, I am herewith proposing the item for Syndicate to be held on 18-08-2022 for consideration of Shifting / Transferring the Mathematics and Statistics Departments along with Permanent teachers from Karnatak Arts College to Karnatak Science College".**

ಸದರ ವಿಷಯವಾಗಿ ಇಲ್ಲಿ ನಿವೇದಿಸುವುದೇನೆಂದರೆ, ಈ ವಿಷಯದ ಕುರಿತು ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರು ಮಂಡಿಸಿದ ಕಡತದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಅಡಿಯಲ್ಲಿ ಗಣಿತ ಸಂಖ್ಯಾಶಾಸ್ತ್ರ ವಿಷಯಗಳ ಟಿಎ/ಜಿಎಫ್ ಎಂದು ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಆಡಳಿತದ ಅಧೀನಕ್ಕೊಳಪಡಿಸುವ ವಿಷಯದ ಕುರಿತು ಸಿಂಡಿಕೇಟ ಸದಸ್ಯರಾದ ಶ್ರೀಯುತ ಸುಧೀಂದ್ರ ದೇಶಪಾಂಡೆ ಹಾಗೂ ಶ್ರೀಯುತ ರವಿ ಮಾಳಗೇರ ಮಾನ್ಯ ಸಿಂಡಿಕೇಟ ಸದಸ್ಯರು ಇವರುಗಳಿಂದ ಸ್ವೀಕೃತವಾದ ಪ್ರಸ್ತಾವನೆಯನ್ವಯ ದಿನಾಂಕ: 18.05.2020 ರಂದು ಕರ್ನಾಟಕ ವಿಜ್ಞಾನ

ಕುಲಸಚಿವರು ಕುಲಪತಿಗಳು

ಮಹಾವಿದ್ಯಾಲಯದಿಂದಲೇ ಕಡತ ಮಂಡಿಸಲಾಗಿ ದಿನಾಂಕ: 23.05.2020 ರಂದು ಜರುಗಿದ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಗಿದ್ದು ಸದರ ಸಿಂಡಿಕೇಟ ಸಭೆಯಲ್ಲಿ ನಿರ್ಣಯ ಸಂಖ್ಯೆ. 25 ರಲ್ಲಿ ಈ ಕೆಳಗಿನಂತೆ ನಿರ್ಣಯ ತೆಗೆದುಕೊಂಡಿರುವದು ಕಂಡುಬಂದಿರುತ್ತದೆ.

**ಆಡಳಿತ ಮಂಡಳಿ ಠರಾವು ಸಂಖ್ಯೆ.25 ದಿನಾಂಕ: 23.05.2020**

"ಕರ್ನಾಟಕ ಕಲಾ ಮಹಾವಿದ್ಯಾಲಯದ ಅಡಿಯಲ್ಲಿರುವ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯಗಳ ಟಿಎ/ಜಿಎಫ್ ಎಂದು ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಆಡಳಿತದ ಅಧೀನಕ್ಕೊಳಪಡಿಸುವ ವಿಷಯವನ್ನು ಪ್ರಸ್ತಾಪಿಸಿದಾಗ, ಶ್ರೀ. ಸುಧೀಂದ್ರ ದೇಶಪಾಂಡೆ ಅವರು ಮಾತನಾಡಿ ಶಿಕ್ಷಕರು ಮಾತ್ರವಲ್ಲ ಇಡೀ ವಿಭಾಗವನ್ನು ವಿಜ್ಞಾನ ಮಹಾವಿದ್ಯಾಲಯದ ಅಧೀನಕ್ಕೆ ಒಳಪಡಿಸಬೇಕೆಂದು ಅಭಿಪ್ರಾಯಿಸಿದರು. ಈ ವಿಷಯವಾಗಿ ಸಿಂಡಿಕೇಟ ಸಭೆಯಲ್ಲಿ ಪ್ರಸ್ತಾವನೆಯ ಆಗುಹೋಗುಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ಸ್ಪಷ್ಟ ವರದಿ ಸಲ್ಲಿಸಲು ಸಮಿತಿಯನ್ನು ರಚಿಸಿ, ಸಮಿತಿ ಸಲ್ಲಿಸಿದ ವರದಿ ಆಧಾರದ ಮೇಲೆ ಕಾಲೇಜು ಪ್ರಾರಂಭವಾಗುವ ಮುನ್ನ ಸೂಕ್ತ ನಿರ್ಧಾರ ಕೈಗೊಳ್ಳಲು ನಿರ್ಧರಿಸಲಾಯಿತು. ಹಾಗೆಯೇ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು/ ಸಹಾಯಕ ಉಪನ್ಯಾಸಕರ ಕಾರ್ಯಬಾಹುಳ್ಯವನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ಕಡ್ಡಾಯವಾಗಿ ವರ್ಗಾವಣೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಸದರ ಮೇಲ್ಕಾಣಿಸಿದ ಆಡಳಿತ ಮಂಡಳಿ ನಿರ್ಣಯ ಸಂಖ್ಯೆ.25 ದಿನಾಂಕ: 23.05.2020 ರನ್ವಯ ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ:06.06.2020 ರ ಮೂಲಕ ಕರ್ನಾಟಕ ಕಲಾ ಮಹಾವಿದ್ಯಾಲಯದ ಅಡಿಯಲ್ಲಿ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯಗಳ ಅತಿಥಿ ಉಪನ್ಯಾಸಕರ ಮತ್ತು ಸಹಾಯಕ ಉಪನ್ಯಾಸಕರ ಕಾರ್ಯಬಾಹುಳ್ಯವನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ಕಡ್ಡಾಯವಾಗಿ ವರ್ಗಾವಣೆ ಮಾಡಬೇಕೆಂದು ತೀರ್ಮಾನಿಸಲಾಗಿರುತ್ತದೆ.

ಸದರ ವಿಷಯವಾಗಿ ನಿವೇದಿಸಿಕೊಳ್ಳುವುದೇನೆಂದರೆ, ಪ್ರಸ್ತುತ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಅಧೀನದ ಕಾರ್ಯನಿರ್ವಹಣೆಯಲ್ಲಿದ್ದು ಹಾಗೂ ಸದರಿ ಮಹಾವಿದ್ಯಾಲಯಕ್ಕೆ ಮಂಜೂರಾದ ಬೋಧಕ ಹುದ್ದೆಗಳಿರುತ್ತವೆ. ಸದರಿ ಖಾಯಂ ಬೋಧಕ ಸಿಬಂದಿಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಅಧೀನದ ಕಾರ್ಯನಿರ್ವಹಣೆಯಲ್ಲಿ ಇರುತ್ತಾರೆ. ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ತರಗತಿಗಳಿಗೆ ತೊಂದರೆಯಾಗದಂತೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕಾರ್ಯ ಹೊಂದಾಣಿಕೆಯ ಮೇರೆಗೆ ಬೋಧಕ ಸಿಬ್ಬಂದಿಯವರು ತರಗತಿಗಳನ್ನು ಬೋಧಿಸುತ್ತಿರುವರು.

ಸದರ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಆಡಳಿತ ವ್ಯಾಪ್ತಿಗೊಳಪಟ್ಟದ್ದಾಗಿದ್ದು ಸದರಿ ಮಹಾವಿದ್ಯಾಲಯಕ್ಕೆ ಈ ಕೆಳಗಿನಂತೆ ಮಂಜೂರಾದ ಬೋಧಕ ಹುದ್ದೆಗಳಿರುತ್ತವೆ. ಆದರೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳು ಇರುವುದಿಲ್ಲ.

| ಅ. ನಂ. | ವಿಭಾಗ | ಮಂಜೂರಾದ ಹುದ್ದೆಗಳು | ಕಾರ್ಯನಿರತ ಹುದ್ದೆಗಳು | ಖಾಲಿ ಹುದ್ದೆಗಳು | ಶರಾ |
|---|---|---|---|---|---|
| 1 | ಗಣಿತ | 08 | 03 | 04 | ಒಂದು ಹುದ್ದೆಯನ್ನು ಗಣಕ ಯಂತ್ರ ವಿಭಾಗಕ್ಕೆ ಈ ಕಚೇರಿ ಟಿಪ್ಪಣಿ ಸಂಖ್ಯೆ.1480, ದಿ:24.02.2014 ರ ಮೂಲಕ ಮರು ಹಂಚಿಕೆ ಮಾಡಲಾಗಿದೆ. |
| 2 | ಸಂಖ್ಯಾಶಾಸ್ತ್ರ | 09 | 04 | 05 | --- |

ಕುಲಸಚಿವರು

ಕುಲಪತಿಗಳು

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಡಾ.ಬಿ.ಬಸವನಗೌಡ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪ್ರಸ್ತಾವನೆಯು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗಗಳ ಮಂಜೂರಾದ ಹುದ್ದೆಗಳನ್ನು ಮತ್ತು ಕಾರ್ಯನಿರತ ಬೋಧಕ ಸಿಬ್ಬಂದಿಯವರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು ಈ ಪ್ರಕ್ರೀಯೆಯು ಕಲಾ ಮತ್ತು ವಿಜ್ಞಾನ ನಿಖಾಯದ ಡೀನರುಗಳ ಕೈಗೊಳ್ಳುವ ನಿರ್ಣಯಕೈಕೊಳ್ಳಪಟ್ಟಿರುತ್ತದೆ. ಕಾರಣ ಕಲಾ ಮತ್ತು ವಿಜ್ಞಾನ ನಿಖಾಯಗಳ ಡೀನರುಗಳ ಜಂಟಿ ಸಭೆಯನ್ನು ಕರೆದು, ಸದರ ಸಭೆಯಲ್ಲಿ (Arts and Science Faculties Joint Deans Meeting) ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಡಾ.ಬಿ.ಬಸವನಗೌಡ ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ದಿನಾಂಕ: 05.08.2022 ರ ಪ್ರಸ್ತಾವನೆಯ ಅಂಶಗಳನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-26: ವಿಷಯ-: 2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಹೊಸ ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಕುರಿತು ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಸಭೆಯ ಕಲಂನ್ನು ಅನುಮೋದನೆಗಾಗಿ ಮಂಡಿಸಿದೆ.

ಟಿಪ್ಪಣಿ :

2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಸ್ನಾತಕ/ಸ್ನಾತಕೋತ್ತರ ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸ ಕುರಿತು ಬಂದಿರುವ ಪ್ರಸ್ತಾವನೆಗಳನ್ನು ಸ್ಥಾನಿಕ ತನಿಖಾ ಸಮಿತಿಯ ಚೇರಮನ್/ಸದಸ್ಯರು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸಿದ್ದು, ಸದರ ವರದಿಯನ್ನು ದಿನಾಂಕ 13/08/2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ಮುಂದೆ ಈ ಕೆಳಗಿನಂತೆ ಮಂಡಿಸಲಾಗಿತ್ತು.

| 2022-23ನೇ ಶೈಕ್ಷಣಿಕ ಸಾಲಿನಲ್ಲಿ ಮುಂದುವರಿಕೆ/ ಪಂಚವಾರ್ಷಿಕ ಸಂಯೋಜನೆಗಾಗಿ ಸಲ್ಲಿಸಿದ ಪ್ರಸ್ತಾವನೆ | 2022-23ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು ಸಲ್ಲಿಸಿದ ಪ್ರಸ್ತಾವನೆ | 2022-23ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಕೋರ್ಸ ಪ್ರಾರಂಭಿಸಲು ಬಂದ ಪ್ರಸ್ತಾವನೆ | ಹೊಸ ವಿಷಯಕ್ಕೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ | ಹೊಸ ಶಾಶ್ವತ ಸಂಯೋಜನೆಗೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ | ಸ್ವಯಂ ಮುಚ್ಚುವ ಮಹಾವಿದ್ಯಾಲಯ/ ಕೋರ್ಸಗಳಿಗೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ |
|---|---|---|---|---|---|
| A | B | C | D | E | F |
| 232 | 07 | 09 | 10 | 09 | 02 |

ದಿನಾಂಕ: 13-08-2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್‌ನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

"2022-23ನೇ ಶೈಕ್ಷಣಿಕ ಸಾಲಿನಲ್ಲಿ ಸಂಯೋಜನೆ ಮುಂದುವರಿಕೆ/ಪಂಚವಾರ್ಷಿಕ ಸಂಯೋಜನೆಗೆ ಸಂಬಂಧಿಸಿದ 232 (ಅನುಬಂಧ "ಎ" ದಲ್ಲಿರುವ) ಮಹಾವಿದ್ಯಾಲಯಗಳ ಪ್ರಸ್ತಾವನೆಯನ್ನು ಸಂಯೋಜನೆ ಮುಂದುವರೆಸಲು ಅನುಮೋದಿಸಲಾಯಿತು. ಅನುಬಂಧದ "ಬಿ", "ಸಿ", "ಡಿ" ಹಾಗೂ "ಇ" ಗಳಿಗೆ ಸಂಬಂಧಿಸಿದಂತೆ ಸರ್ಕಾರವು ನಿಗದಿಗೊಳಿಸಿದ ಅಂಕಗಳು ಹೊಂದಿರುವ ಮಹಾವಿದ್ಯಾಲಯಗಳ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು. ಮುಂದುವರೆದು, ಅನುಬಂಧ "ಎಫ್" ದಲ್ಲಿ ತೋರಿಸಲಾದ ಸ್ವಯಂ ಮುಚ್ಚುವ ಮಹಾವಿದ್ಯಾಲಯಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

2022-23ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ವಿದ್ಯಾವಿಷಯಕ್ ಪರಿಷತ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಪರಿಶೀಲಿಸಿ ಅನುಮೋದನೆಗಾಗಿ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಯಿತು.

## ನಿರ್ಣಯ

**2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಹೊಸ ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಕುರಿತು ವಿದ್ಯಾವಿಷಯಕ್ ಪರಿಷತ್ ನಿರ್ಣಯಗಳನ್ನು ಆಡಳಿತ ಮಂಡಳಿಯ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು

ಕಲಂ ಸಂಖ್ಯೆ–27: ವಿಷಯ–: Consideration of the draft Statute relating to Appointment and Promotion of Teachers and Other Academic Staff and Measures for the Maintenance of Standards in Higher Education in the Karnatak University, Dharwad, as per the UGC Regulations-2018.

**Note:**

The Under Secretary, Department of Higher Education, Government of Karnataka vide letter no ED 309 UNE 2021 dated. 26-07-2022 has sent model regulations relating to Appointment and Promotion of Teachers and Other Academic Staff and Measures for the Maintenance of Standards in Higher Education in the...University, as per the UGC Regulations-2018, with direction to do the needful in this regard.

The said regulations were placed before the Deans Committee meeting held on 12.08.2022. The Deans Committee after detailed discussion resolved as under:

> "ಸಭೆಯಲ್ಲಿ ಯುಜಿಸಿಯ 2018ರ ನಿಯಮಾವಳಿಗಳನ್ನು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ನೀಡಿದ ಬೋಧಕ ಹುದ್ದೆಗಳ ನೇಮಕಾತಿ ಕುರಿತು ಮಾದರಿ ಪರಿನಿಯಮಾವಳಿಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಅವಶ್ಯವಾಗಿ ಬೇಕಾದಂತಹ ಅಲ್ಪ ಮಾರ್ಪಾಡುಗಳೊಂದಿಗೆ ಸಮಿತಿಯು ಒಮ್ಮತದಿಂದ ಒಪ್ಪಿಗೆಯನ್ನು ನೀಡಿತು"

It is submitted that the model Statute needs to be placed before the Academic Council and Syndicate as a draft Statute. On approval the said draft statute needs to be sent for assent of H.E. the Chancellor of Universities and Governor of Karnataka. On assent of the draft statute the same be implemented in the University.

The draft statute relating to Appointment and Promotion of Teachers and Other Academic Staff and Measures for the Maintenance of Standards in Higher Education in the Karnatak University, Dharwad, as per the UGC Regulations-2018 was placed before the Academic Council meeting held on 13.08.2022. The Academic Council vide Res.No.18 resolved as under:

> "ವಿದ್ಯಾವಿಷಯಕ ಪರಿಷತ್ ಸಭೆಯು draft Statute relating to Appointment and Promotion of Teachers and Other Academic Staff and Measures for the Maintenance of Standards in Higher Education in the Karnatak University, Dharwad, as per the UGC Regulations-2018 ಗೆ ಒಪ್ಪಿಗೆ ನೀಡಿತು. ಸದರ ನಿರ್ಣಯಕ್ಕೆ ಡಾ.ಕೆ.ಎಮ.ಹೊಸಮನಿ, ವಿದ್ಯಾವಿಷಯಕ ಪರಿಷತ್ ಸದಸ್ಯರು, ಯುಜಿಸಿ 2010 ರ ನಿಯಮಾವಳಿಗಳ ಬಾಕಿ ಇರುವ ಎಲ್ಲ ಪದೋನ್ನತಿಗಳನ್ನು ನೀಡಿ ನಂತರ ಯುಜಿಸಿ 2018 ರ ನಿಯಮಾವಳಿಗಳ ಪ್ರಕಾರ ಅನುಶಾಸನವನ್ನು ರಚಿಸುವ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಿದರು."

Further, the said draft Statute was placed before the Finance Committee meeting held on 17.08.2022. The Finance Committee in its meeting has resolved as under:

> "Finance Committee considered the draft Statute relating to Appointment and Promotion of Teachers and Other Academic Staff and Measures for the Maintenance of Standards in Higher Education in the Karnataka University, Dharwad as per the UGC Regulations-2018 and approved the said draft Statute further recommended for consideration of Syndicate".

ಕುಲಸಚಿವರು

ಕುಲಪತಿಗಳು

Hence, the Statute relating to Appointment and Promotion of Teachers and Other Academic Staff and Measures for the Maintenance of Standards in Higher Education in the Karnatak University, Dharwad, as per the UGC Regulations-2018 is placed before Syndicate for consideration.

**Resolution**

**Syndicate considered and approved the recommendations of the Academic Council and Finance Committee related to the draft Statute of Appointment and Promotion of Teachers and Other Academic Staff and Measures for the Maintenance of Standards in Higher Education in the Karnatak University, Dharwad as per the UGC Regulations-2018.**

ಕುಲಸಚಿವರು

ಕುಲಪತಿಗಳು

<u>ಕಲಂ ಸಂಖ್ಯೆ-28: ವಿಷಯ-</u>: ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ (10%) ಪದೋನ್ನತಿ ನೀಡುವ ಕುರಿತು.

ಟಿಪ್ಪಣಿ

ಕರ್ನಾಟಕ್ಕ ವಿಶ್ವವಿದ್ಯಾಲಯದ ಅನುಶಾಸನದಲ್ಲಿ ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ (10%) ಪದೋನ್ನತಿ ನೀಡುವ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಅನುಶಾಸನದ ಅವಕಾಶದಂತೆ ಮುಂಬಡ್ತಿ ನೀಡಬೇಕೆಂದು ಕವಿವಿ ಘಟಕ ಮಹಾವಿದ್ಯಾಲಯಗಳ ಶಿಕ್ಷಕರು ಮತ್ತು ಶಿಕ್ಷಕರ ಸಂಘವು ಹಲವಾರು ಬಾರಿ ಮನವಿಗಳನ್ನು ನೀಡಿರುತ್ತದೆ. ಸದರ ವಿಷಯವನ್ನು ದಿ.30.07.2020 ರಂದು ಜರುಗಿದ ಆಡಳಿತ ಮಂಡಳಿ ಸಭೆಗೆ ಮಂಡಿಸಲಾಗಿತ್ತು. ಆಡಳಿತ ಮಂಡಳಿಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ. (ನಿರ್ಣಯ ಸಂಖ್ಯೆ 03).

> **"ವಿಷಯದ ಬಗ್ಗೆ ಚರ್ಚಿಸಿದ ನಂತರ, ಅರ್ಜಿಗಳ ಪರಿಶೀಲನೆ ಕೈಗೆತ್ತಿಕೊಂಡು ಮತ್ತು ಮುಂಬಡ್ತಿ ಪ್ರಕ್ರಿಯೆಯನ್ನು ಆದಷ್ಟು ಬೇಗನೆ ಅಗತ್ಯ ಕಾನೂನು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಮುಂದುವರೆಸಲು ಸಭೆಯು ಅನುಮತಿ ನೀಡಿತು".**

ಈ ಹಿನ್ನಲೆಯಲ್ಲಿ ಪದೋನ್ನತಿ ಪ್ರಕ್ರಿಯೆಯನ್ನು ಹಲವಾರು ಅಧಿಸೂಚನೆ ಹೊರಡಿಸುವ ಮೂಲಕ ಚಾಲನೆ ನೀಡಲಾಗಿರುತ್ತದೆ. ಈಗ ಸದರ ಅರ್ಜಿಗಳ ಪರಿಶೀಲನೆ ಕಾರ್ಯ, ಸಂದರ್ಶನ, ಪೂರ್ಣಗೊಂಡಿದ್ದು ಬಿಒವಿ ಸಮಿತಿ ಶಿಫಾರಸ್ಸನ್ನು ಪಡೆಯಲಾಗಿದೆ. (**Previous Notifications**: 2011,2013,2015,2017 (Feb) & 2017(July))

ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ (10%) ಪದೋನ್ನತಿ ನೀಡುವ ಅನುಶಾಸನದ ನಿಯಮಗಳು ಈ ಕೆಳಗಿನಂತಿದೆ.

**14.0 PROFESSORS IN UNDER GRADUATE AND POST GRADUATE COLLEGES:**

**14.1 (i)** Ten percent of the number of the posts of Associate Professor in an Under Graduate Colleges shall be that of Professors and shall be subject to the same criterion for selection/appointment as that of Professors in University.

Provided that, there shall be no more than one post of Professor in each Department:

Provided further that, one-fourth (25%) of the posts of Professor in Under Graduate Colleges shall be directly recruited or filled on deputation by eligible teachers and the remaining three-fourths (75%) of posts of Professor shall be filled by CAS promotion from among eligible Associate Professors of the relevant department of the Under Graduate College.

**(ii)** Identification of posts of Professor in an Under Graduate College for being filled through direct recruitment/deputation shall be carried out by the University in consultation with the College. Where the number of posts of Professor worked out as percentage of the number of posts of Associate Professor for CAS promotion or direct recruitment/deputation is not an integer, the same shall be round off to the next higher integer.

ಕುಲಸಚಿವರು

ಕುಲಪತಿಗಳು

(iii) The selection process is to be conducted by the University by receiving PBAS proformas from eligible Associate Professors based on seniority and three times in number of the available vacancies. In case the number of candidates available is less than three times the number of vacancies, the zone of consideration will be limited to the actual number of candidates available. The selection shall be conducted through the API scoring system with PBAS methodology and selection committee process stipulated in this Statute for appointment of Professors. For direct recruitment of the 25% of the posts, the 'Rota-quota system' shall be followed starting with promotions and the direct recruitment quota shall be rotated in an alphabetical order.

ಕವಿವಿ ಅನುಶಾಸನದನ್ವಯ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಪದೋನ್ನತಿಯ ಪ್ರಕ್ರಿಯೆಯನ್ನು ಜರುಗಿಸಲಾಗಿದೆ.

1. ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳನ್ನು ಒಂದೊಂದು ಘಟಕವಾಗಿ (College as one unit) ಪರಿಗಣಿಸಲಾಗಿದೆ.
2. ಹುದ್ದೆಗಳ ಸಂಖ್ಯೆಗಳನ್ನು ನಿರ್ದರಿಸುವಾಗ ಮುಂದಿನ ಪೂರ್ಣಸಂಖ್ಯೆಗಳನ್ನು ಪರಿಗಣಿಸಲು ಕಲ್ಪಿಸಲಾಗಿದೆ. (If direct recruitment/ deputation is not an integer the same shall be round of to the next higher integer.)
3. ಸದರಿ ಘಟಕ ಮಹಾವಿದ್ಯಾಲಯದಲ್ಲಿ ಜುಲೈ-2017ರ (ಕೊನೆಯ ಅಧಿಸೂಚನೆಯ ದಿನಾಂಕ) ರಂದು ಕಾರ್ಯನಿರ್ವಹಿಸುವತ್ತಿರುವ ಸಹ-ಪ್ರಾಧ್ಯಾಪಕರ ಸಂಖ್ಯೆಯನ್ನು ಪರಿಗಣಿಸಲಾಗಿದೆ.
4. ಘಟಕ ಮಹಾವಿದ್ಯಾಲಯದಲ್ಲಿ ಒಂದು ವಿಭಾಗಕ್ಕೆ ಒಂದು ಪ್ರಾಧ್ಯಾಪಕ ಪದೋನ್ನತಿಯನ್ನು ಮಾತ್ರ ನೀಡಲು ಅವಕಾಶವಿರುವುದು. ಈ ಪ್ರಕ್ರಿಯೆಯಲ್ಲಿ ಪದೋನ್ನತಿಯ ಮುಖಾಂತರ 75% ಹುದ್ದೆಗಳನ್ನು ಹಾಗೂ ನೇರ ನೇಮಕಾತಿ ಮುಖಾಂತರ 25% ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.
5. ಪದೋನ್ನತಿ ನೀಡುವ ಸಂದರ್ಭದಲ್ಲಿ ರೋಟಾ ಕೋಟಾ ಆಧಾರದ ಮೇಲೆ ವಿಭಾಗಗಳನ್ನು ನಿರ್ಧರಿಸಿ ಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅಂದರೆ ವಿಭಾಗಗಳನ್ನು **A,B,C,D..** ಅನುಕ್ರಮದಲ್ಲಿ ಹೊಂದಿಸಲಾಗಿರುತ್ತದೆ.
6. ಮೇಲ್ಕಾಣಿಸಿದ ಅಂಶಗಳ ಮಾಹಿತಿಯನ್ನು ಈ ಕೆಳಗೆ ಕಾಣಿಸಿದ ಕೋಷ್ಟಕದಲ್ಲಿ ಪೂರೈಸಲಾಗಿದೆ.

| Constituent College | Working strength of Associate Professors in Constituent Colleges as on 01.07.2017 | 10% | Rounded off | Promotion (75%) | Direct Recruitment (25%) |
|---|---|---|---|---|---|
| KACD | 25 | 2.5 | 03 | 02 | 01 |
| KSCD | 25 | 2.5 | 03 | 02 | 01 |
| EDUCATION | 02 | 0.2 | 01 | 01 | - |
| Total | 52 | 5.2 | 07 | 05 | 02 |

ಕುಲಸಚಿವರು

ಕುಲಪತಿಗಳು

ಸದರ ಪ್ರಾಧ್ಯಾಪಕ ಪದೋನ್ನತಿಗೆ ಅರ್ಜಿ ಸಲ್ಲಿಸಿದ ಹಾಗೂ ಸಂದರ್ಶನಕ್ಕೆ ಹಾಜರಾದ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರ ವಿವರ ಈ ಕೆಳಗಿನಂತಿದೆ.

## 1. KARNATAK ARTS COLLEGE, DHARWAD

| SL No | Subject | Name of Applicants | Eligible applicants who attended the interview | Remarks |
|---|---|---|---|---|
| 1 | Anthropology | Dr.V.Jagadeesh | Dr.V.Jagadeesh | |
| 2 | Economics | Dr.Honnappa | Dr.Honnappa | |
| 3 | English | Dr(Smt).S.A.Jalihal | --- | |
| 4 | Kannada | Dr.D.B.Karadoni | Dr.D.B.Karadoni | |
| 5 | Psychology | Dr(Smt).R.N.Kenchappanavar | Dr(Smt).R.N.Kenchappanavar | |
| 6 | Urdu & Persian | Dr(Smt).S.A.Kolur | Dr(Smt).S.A.Kolur | |

## 2. KARNATAK UNIVERSITY COLLEGE OF EDUCATION

| SL No | Subject | Name of Applicants | Eligible applicants who attended the interview | Remarks |
|---|---|---|---|---|
| 1 | EDUCATION | 1.Dr(Smt) Guddadanaveri | 1.Dr(Smt) Guddadanaveri | |
| | | 2.Dr.R.H.Naik | 2.Dr.R.H.Naik | |

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸದರ ಪದೋನ್ನತಿ ಕುರಿತು ಅರ್ಜಿಗಳ ಪರಿಶೀಲನೆ ಕಾರ್ಯ, ಸಂದರ್ಶನ, ಪೂರ್ಣಗೊಂಡಿದ್ದು ಬಿಓಎ ಸಮಿತಿ ಶಿಫಾರಸ್ಸನ್ನು ಪಡೆಯಲಾಗಿದೆ. ಆದರೆ ಸದರ ಪದೋನ್ನತಿಗಳಿಗೆ ಕುರಿತಂತೆ Dr.O.Kotresh, ಸಹ-ಪ್ರಾಧ್ಯಾಪಕರು, ಇವರು, ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿರುವುರು. ಸದರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸಿರುವುದು.

> "Respondent No.2 to 5 are directed not to precipitate the matter in pursuance of the notification dated 12.10.2018 at Annexure-D, Insofar as it relates to Chemistry subject, till the next date of hearing"

ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಸಹಪ್ರಾಧ್ಯಾಪಕರ ಪದೋನ್ನತಿಯ ಕುರಿತು, ಮಾನ್ಯ ಉಚ್ಚನ್ಯಾಯಾಲಯದ ಅಂತಿಮ ಆದೇಶವನ್ನು ಪರಿಗಣಿಸಿ ಪದೋನ್ನತಿಯನ್ನು ನೀಡುವ ಬಗ್ಗೆ ಕ್ರಮವಹಿಸಬೇಕಾಗುತ್ತದೆ.

ಈ ಎಲ್ಲ ವಿಷಯಗಳನ್ನು ದಿನಾಂಕ. 19.11.2021 ರಂದು ನಡೆದ ಸಿಂಡಿಕೇಟ ಸಭೆಗೆ ಮಂಡಿಸಲಾಗಿತ್ತು. ಸದರ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

> "ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ(10%) ಪದೋನ್ನತಿ ನೀಡುವ ವಿಷಯದ ಬಗ್ಗೆ ಬಂದಿರುವ ಆಕ್ಷೇಪಣೆಗಳು ಹಾಗೂ ಸಾಧಕ ಬಾಧಕಗಳ ಬಗ್ಗೆ ಮತ್ತೊಮ್ಮೆ ಸಿಂಡಿಕೇಟ ಸಭೆಯಲ್ಲಿ ಚರ್ಚಿಸುವುದಾಗಿ ಕುಲಪತಿಗಳು ಸಭೆಗೆ ತಿಳಿಸಿದರು".

ಈ ಕುರಿತು ನಿವೇದಿಸುವುದೇನೆಂದರೆ, ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ(10%) ಪದೋನ್ನತಿ ನೀಡುವ ಕುರಿತು ಘಟಕ ಮಹಾವಿದ್ಯಾಲಯದ ಶಿಕ್ಷಕರು ಸದರ ಅನುಶಾಸನದಲ್ಲಿ ಪದೋನ್ನತಿ ನೀಡಿದ ನಂತರ ಜೇಷ್ಠತೆಯನ್ನು ನಿರ್ಧರಿಸುವ ಬಗ್ಗೆ, ಪದೋನ್ನತಿ ಕ್ರಮ (75% promotion and 25% direct recruitment), API Score ಬಗ್ಗೆ, ಹಾಗೂ Evidence of Guiding Doctoral Candidates ವಿಷಯಗಳ ಕುರಿತು ಸ್ಪಷ್ಟತೆ ಇಲ್ಲದಿರುವುದು ಎಂದು ತಿಳಿಸಿರುವರು. ಕಾರಣ,

ಕುಲಸಚಿವರು ಕುಲಪತಿಗಳು

ಅವಶ್ಯವಿದ್ದಲ್ಲಿ ಈ ವಿಷಯಗಳ ಕುರಿತು ಯುಜಿಸಿಯಿಂದ ಸ್ಪಷ್ಟೀಕರಣ ಪಡೆದು ಪದೋನ್ನತಿಯ ಪ್ರಕ್ರಿಯೆಯನ್ನು ಅಂತಿಮಗೊಳಿಸಲು ವಿನಂತಿಸಿರುವರು.

ಈ ಎಲ್ಲ ವಿಷಯಗಳನ್ನು ಪರಿಗಣಿಸಿ ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ (10%) ಪದೋನ್ನತಿ ನೀಡುವ ವಿಷಯವನ್ನು ದಿ.04.02.2022 ರ ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಆಡಳಿತ ಮಂಡಳಿಯು ಈ ಕೆಳಗಿನಂತೆ ನಿರ್ಣಯಿಸಿದೆ (ನಿರ್ಣಯ ಸಂಖ್ಯೆ 09).

> "ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ (10%) ಪದೋನ್ನತಿ ವಿಷಯದ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ಸಮಿತಿಯು ಈಗಾಗಲೇ ಕೆಲವು ನ್ಯಾಯಾಲಯ ಪ್ರಕರಣಗಳು ದಾಖಲಾಗಿದ್ದು, ಜೇಷ್ಠತೆಯ ವಿಷಯವಾಗಿ ರೋಟ ಕೋಟ ವಿಷಯವಾಗಿ, 75%, 25% ವಿಷಯವಾಗಿ **API** ಸ್ಕೋರ್ ವಿಷಯವಾಗಿ ಮತ್ತು **evidence of guiding doctoral candidates** ವಿಷಯವಾಗಿ ಸ್ಪಷ್ಟತೆ ಇಲ್ಲದಿರುವುದರಿಂದ ಪದೋನ್ನತಿ ನೀಡುವ ಬಗ್ಗೆ ಮುಂದುವರೆದಲ್ಲಿ ಇದು ವ್ಯಾಜಗಳಿಗೆ ಅವಕಾಶವಗುವ ಸಾಧ್ಯತೆಗಳಿರುವುದರಿಂದ ಮತ್ತು ಈ ಎಲ್ಲಾ ವಿಷಯಗಳ ಅಸ್ಪಷ್ಟತೆ ಬಗ್ಗೆ ಕೆಲವರಿಂದ ತೀವ್ರ ತರಹದ ಆಕ್ಷೇಪಣೆಗಳು ಬಂದಿದ್ದು, ಈ ಒಬ್ಬ **Service Matter Expert** ಮತ್ತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಂದ ಕಾನೂನು ಸಲಹೆ ಪಡೆದುಕೊಳ್ಳಲು ಕ್ರಮವಹಿಸಿ ಮುಂದೆ ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳುವುದೆಂದು ಸಿಂಡಿಕೇಟ್ ನಿರ್ಣಯಿಸಿತು. ಇದಕ್ಕೆ ಶ್ರೀ ರವಿಕುಮಾರ ಮಾಳಗೇರ, ಸಿಂಡಿಕೇಟ್ ಸದಸ್ಯರು ಅವರು ತಮ್ಮ ಅಸಮ್ಮತಿಯಿದೆ ಎಂದು ತಿಳಿಸಿದರು".

ಆಡಳಿತ ಮಂಡಳಿಯ ನಿರ್ಣಯದಂತೆ **Service Matter Expert** ಮತ್ತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಂದ ಕಾನೂನು ಸಲಹೆ ಪಡೆದುಕೊಳ್ಳಲಾಗಿದ್ದು, ಸದರ ಸಲಹೆಯ ಪ್ರತಿಗಳನ್ನು ಆಡಳಿತ ಮಂಡಳಿ ಸಭೆಗೆ ಮಂಡಿಸಲಾಗಿದೆ.(On the table).

ಈ ಎಲ್ಲ ವಿಷಯಗಳನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕವಿವಿ ಘಟಕ ಮಹಾವಿದ್ಯಾಲಯಗಳ ಸಹ-ಪ್ರಾಧ್ಯಾಪಕರುಗಳಿಗೆ ಅನುಶಾಸನದಲ್ಲಿನ ನಿಯಮ 14 ರಂತೆ ಪ್ರಾಧ್ಯಾಪಕ ಹುದ್ದೆಗೆ 10% ಪದೋನ್ನತಿ ನೀಡುವ ಅವಕಾಶದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿ ಯುಜಿಸಿ ನಿಯಮಾವಳಿಗಳ ಅನ್ವಯ ಹಾಗೂ ಕಾನೂನು ತಜ್ಞರು ಈ ವಿಷಯವಾಗಿ ನೀಡಿದ ಸಲಹೆಯಂತೆ ಕ್ರಮಜರುಗಿಸಲು ಒಮ್ಮತದಿಂದ ಸಿಂಡಿಕೇಟ ಒಪ್ಪಿಗೆಯನ್ನು ಸೂಚಿಸಿತು.**

ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–29: ವಿಷಯ–:** ಡಾ. ಕೆ. ಎಂ.. ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಕವಿವಿ, ಧಾರವಾಡ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 101123/2022 ರಲ್ಲಿ ಮಾನ್ಯ ನ್ಯಾಯಾಲಯ ದಿ. 19–04–2022 ರಂದು ನೀಡಿದ ಆದೇಶದ ಪಾಲನೆಯಾಗಿಲ್ಲವೆಂದು ದೂರಿ ನ್ಯಾಯಾಲಯ ನಿಂದನೆ ಪ್ರಕರಣ ಸಂಖ್ಯೆ CCC 100225/2022 (Civil) ದಾಖಲಿಸಿದ ಕುರಿತು.

ಟಿಪ್ಪಣಿ:

ಡಾ. ಕೆ. ಎಂ. ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಕವಿವಿ, ಧಾರವಾಡ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ (ಸಂಖ್ಯೆ 101123/2022) ದಾಖಲಿಸಿ ಅವರಿಗೆ Career Advancement Scheme (CAS) ಅಡಿ ಪ್ರಾಧ್ಯಾಪಕರೆಂದು ಸ್ಟೇಜ V ರಿಂದ VIಕ್ಕೆ ಬಡ್ತಿ ನೀಡಬೇಕೆಂದು ಪ್ರಾರ್ಥಿಸಿದ್ದರು.

ಸದರ ರಿಟ್ ಅರ್ಜಿ ವಿಚಾರಣೆಯ ನಂತರ ದಿ.19–04–2022 ರಂದು ವಿಲೇವಾರಿಗೊಂಡು ಮಾನ್ಯ ನ್ಯಾಯಾಲಯವು ಬಡ್ತಿ ನೀಡುವ ವಿಷಯದಲ್ಲಿ ಅರ್ಜಿದಾರರು ಎರಡು ವಾರದಲ್ಲಿ ಒಂದು ಮನವಿಯನ್ನು ಸಲ್ಲಿಸಬೇಕೆಂದು ಹಾಗೂ ವಿಶ್ವವಿದ್ಯಾಲಯವು ಆ ಮನವಿಯನ್ನು ಕಾನೂನಿನುಸಾರ 3 ತಿಂಗಳೊಳಗಾಗಿ ಪರಿಶೀಲಿಸಬೇಕೆಂದು ಆದೇಶಿಸಿತ್ತು. ಅದರನ್ವಯ ಅರ್ಜಿದಾರರು ದಿ. 05–05–2022 ರಂದು ಮನವಿ ಸಲ್ಲಿಸಿದ್ದರು.

ಅರ್ಜಿದಾರರಿಗೆ ಆ ಮನವಿಯನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿ ದಿ. 30–07–2022 ರಂದು ಒಂದು ಹಿಂಬರಹವನ್ನು ನೀಡಲಾಗಿದೆ. ಆ ದಿ. 05–05–2022ರ ಮನವಿಯನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿ.12–08–2022 ರಂದು ಜರುಗಿದ ವಿಷಯ ಪರಿಣಿತರ ಸಮಿತಿ(Expert Committee) ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಹಾಗೂ ಸಮಿತಿಯು ಸಲ್ಲಿಸಿದ ಶಿಫಾರಸ್ಸನ್ನು ಮುಚ್ಚಿದ ಲಕೋಟೆಯಲ್ಲಿ ದಿ. 20–08–2022 ರಂದು ಜರುಗುವ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಗಿದೆ. ಈ ಮಧ್ಯೆ ಡಾ. ಕೆ.ಎಂ. ಹೊಸಮನಿಯವರು ವಿಶ್ವವಿದ್ಯಾಲಯವು ರಿಟ್ ಅರ್ಜಿ ಸಂಖ್ಯೆ 101123/2022 ರಲ್ಲಿ ಮಾನ್ಯ ನ್ಯಾಯಾಲಯ ದಿ. 19–04–2022 ರಂದು ನೀಡಿದ ಆದೇಶವನ್ನು ಪಾಲನೆ ಮಾಡಿಲ್ಲವೆಂದು ದೂರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ (CCC 100225/2022(Civil) ದಾಖಲಿಸಿದ್ದು, ಸದರ ಪ್ರಕರಣದಲ್ಲಿ ವಿಶ್ವವಿದ್ಯಾಲಯವು ನ್ಯಾಯಾಂಗ ನಿಂದನೆ ನೋಟಿಸಿನ ನಿರೀಕ್ಷಣೆಯಲ್ಲಿದೆ. ಮಾನ್ಯ ಕುಲಪತಿಗಳ ಆದೇಶದಂತೆ ಸದರ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವಂತೆ ಹಾಗೂ ಆಕ್ಷೇಪಣಾ ಪಟ್ಟಿಯನ್ನು ಸಲ್ಲಿಸುವಂತೆ ವಿಶ್ವವಿದ್ಯಾಲಯದ ಯಾದಿಯಲ್ಲಿರುವ ಶ್ರೀ. ಬಸವರಾಜ ಗೊಡಚಿ ವಕೀಲರು, ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇವರನ್ನು ಕೋರಲಾಗಿದೆ. ಸದರ ವಿಷಯವನ್ನು ಸಿಂಡಿಕೇಟ ಸಭೆಯ ಮುಂದೆ ಅವಗಾಹನೆಗಾಗಿ ಮಂಡಿಸಲಾಯಿತು.

## ನಿರ್ಣಯ

***ಡಾ. ಕೆ. ಎಂ. ಹೊಸಮನಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಕವಿವಿ, ಧಾರವಾಡ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 101123/2022 ರಲ್ಲಿ ಮಾನ್ಯ ನ್ಯಾಯಾಲಯ ದಿ. 19–04–2022 ರಂದು ನೀಡಿದ ಆದೇಶದ ಪಾಲನೆಯಾಗಿಲ್ಲವೆಂದು ದೂರಿ ನ್ಯಾಯಾಲಯ ನಿಂದನೆ ಪ್ರಕರಣ ಸಂಖ್ಯೆ CCC 100225/2022 (Civil) ದಾಖಲಿಸಿದ ಬಗ್ಗೆ ಚರ್ಚಿಸಲಾಗಿ ವಿಶ್ವವಿದ್ಯಾಲಯದ ಸದರಿಯವರ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ನೀಡಿದ ಆದೇಶದಂತೆ ಈಗಾಗಲೇ ಕ್ರಮ ಕ್ರಮಕೈಗೊಳ್ಳಲಾಗಿದ್ದು, ಆ ವಿಷಯವಾಗಿ ನ್ಯಾಯಾಂಗ ನಿಂದನೆ ಪ್ರಕರಣ ಪ್ರತಿನಿದಿಸಲು ಹಾಗೂ ಆಕ್ಷೇಪಣಾ ಪಟ್ಟಿಯನ್ನು ಸಲ್ಲಿಸಲು ಶ್ರೀ. ಬಸವರಾಜ ಗೋಡಚಿ, ವಕೀಲರು ಇವರಿಗೆ ವಹಿಸಿರುವುದನ್ನು ಸಿಂಡಿಕೇಟ ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿತು.***

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–30: ವಿಷಯ–**: ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019–20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು–ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ಕುರಿತು.

ದಿನಾಂಕ: 20.12.2019ರ ಸಿಂಡಿಕೇಟ ನಿರ್ಣಯ ನಂ. 24ರಂತೆ ಈ ಕಚೇರಿ ಸಂಖ್ಯೆ 1256 ದಿನಾಂಕ 9.03.2020 ರ ಮೇರೆಗೆ ರೂ. 10,00,000/–(ಹತ್ತು ಲಕ್ಷ) ದಂಡದ ಹಣ ಭರ್ತಿ ಮಾಡಲು ಪ್ರಾಚಾರ್ಯರಿಗೆ ತಿಳಿಸಲಾಯಿತು. ಅದರಂತೆ ಸದರಿಯವರು DU No. C8411995 ದಿನಾಂಕ 10.03.2020 ರಂದು ರೂ. 3,00,000/– (ಮೂರು ಲಕ್ಷ) ಆನ್‌ಲೈನ ಮುಖಾಂತರ ಭರಿಸಿರುತ್ತಾರೆ.

ಮುಂದುವರೆದು, ಸಿಂಡಿಕೇಟ ಸದಸ್ಯರಾದ ಶ್ರೀ ಸುಧೀಂದ್ರ ದೇಶಪಾಂಡೆ ಇವರು ಮರು ಸಿಂಡಿಕೇಟ ಸಭೆಯ ಕಲಂ ಮಂಡಿಸುವಂತೆ ಕೋರಿದ ಪ್ರಯುಕ್ತ ಸಿಂಡಿಕೇಟ ಕಲಂ ನಂ.41 ದಿನಾಂಕ: 23.05.2020 ರ ಸಭೆಯಲ್ಲಿ ಸಮಿತಿ ರಚಿಸಲು ನಿರ್ಣಯಿಸಿದ ಪ್ರಯುಕ್ತ, ಸಿಂಡಿಕೇಟ ವಿಭಾಗದ ಕಚೇರಿ ಟಿಪ್ಪಣಿ ಸಂಖ್ಯೆ: 163 ದಿನಾಂಕ 20.06.2020 ರ ಮುಖಾಂತರ ಶ್ರೀ ಸುಧೀಂದ್ರ ದೇಶಪಾಂಡೆ ಸಿಂಡಿಕೇಟ ಸದಸ್ಯರು ಇವರು ಅಧ್ಯಕ್ಷತೆಯಲ್ಲಿ ಡಾ.(ಶ್ರೀಮತಿ) ಎ.ಎನ್. ತಾಮ್ರಗುಂಡಿ, ಡಾ. ಚಿ.ರಮೇಶ, ಕುಲಸಚಿವರು, ಕವಿವಿ, ಧಾರವಾಡ ಮತ್ತು ಕುಲಸಚಿವರು (ಮೌ.ಮಾ), ಪರೀಕ್ಷಾ ವಿಭಾಗ, ಕವಿವಿ ಧಾರವಾಡ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದರು. ಅದರಂತೆ ಸದರ ಸಮಿತಿಯು ದಿನಾಂಕ 12.08.2020 ರಂದು ಸಮಿತಿಯು ಸಭೆ ಸೇರಿ ವರದಿಯನ್ನು ಸಲ್ಲಿಸಿದರು. (ವರದಿ ಪ್ರತಿ ಲಗತ್ತಿಸಲಾಗಿದೆ.)

ಈ ಮೇಲಿನಂತೆ ವರದಿಯನ್ನು ಸಿಂಡಿಕೇಟ ಸಭೆಗೆ ಮಂಡಿಸಲಾಯಿತು. ಸದರ ಸಿಂಡಿಕೇಟ ನಿರ್ಣಯ ಸಂಖ್ಯೆ. 15 ದಿನಾಂಕ: 21 ಮತ್ತು 22.09.2020 ಈ ಕೆಳಗಿನಂತಿರುತ್ತದೆ.

> "2019–20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ, ಇನ್ನು ಹೆಚ್ಚಿನ ವಿವರಗಳ ಕೊರತೆಯಿಂದಾಗಿ ಸದರಿ ವಿಷಯದ ಚರ್ಚೆಯನ್ನು ಮುಂದೂಡಲಾಯಿತು".

ಈ ಮೇಲಿನಂತೆ ಸಿಂಡಿಕೇಟ ಸಭೆಯು ಮುಂದೂಡಿರುವುದನ್ನು ಮತ್ತೇ ಪುನಃ ಸಿಂಡಿಕೇಟ ಸಭೆಗೆ ಮಂಡಿಸಲಾಯಿತು.

**ಸಿಂಡಿಕೇಟ ಕಲಂ ನಂ 22. ದಿನಾಂಕ: 21.11.2020**

> "ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019–20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ವಿಷಯವನ್ನು ಸಿಂಡಿಕೇಟ ಸಭೆಯು ಮುಂದೂಡಲಾಯಿತು".

**ಸಿಂಡಿಕೇಟ ಕಲಂ ನಂ 05 ದಿನಾಂಕ: 25.02.2021**

> "2019–20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ, ಪ್ರಕರಣದ ಬಗ್ಗೆ ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ವಿಷಯವನ್ನು ಮಂಡಿಸಲು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು ಕುಲಪತಿಗಳು

ದಿನಾಂಕ: 25.02.2021ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ 2019-20ನೇ ಶೈಕ್ಷಣಿಕ ಸಾಲಿನ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಆಡಳಿತ) ಪ್ರಸ್ತಾಪಿಸಿದಾಗ, ಪ್ರಕರಣದ ಬಗ್ಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ/ಸಂಯೋಜನಾ ವಿಭಾಗದಿಂದ ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಕುರಿತು ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ವಿಷಯವನ್ನು ಮರುಮಂಡಿಸಿದೆ.(ಪತಾಕೆ "ಅ")

2019-20ನೇ ಸಾಲಿನಲ್ಲಿ ಬಿ.ಸಿ.ಎ. ಮೊದಲನೇಯ ಹಾಗೂ ಎರಡನೇ ಸೆಮೆಸ್ಟರ್‌ಗೆ ಕವಿವಿ ಪ್ರವೇಶ ನಿಯಮಾವಳಿ ಅವಧಿ ಮುಗಿದ ನಂತರ ಹಾಗೂ ಪ್ರತಿ ಸೆಮೆಸ್ಟರ್‌ಗೆ 45 ಒಳಮಿತಿಗೊಳಪಟ್ಟು(Intake) ಪ್ರವೇಶ ನೀಡಲು ಹಾಗೂ ತದನಂತರ 60 ಮಿತಿಗೊಳಪಟ್ಟು ಸಂಯೋಜನೆ ವಿಭಾಗದಿಂದ ಅನಮತಿಸಲಾಗಿತ್ತು. ಸದರಿ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ನಿರ್ಣಯ ಸಂಖ್ಯೆ. 24 ದಿನಾಂಕ: 20.12.2019ರಲ್ಲಿ ಸದರಿ ಮಹಾವಿದ್ಯಾಲಯಕ್ಕೆ ಸಿಂಡಿಕೇಟನಲ್ಲಿ ರೂ. 10,00,000/-(ಹತ್ತು ಲಕ್ಷ) ಗಳನ್ನು ದಂಡ ವಿಧಿಸಿರುವ ಪ್ರಯುಕ್ತ ಮಹಾವಿದ್ಯಾಲಯವು ದಿನಾಂಕ: 10.03.2020ರಂದು ರೂ. 3,00,000/- ಆನ್‌ಲೈನ ಮುಖಾಂತರ ಭರ್ತಿ ಮಾಡಿ ಕವಿವಿಗೆ ಸಲ್ಲಿಸಿರುತ್ತಾರೆ. ಬಾಕಿ ಉಳಿದ ರೂ. 7,00,000/-ಗಳನ್ನು ಭರಿಸುವ ಕುರಿತು ಪ್ರಾಚಾರ್ಯರು ಪತ್ರ ಮುಖಾಂತರ ಮರು ಪರಿಶೀಲಿಸಲು ಮನವಿ ಸಲ್ಲಿಸಿರುತ್ತಾರೆ. ಅದರಂತೆ 4 ಸಿಂಡಿಕೇಟ ಸಭೆಗಳು ಜರುಗಿದ್ದು, ಸಭೆಗಳಲ್ಲಿ ಚರ್ಚಿಸಿ ಪೂರ್ಣ ವಿವರಗಳ ಟಿಪ್ಪಣಿಯೊಂದಿಗೆ ಮರುಪರಿಶೀಲಿಸಲು ಮುಂದೂಡಲಾಯಿತು. ತದನಂತರ ಪೂರ್ಣ ವಿವರ ಟಿಪ್ಪಣಿಯೊಂದಿಗೆ ಮರುಪರಿಶೀಲಿಸಲು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸಿಂಡಿಕೇಟ ಸಭೆಯ ನಿರ್ಣಯಗಳು ಈ ಕೆಳಗಿನಂತಿರುತ್ತವೆ.

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ. 3 ದಿನಾಂಕ: 29.12.2021**

**"ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು-ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ವಿಷಯವನ್ನು ಮುಂದೂಡಲಾಯಿತು".**

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ. 24 ದಿನಾಂಕ: 15.07.2022**

**"ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019-20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು-ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರೀಶೀಲಿಸುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಹೆಚ್ಚಿನ ವಿವರವನ್ನು ಪಡೆಯುವುದಕ್ಕಾಗಿ ಶ್ರೀ ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರಿಗೆ ಸದರಿ ಮಹಾವಿದ್ಯಾಲಯದ ಸಂಬಂಧಿಸಿದವರೊಂದಿಗೆ ಚರ್ಚಿಸಲು ದಿನಾಂಕ ನಿಗದಿಪಡಿಸಲು ಸೂಚಿಸಿ ಈ ವಿಷಯವನ್ನು ಮುಂದೂಡಲಾಯಿತು".**

ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯದ ಸಿಂಡಿಕೇಟ ಸಭೆಯ ನಿರ್ಣಯ ನಂ. 24 ದಿನಾಂಕ: 15.07.2022 ರ ನಿರ್ಣಯದಂತೆ ಕುಲಸಚಿವರ ಸಮ್ಮುಖದಲ್ಲಿ ದಿನಾಂಕ: 10.08.2022 ರಂದು ಅಗತ್ಯ ದಾಖಲೆಗಳೊಂದಿಗೆ ಚರ್ಚಿಸಲಾಯಿತು. ಚರ್ಚೆಯಲ್ಲಿ ಈ ಕೆಳಗಿನವರು ಭಾಗಿಯಾಗಿದ್ದರು.

1. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಶ್ರೀ ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರು.
3. ಪ್ರಾಚಾರ್ಯರು, ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ.
4. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ., ಧಾರವಾಡ.
5. ಅಧೀಕ್ಷಕರು, ವಿದ್ಯಾಮಂಡಳ(ಎಸ್&ಟಿ) ವಿಭಾಗ, ಕ.ವಿ.ವಿ., ಧಾರವಾಡ.

ಕುಲಸಚಿವರು ಕುಲಪತಿಗಳು

ವಿದ್ಯಾಮಂಡಳ ವಿಭಾಗದ ಹಾಗೂ ಸದರ ಮಹಾವಿದ್ಯಾಲಯದ ಪ್ರಾಚಾರ್ಯರು ಮಂಡಿಸಿದ ದಾಖಲೆಗಳನ್ನು ಮಾನ್ಯ ಕುಲಸಚಿವರು ಕೂಲಂಕುಷವಾಗಿ ಪರಿಶೀಲಿಸಿದರು. ಅದರಂತೆ ಮಾನ್ಯ ಸಿಂಡಿಕೇಟ ಸದಸ್ಯರಾದ ಶ್ರೀ ಸುಧೀಂದ್ರ ದೇಶಪಾಂಡೆ ಮತ್ತು ಮಹಾವಿದ್ಯಾಲಯದ ಪ್ರಾಚಾರ್ಯರು ಸಹಮತ ಸೂಚಿಸಿದರು. ಅಂತಿಮವಾಗಿ ಸಭೆಯ ನಿರ್ಣಯ ಈ ಕೆಳಗಿನಂತಿದೆ;

> "2019-20ನೇ ಸಾಲಿನಲ್ಲಿ ಬಿಸಿಎ ಕೋರ್ಸಿಗೆ ವಿಶ್ವವಿದ್ಯಾಲಯದಿಂದ (ಸಿಡಿಸಿ ವಿಭಾಗ) ಸಂಯೋಜನೆ ಮಂಜೂರಾಗದ ಪೂರ್ವದಲ್ಲಿಯೇ ಮತ್ತು ಒಂದು ವಿದ್ಯಾರ್ಥಿಯ ಪ್ರವೇಶ ಪೂರ್ವದಲ್ಲಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶಾತಿ ನೀಡಿರುವ ಕುರಿತು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿ ಮಹಾವಿದ್ಯಾಲಯದಿಂದಾದ ನಿಯಮಗಳ ಪಾಲನೆ ಲೋಪದ ಹಿನ್ನೆಲೆಯಲ್ಲಿ ವಿಧಿಸುವ ದಂಡದ ಶುಲ್ಕದ ವಿವರ ಈ ಕೆಳಗಿನಂತಿರುತ್ತದೆ".

**Kamadenu BCA College, Karwar**

College Intake-45

ಪ್ರವೇಶಾತಿಗೆ ದಂಡ ಸಹಿತ (ರೂ. 9,240/–) ಕೊನೆಯ ದಿನಾಂಕ 03.08.2019

| Sl.No. | ವಿವರಗಳು | ಭರಿಸಬೇಕಾದ ಶುಲ್ಕ/ದಂಡದ ಶುಲ್ಕ |
|---|---|---|
| 1 | 1 to 30 Before 24.07.2019 with penalty submitted | – |
| 2 | 01 Student admission before 03.08.2019 with penalty submitted | – |
| 3 | 14 ವಿದ್ಯಾರ್ಥಿಗಳ ಪ್ರವೇಶಾತಿ ಕೊನೆಯ ದಿನಾಂಕದ ನಂತರ ಪಡೆದಿದ್ದು, | – |
| 4 | 08 ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಒಳಮಿತಿ ಇರಲಾರದೆ ಪ್ರವೇಶ ಪಡೆದಿರುತ್ತಾರೆ. | – |
| 5 | 01 ವಿದ್ಯಾರ್ಥಿಯ ಅರ್ಹತಾ ಪ್ರವೇಶಾತಿ ಪಡೆಯದೇ ಪ್ರವೇಶಾತಿ ಪಡೆದಿದ್ದು | – |
| 6 | 14 ವಿದ್ಯಾರ್ಥಿಗಳ ಪ್ರವೇಶಾತಿ ಕೊನೆಯ ದಿನಾಂಕದ ನಂತರ ಪಡೆದಿದ್ದಕ್ಕೆ ಪ್ರತಿ ವಿದ್ಯಾರ್ಥಿಗೆ ರೂ. 9,240 + 10,000/–= ರೂ. 19,240 x 14 = | ರೂ. 2,69,360/– |
| 7 | 08 ವಿದ್ಯಾರ್ಥಿಗಳ ಒಳಮಿತಿಗಿಂತ ಹೆಚ್ಚಿಗೆ ಪ್ರವೇಶಾತಿ ಪಡೆದಿರುವುದು. ರೂ. 9,240 + 10,000 = 19,240 x 8 (Rs. 10,000/- Penalty of Vice-Chancellor's Discretionary Power) | ರೂ. 1,53,920/– |
| 8 | Late Submission of days from 03.08.2019 to 08.12.2019 = 128 days<br>(August, 29, Sept. 30, Oct. 31, Nov. 30 and Dec. 08)<br>Late Submission days 128 x 120 | Rs. 15,360/- |
| 9 | Eligibilities = 25,000 + 1,100 | Rs. 26,100/- |
| | **Total** | **Rs. 4,64,740/-** |

ದಿನಾಂಕ: 15.7.2022 ರ ಸಿಂಡಿಕೇಟ ಸಭೆಯ ನಿರ್ಣಯದಂತೆ, ದಿನಾಂಕ: 10.08.2022 ರಂದು ಕುಲಸಚಿವರ ಸಮ್ಮುಖದಲ್ಲಿ ದಾಖಲೆಗಳ ಸಮೇತ ಪರಿಶೀಲನೆಯಂತೆ ಸದರ ಮಹಾವಿದ್ಯಾಲಯದ ಪ್ರಾಚಾರ್ಯರು ಒಟ್ಟು ಶುಲ್ಕ/ದಂಡದ ಶುಲ್ಕ ರೂ.4,64,740/– ಭರಿಸಬೇಕಾಗಿದ್ದು ಈ ವಿಷಯದ ಪರಿಶೀಲನೆಗೆ ಪುನರ್ ಪರಿಶೀಲನೆಗೆ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಯಿತು.

## <u>ನಿರ್ಣಯ</u>

ಸಮಯದ ಅಭಾವದ ಕಾರಣ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–31: ವಿಷಯ–:** ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.

**ಪ್ರಸ್ತಾವನೆ :**

ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರ ತಂದೆಯಾದ ದಿವಂಗತ ಶ್ರೀ ಸಿದ್ದಪ್ಪ ರಾಮಪ್ಪ ಧಾರವಾಡ ಇವರು ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕವಿವಿ, ಧಾರವಾಡ ಇಲ್ಲಿ ವಾಹನ ಚಾಲಕ ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ 25.05.2022 ರಂದು ನಿಧನರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ 20.07.2022 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ದಿವಂಗತ ಶ್ರೀ ಸಿದ್ದಪ್ಪ ರಾಮಪ್ಪ ಧಾರವಾಡ ಇವರು ದಿನಾಂಕ 28.02.2003 ರಂದು ವಾಹನ ಚಾಲಕ ಹುದ್ದೆಗೆ ನೇಮಕಾತಿ ಹೊಂದಿದವರಾಗಿರುತ್ತಾರೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ.

ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ದಿನಾಂಕ: 12.09.1996 ರ ಸರ್ಕಾರದ ಅಧಿಸೂಚನೆ ನಂ.ಡಿಪಿಎಆರ್/100/ ಎಸ್‌ಸಿಎ/95 ರ ಮೂಲಕ ಕೆ.ಸಿ.ಎಸ್. (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಹಾಗೂ ತತ್ಸಂಬಂಧಿತ ತಿದ್ದುಪಡಿ ನಿಯಮಗಳು/ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

*3) Eligibility for Appointment:*

(1) Appointment on compassionate grounds under these rules shall not be claimed as a matter of right and shall not be given as a matter of course.

(2) Appointment under these rules shall be restricted to the dependent of a deceased Government Servant in the following order of preference, namely:

[2][(i) in the case of the deceased male Government Servant:

(a) the widow;

(b) a son, if widow is not eligble or for any valid reason she is not willing to accept the appointment;

(c) an unmarried daughter, if the widow and son are not eligible or for any valid reason they are not willing to accept the appointment.]

1[(d) a widowed daughter, if the widow, son and unmarried daughter are not eligible or for any valid reason they are not willing to accept the appointment;]

2[(ii) in the case of the deceased female Government Servant:

(a) a son;

(b) an unmarried daughter, if the son is not eligible or for any valid reason he is not willing to accept the appointment;

(c) the widower, if the son and daughter are not eligible or for any valid reason they are not willing to accept in the appointment.]

[1][(d) a widowed daughter, if the widower, son and unmarried daughter are not eligible or for any valid reason they are not willing to accept the appointment.]

(3) An adoped daughter, if the widower, son and unmarried daughter are not eligible for appointment under these rules.

[3](4) A person against whom at the time of making application a criminal case is under investigation of trial on the charge of having committed murder of the deceased Government Servant or for abetting the commission of such offence shall not be eligible for appointment under these rules.]

ಮೇಲ್ಕಾಣಿಸಿದ 3 ರ ನಿಯಮದ ಉಪ ನಿಯಮ 2(2)(i)(a) ಪ್ರಕಾರ ನಿಧನ ಹೊಂದಿದ ಪುರುಷ ಸರ್ಕಾರಿ ನೌಕರನ ಪತ್ನಿ ಅಥವಾ ಒಂದು ವೇಳೆ ಯಾವುದೋ ಕಾರಣಕ್ಕೆ ಪತ್ನಿ ನೇಮಕಾತಿ ಬಯಸದಿದ್ದಲ್ಲಿ ಮಗನಿಗೆ, ಒಂದು ವೇಳೆ ಮಗನಿಗೆ ಅರ್ಹತೆ ಇಲ್ಲದಿದ್ದಲ್ಲಿ, ಅಥವಾ ಇನ್ನಾವುದೇ ಯುಕ್ತ ಕಾರಣಗಳಿಂದಾಗಿ ಅವನು ನೇಮಕಾತಿ ಬಯಸದಿದ್ದಲ್ಲಿ ವಿಧುರನಿಗೆ, ಒಂದು ವೇಳೆ ವಿಧುರ, ವಿವಾಹಿತ ಮಗ ಹಾಗೂ ಮಗಳಿಗೆ ಅರ್ಹತೆಯು ಇಲ್ಲದಿದ್ದಲ್ಲಿ ಅಥವಾ ಇನ್ನಾವುದೇ ಯುಕ್ತ ಕಾರಣಗಳಿಗಾಗಿ

ಕುಲಸಚಿವರು

ಕುಲಪತಿಗಳು

ಅವರುಗಳು ನೇಮಕಾತಿಗೆ ಬಯಸದಿದ್ದಲ್ಲಿ ವಿಧವೆ ಮಗಳಿಗೆ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ತಿದ್ದುಪಡಿ ಆದೇಶ ದಿನಾಂಕ: 09.06.2021 ರ ಪ್ರಕಾರ ವಿವಾಹಿತ ಮಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಲು ಅವಕಾಶವಿದೆ.

ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ RD5014813038186 ದಿನಾಂಕ 13.07.2022 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

| ಹೆಸರು | ವಯಸ್ಸು | ಮೃತರ ಜೊತೆಗೆ ಸಂಬಂಧ | ವೈವಾಹಿಕ ಸ್ಥಿತಿ |
|---|---|---|---|
| ಶ್ರೀಮತಿ ಕರೆವ್ವ ಕೋಂ. ಸಿದ್ದಪ್ಪ ಧಾರವಾಡ | 44 | ಪತ್ನಿ | ವಿಧವೆ/ವಿಧುರ |
| ಶ್ರೀಮತಿ ರೇಖಾ ಕೋಂ. ಹನಮಂತ ಕಿಲ್ಲೇದಾರ | 27 | ಮಗಳು | ವಿವಾಹಿತೆ |
| ಕುಮಾರಿ ಸಂಗೀತಾ ಸಿದ್ದಪ್ಪ ಧಾರವಾಡ | 25 | ಮಗಳು | ಅವಿವಾಹಿತೆ |
| ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ | 21 | ಮಗ | ಅವಿವಾಹಿತ |
| ಕುಮಾರಿ ಅಕ್ಷತಾ ಸಿದ್ದಪ್ಪ ಧಾರವಾಡ | 18 | ಮಗಳು | ಅವಿವಾಹಿತೆ |

ಮೇಲೆ ಓದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಮಗನಾದ ಹಾಗೂ ಅರ್ಜಿದಾರರಾದ ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರು ನೇಮಕಾತಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದನ್ನು ಪರಿಶೀಲಿಸಬಹುದಾಗಿದೆ. ಮುಂದುವರೆದು, ಮೇಲ್ಕಾಣಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದಲ್ಲಿ ಕಾಣಿಸಲಾದ ಅರ್ಜಿದಾರರ ತಾಯಿಯಾದ ಶ್ರೀಮತಿ ಕರೆವ್ವ ಕೋಂ. ಸಿದ್ದಪ್ಪ ಧಾರವಾಡ ಮತ್ತು ಸಹೋದರಿಯರಾದ ಶ್ರೀಮತಿ ರೇಖಾ ಕೋಂ. ಹನಮಂತ ಕಿಲ್ಲೇದಾರ, ಕುಮಾರಿ ಸಂಗೀತಾ ಸಿದ್ದಪ್ಪ ಧಾರವಾಡ ಮತ್ತು ಕುಮಾರಿ ಅಕ್ಷತಾ ಸಿದ್ದಪ್ಪ ಧಾರವಾಡ ಇವರುಗಳು ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ತಮ್ಮ ಅಭ್ಯಂತರವಿಲ್ಲವೆಂದು ಪ್ರತ್ಯೇಕವಾಗಿ ನೋಟರಿ ಮಾಡಿಸಿದ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಸದರಿ ಸರ್ಕಾರಿ ಆದೇಶದ ನಿಯಮ (4) ಕೆಳಗಿನಂತಿರುತ್ತದೆ.

*4) Conditions of Appointment:*

Appointment on compassionate grounds under these rules shall be subject to the following conditions namely:

(1) The family of the deceased Government Servant should be in a financial crisis or destitution.

Explaintion : (a) Family of deceased Government Servent shall be considered to be in financial crisis or destitution if the recurring monthly income of the family from all sources is less than the total emoluments including Dearness allowance, House Rent Allowance and City Compensatory Allowance admissible at Bangalore on the average of the minimum and the maximum of the scale of pay of the post of the First Division Assistant, as on the date of making application for compassionate appointment. For calcalating such monthly income, the income from family pension, lumpsum pensionary benefits and interest earned thereon shall be excluded.

(b) Recurring monthly income form all sources other than family pension, lumpsum pensionary benefits and the interest earned thereon, of the family for the purpose of this rule shall be computed by the Head of the Office or the Head of the Department or the appointing authority.

(i) on the basis of the last annual property return filed by the deceased Government Servant and if, for any reason it is not available, on the basis of the certificate of income issued by a Revenue Officer not below the rank of Tashildar, and

(ii) in case any member of the family of the deceased Government Servant is employed in any State or Central Government Service or a public or private sector undertaking or a private establishment, on the basis of a certificate issued by his employer and in case such member is self employed on the basis of certificate issued by a revenue officer not below the rank of Tahsildar.

ಕುಲಸಚಿವರು

ಕುಲಪತಿಗಳು

[1][Provided that, nothing in sub-rule (i), shall apply to Government Servants belonging to Group-C & D]

ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 9-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ಅಡಚಣೆಯಲ್ಲಿರಬೇಕೆಂಬ ಮತ್ತು ಅವರು ಈ ನಿಟ್ಟಿನಲ್ಲಿ ಆದಾಯ ಪ್ರಮಾಣಪತ್ರ ಸಲ್ಲಿಸುವ ಷರತ್ತು ಗ್ರೂಪ್-'ಸಿ' ಮತ್ತು 'ಡಿ'ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ತಿದ್ದುಪಡಿಗೊಂಡಿರುತ್ತದೆ. ಪ್ರಸ್ತುತ ಪ್ರಕರಣಗದಲ್ಲಿ ಮೃತರಾಗಿರುವ ದಿವಂಗತ ಶ್ರೀ ಸಿದ್ದಪ್ಪ ರಾಮಪ್ಪ ಧಾರವಾಡ ಇವರು ಗ್ರೂಪ್ 'ಸಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ ಕುಟುಂಬದ ಅರ್ಥಿಕ ಪರಿಸ್ಥಿತಿ ಪರಿಗಣನೆಗೆ ಬರುವುದಿಲ್ಲ

(2) Person seeking be within the age limit specified for the post in the relevant rules of recruitment specilly made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೆನೆನಿ 2008 ದಿನಾಂಕ: 15.01.2009 ರ ಪ್ರಕಾರ ಸದರಿಯವರು ಪರಿಶಿಷ್ಟ ಪಂಗಡ (ವಾಲ್ಮೀಕಿ) ವರ್ಗದ ಅಭ್ಯರ್ಥಿಯಾಗಿದ್ದು, ಸದರಿ ನೇಮಕಾತಿಗೆ 40 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಪರಿಶಿಷ್ಟ ಪಂಗಡ (ವಾಲ್ಮೀಕಿ) ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಚಾರ್ಯರು, ವಿಶ್ವೇಶ್ವರಯ್ಯಾ ಪಿ.ಯು. ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರ ದಿನಾಂಕ 05.08.2022 ರಂದು ಸ್ವೀಕೃತವಾಗಿದ್ದು, ಅದರ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 30.05.2001 ಇದ್ದು ಅರ್ಜಿ ಸಲ್ಲಿಸಿದ ದಿನದಂದು 21 ವರ್ಷ 01 ತಿಂಗಳು 20 ದಿನಗಳು ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Sceretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಪೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಸಿ' ವೃಂದದ ಕಿರಿಯ ಸಹಾಯಕ ಹುದ್ದೆಗೆ ಅಥವಾ 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.

ಅದರ ಅನುಸಾರ ಅರ್ಜಿದಾರರ ಶೈಕ್ಷಣಿಕ ಅರ್ಹತೆಯು ದ್ವಿತೀಯ ಪಿ.ಯು.ಸಿ. ಪ್ರಮಾಣ ಪತ್ರವನ್ನು ದೃಢೀಕರಿಸಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಂಕಪಟ್ಟಿಗಳನ್ನು ಕಳುಹಿಸಲಾಗಿತ್ತು. ಅದಕ್ಕೆ ಸಹಾಯಕ ನಿರ್ದೇಶಕರು(ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ತಮ್ಮ ಪತ್ರ ಪ.ಪೂ.ಶಿ./ದ್ವಿಪ್ರಶಾ/ಅಪಪ/2022-23/ ದಿನಾಂಕ 30.07.2022 ರ ಮೂಲಕ, ದ್ವಿತೀಯ ಪಿ.ಯು.ಸಿ. ಪ್ರಮಾಣಪತ್ರ ಈ ಇಲಾಖೆಯ ದಾಖಲೆಗಳೊಡನೆ ಪರಿಶೀಲಿಸಲಾಗಿ ಅದು ನೈಜವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

***(5) Application for Appointment :***

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may be notified by the Government, from time to time, to the Head of the Department under whom the deceased Government servant was working.

ಕುಲಸಚಿವರು ಕುಲಪತಿಗಳು

[Provided that in the case of a minor he must have attained the age of eighteen years within two years from the date of death of the Government Servant and he must make an application within two years thereafter.]

ಅರ್ಜಿದಾರರ ತಂದೆ ಹಾಗೂ ಈ ವಿಶ್ವವಿದ್ಯಾಲಯದ ನೌಕರರರಾದ ದಿವಂಗತ ಶ್ರೀ ಸಿದ್ದಪ್ಪ ರಾಮಪ್ಪ ಧಾರವಾಡ ಇವರು ದಿನಾಂಕ 25.05.2022 ರಂದು ನಿಧನರಾಗಿರುತ್ತಾರೆಂದು. ಸರ್ಕಾರದ ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ಸಂಖ್ಯೆ. 803083/ಟ/ಡಿ/2022/003825 ದಿನಾಂಕ 04.06.2022 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

***(6) Appointment by the Competent Authority :***

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment undere sub-rule (1) shall be made as far as possible within a period of three months from the date of receipt of the application under rule 5.

ಮೇಲಿನ ಸಂಪೂರ್ಣ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳು ಮತ್ತು ಅರ್ಜಿದಾರರು ಸಲ್ಲಿಸಿದ ದಾಖಲೆಗಳ ಅನುಸಾರ ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣಗೊಂಡಿರುವುದರಿಂದ ಈ ನಿಟ್ಟಿನ ಕವಿವಿ ಅನುಶಾಸನ ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕ ಮಾಡುವ ಕುರಿತು ಪ್ರಸ್ತಾವನೆಯನ್ನು ತಮ್ಮ ಸೂಕ್ತ ಪರಿಶೀಲನೆಗಾಗಿ ಹಾಗೂ ಆದೇಶಕ್ಕಾಗಿ ಮಂಡಿಸಲಾಗಿದೆ.

ಶ್ರೀ ಬಸವರಾಜ ಸಿದ್ದಪ್ಪ ಧಾರವಾಡ ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣಗೊಂಡಿರುವುದರಿಂದ ಮೇಲ್ಕಾಣಿಸಿದ ಕವಿವಿ ಅನುಶಾಸನವನ್ನು ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕ ಮಾಡುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

ದಿವಂಗತ ಶ್ರೀ. ಸಿದ್ದಪ್ಪ ರಾಮಪ್ಪ ಧಾರವಾಡ, ವಾಹನ ಚಾಲಕರು ಇವರು ನಿಧನರಾಗಿರುವುದರಿಂದ ಶ್ರೀ. ಬಸವರಾಜ ಸಿದ್ದಪ್ಪ ಧಾರವಾಡ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಮುಂದಿನ ಹುದ್ದೆಗೆ ಬಡ್ತಿ ಹೊಂದಲು ಇಲಾಖಾ ಪರೀಕ್ಷೆ ಉತ್ತೀರ್ಣರಾಗುವ ಷರತ್ತಿಗೊಳಪಟ್ಟು ಪ್ರಸ್ತಾವನೆಗೆ ಅನುಮೋದನೆ ನೀಡಲು ಸಿಂಡಿಕೇಟ್ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-32: ನಿರ್ಣಯ-:

ಶ್ರೀ. ಯಶಪಾಲ ಕ್ಷೀರಸಾಗರ, ಕುಲಸಚಿವರು (ಆಡಳಿತ) ಇವರು ವಿಶ್ವವಿದ್ಯಾಲಯಕ್ಕೆ ಕುಲಸಚಿವರೆಂದು ನೇಮಕ ಹೊಂದುವ ಮೊದಲು ಪಿಎಚ್.ಡಿ.ಗಾಗಿ ನೊಂದಣಿ ಮಾಡಿದ್ದು ಕೋರ್ಸ್‌ವರ್ಕ ಮಾಡಿಕೊಂಡು ವಿಶ್ವವಿದ್ಯಾಲಯವು ಕೈಗೊಳ್ಳುವ ಕೋರ್ಸ್‌ವರ್ಕ ಪರೀಕ್ಷೆಗಾಗಿ ಹಾಜರಾಗಲು ಅನುಮತಿ ನೀಡುವ ಬಗ್ಗೆ ಚರ್ಚಿಸಲು ಶ್ರೀ. ಯಶಪಾಲ ಕ್ಷೀರಸಾಗರ, ಕುಲಸಚಿವರು (ಆಡಳಿತ) ಇವರನ್ನು ಸಭೆಯಿಂದ ಹೊರಗಡೆ ಕಳುಹಿಸಲಾಗಿ ಸುದೀರ್ಘವಾಗಿ ಚರ್ಚಿಸಲಾಯಿತು. ಕಾನೂನು ತಜ್ಞರ ಸಲಹೆಯನ್ನು ಪಡೆದಂತೆ, ಕೋರ್ಸ್‌ವರ್ಕ ಪರೀಕ್ಷೆಗಾಗಿ ಹಾಜರಾಗಲು ಅನುಮತಿಸಲು ಅವಕಾಶಗಳಿದ್ದರೂ ಸಹ ಶ್ರೀ. ಯಶಪಾಲ ಕ್ಷೀರಸಾಗರ ಇವರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಕುಲಸಚಿವರ ಹುದ್ದೆಯಿಂದ ನಿರ್ಗಮಿಸುವವರೆಗೂ ಸದರಿಯವರಿಗೂ ಹಾಗೂ ಅವರ ಧರ್ಮಪತ್ನಿ ಶ್ರೀಮತಿ. ಸೋನಲ್ ವೃಷ್ಣಿ ಇವರಿಗೂ ಪಾರದರ್ಶಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೋರ್ಸ್‌ವರ್ಕ ಪರೀಕ್ಷೆಗೆ ಅನುಮತಿಯನ್ನು ನೀಡಬಾರದೆಂದು ಖುದ್ದಾಗಿ ಶ್ರೀ. ಯಶಪಾಲ ಕ್ಷೀರಸಾಗರ ಇವರು ಸಿಂಡಿಕೇಟಗೆ ಮನವಿಯನ್ನು ಮಾಡಿಕೊಂಡಂತೆ ಸಿಂಡಿಕೇಟ ಒಪ್ಪಿಗೆಯನ್ನು ಸೂಚಿಸಿ ಅನುಮೊದಿಸಿತು. ಮುಂದುವರೆದು, ಸದರಿಯವರು ಕುಲಸಚಿವರು (ಆಡಳಿತ) ಹುದ್ದೆಯಿಂದ ನಿರ್ಗಮಿಸಿದ ಅಥವಾ ವರ್ಗಾವಣೆ ಹೊಂದಿದ ನಂತರ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿವರುಗಳ ಭವಿಷ್ಯದ ಹಿತದೃಷ್ಠಿಯಿಂದ ಟರ್ಮ ಶುಲ್ಕಗಳನ್ನು ಭರಿಸುವುದರೊಂದಿಗೆ ಸದರಿ ಇರ್ವರ ನೊಂದಣಿಯನ್ನು ಮುಂದುವರೆಸಲು ಅನುಮೋದಿಸಿತು.

ಕಲಂ ಸಂಖ್ಯೆ-33: ನಿರ್ಣಯ-:

ಶ್ರೀ. ಯಶಪಾಲ ಕ್ಷೀರಸಾಗರ, ಕುಲಸಚಿವರು (ಆಡಳಿತ) ಇವರು 5 ಸೆಪ್ಟೆಂಬರ ದಿಂದ 30 ಸೆಪ್ಟೆಂಬರ 2022 ರವರಗೆ **"Indira Gandhi National Forest Academy"** ವತಿಯಿಂದ ಭೂಪಾಲದಲ್ಲಿ ನಡೆಯುವ **"Indian Forest Service Officers for Mid-Career Training (MCT) Phase-III"** ಗೆ ತರಬೇತಿಗೆ ನಿಯೋಜನೆಗೊಂಡಿರುವ ಪ್ರಯುಕ್ತ ಕಡ್ಡಾಯವಾಗಿ ಹಾಜರಾಗಬೇಕಾಗಿರುವುದರಿಂದ ಸದರಿಯವರಿಗೆ 25 ದಿನಗಳ ಓಓಡಿ (ಕಚೇರಿಯ ಅನ್ಯ ಕಾರ್ಯ ನಿಮಿತ್ತ) ತರಬೇತಿಗೆ ತೆರಳಲು ಒಪ್ಪಿಗೆಯನ್ನು ಸೂಚಿಸಿ ದಿನಾಂಕ 05-09-2022 ರಿಂದ 30-09-2022 ರವರೆಗೆ ಕುಲಸಚಿವರು (ಆಡಳಿತ) ಇವರ ಕಾರ್ಯಭಾರವನ್ನು ಹಾಲಿ ಕುಲಸಚಿವರು (ಮೌಲ್ಯಮಾಪನ) ಇವರಿಗೆ ಹಣಕಾಸಿನ ಅಧಿಕಾರದೊಂದಿಗೆ **(Financial Power)** ಪ್ರಭಾರ ವಹಿಸಲು ಸಿಂಡಿಕೇಟ ಒಮ್ಮತದೊಂದಿಗೆ ಒಪ್ಪಿಗೆಯನ್ನು ಸೂಚಿಸಿತು.

ಕಲಂ ಸಂಖ್ಯೆ-34: ನಿರ್ಣಯ-:

**Syndicate considered and approved the proposal for permitting Dr. Devaraju K.S., Professor, Department of Bio-Chemistry to attend collaboration research work to be held in University of Maraland School of Medicine, USA and sanctioning of duty leave from 29.08.2022 to 08.11.2022 without any financial commitment on the part of the University. Further, he is directed to complete the teaching syallbus before leaving to USA and no TA and GF will be provided for completing his remaining teaching work. If needed, workload of Dr. Devaraju K.S. be distributed among the working teaching staff in the Department with proper approval.**

ಕುಲಸಚಿವರು

ಕುಲಪತಿಗಳು